ಬುಧವಾರ, ಜನವರಿ 26, 2022 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪೌಷ್ಟಿಕ ಆಹಾರ ಸೇವಿಸಿ

75 ಸರ್ಕಾರಿ ಶಾಲೆಗಳಿಗೆ 'ನೇತಾಜಿ ಅಮೃತ ಶಾಲೆ' ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರತಿ ಜಿಲ್ಲೆಯಿಂದ ಕನಿಷ್ಠ 2ರಂತೆ ಒಟ್ಟು 75 ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿ 'ನೇತಾಜಿ ಅಮೃತ ಶಾಲೆಗಳು' ಎಂದು ಘೋಷಿಸಲು ಮತ್ತು ಈ ಶಾಲೆಗಳಲ್ಲಿ ಎನ್‌ಸಿಸಿ ಘಟಕಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

'ನೇತಾಜಿ ಅಮೃತ ಶಾಲೆಗಳು' ಎಂದು ಘೋಷಿಸಲಾಗುವ ಪ್ರತಿ ಶಾಲೆಯಿಂದ 100 ವಿದ್ಯಾರ್ಥಿಗಳಂತೆ ಒಟ್ಟು 7,500 ವಿದ್ಯಾರ್ಥಿಗಳಿಗೆ ಎನ್‌ಸಿಸಿ ತರಬೇತಿ ನೀಡಲು ಉದ್ದೇಶಿಸಲಾಗಿದೆ. ತರಬೇತಿಗೆ ಒಬ್ಬ ವಿದ್ಯಾರ್ಥಿಗೆ ತಗಲುವ ವೆಚ್ಚ ತಲಾ ₹ 12 ಸಾವಿರದಂತೆ ಒಟ್ಟು 9 ಕೋಟಿ ಅನುದಾನ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ.

ಸದ್ಯ ರಾಜ್ಯದಲ್ಲಿ 44 ಸಾವಿರಗಳಲ್ಲಿ ಶಾಲೆಗಳಲ್ಲಿ ಮತ್ತು 3,400 ಕಾಲೇಜುಗಳಲ್ಲಿ ಸೇರಿ ಒಟ್ಟು 78 ಸಾವಿರ ಎನ್‌ಸಿಸಿ ಘಟಕಗಳಿವೆ. ಎನ್‌ಸಿಸಿ ಪುನಶ್ಚೇತನಗೊಳಿಸುವ ಮತ್ತು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125ನೇ ಜನ್ಮ ದಿನಾಚರಣೆ ಕುರಿತಂತೆ ಇದೇ 23ರಂದು ಎನ್‌ಸಿಸಿ ಕಮಾಂಡರ್ ಪಿ.ಎಸ್. ಕನ್ವಾರ್ ಅವರ ಜೊತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚರ್ಚೆ ನಡೆಸಿದ್ದರು. ಈ ವೇಳೆ ತೆಗೆದುಕೊಂಡ ತೀರ್ಮಾನಂತೆ 'ನೇತಾಜಿ ಅಮೃತ ಶಾಲೆಗಳು' ಎಂದು ಘೋಷಿಸಿ, ಎನ್‌ಸಿಸಿ ಘಟಕಗಳನ್ನು ಸ್ಥಾಪಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೋವಿಡ್: ಮೃತರ ಸಂಖ್ಯೆ 52ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಡುವವರ ಸಂಖ್ಯೆಯೂ ಹೆಚ್ಚಳವಾಗಿದ್ದು, ಸೋಂಕಿತರಲ್ಲಿ 52 ಮಂದಿ ಮೃತಪಟ್ಟಿರುವುದು ಮಂಗಳವಾರ ದೃಢಪಟ್ಟಿದೆ.

ಏಳು ತಿಂಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಮರಣ ಪ್ರಕರಣಗಳು ಇವಾಗಿವೆ. ಒಂದು ದಿನದ ಅವಧಿಯಲ್ಲಿ 1.55 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 41,400 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 26.70 ರಷ್ಟಿದೆ.

ಅತ್ಯುತ್ತಮ ಸೇವೆ: ರಾಜ್ಯದ 21 ಪೊಲೀಸರಿಗೆ ರಾಷ್ಟ್ರಪತಿ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ರಾಜ್ಯದ ಎಡಿಜಿಪಿಗಳು ಸೇರಿದಂತೆ 21 ಪೊಲೀಸರಿಗೆ 2022ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ. ಗಣರಾಜ್ಯೋತ್ಸವ ದಿನಾದಂದು ಪದಕ ಪ್ರದಾನ ಕಾರ್ಯಕ್ರಮ ಜರುಗಲಿದೆ. ಪದಕ ಪಡೆದವರ ವಿವರ ಇಲ್ಲಿದೆ.

2022ನೇ ಸಾಲಿನ ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕ


ಬಿ.ದಯಾನಂದ
ಎಡಿಜಿಪಿ, ರಾಜ್ಯಗುಪ್ತದಳ


ಆರ್. ಹಿತೇಂದ್ರ,
ಎಡಿಜಿಪಿ, ಅಪರಾಧ ಮತ್ತು ತಾಂತ್ರಿಕ ಸೇವೆ

2022ನೇ ಸಾಲಿನ ರಾಷ್ಟ್ರಪತಿ ಶ್ಲಾಘನೀಯ ಸೇವಾ ಪದಕ


ಡಾ. ಬಿ.ಆರ್. ರವಿಕಾಂತೇಗೌಡ,
ಜಂಟಿ ಕಮಿಷನರ್ (ಸಂಚಾರ), ಬೆಂಗಳೂರು


ಆರ್. ಜನಾರ್ದನ್
ಕಮಾಂಡೆಂಟ್, ಕೆಎಸ್‌ಆರ್‌ಪಿ 5ನೇ ಪಡೆ, ಮೈಸೂರು


ಡಿ. ಕುಮಾರ್
ಎಸಿಪಿ, ಬೆಂಗಳೂರಿನ ಹಲಸೂರು ಉಪವಿಭಾಗ


ಪಿ. ರವಿ ಪ್ರಸಾದ್
ಡಿವೈಎಸ್ಪಿ, ಮೈಸೂರಿನ ಹುಣಸೂರು ಉಪ ವಿಭಾಗ



ವೆಂಕಟಪ್ಪ ನಾಯಕ ಓಲೇಕಾರ್
ಡಿವೈಎಸ್ಪಿ, ಸಿಂಧನೂರು ಉಪ ವಿಭಾಗ


ಮಲ್ಲೇಶಯ್ಯ
ಡಿವೈಎಸ್ಪಿ, ಬೆಂಗಳೂರು ಆನೇಕಲ್ ಉಪವಿಭಾಗ



ಕೆ.ಎನ್. ಯಶವಂತಕುಮಾರ್,
ಡಿವೈಎಸ್ಪಿ, ಸಿಐಡಿ ಸೈಬರ್ ಕ್ರೈಂ


ಬಿ.ಎಂ. ಗಂಗಾಧರ್
ಎಸಿಪಿ, ಕಲಬುರಗಿ ಸಿಸಿಆರ್‌ಬಿ


ಕೆ.ಎಂ. ರಮೇಶ್,
ಡಿವೈಎಸ್ಪಿ, ಲೋಕಾಯುಕ್ತ


ಬಿ.ಕೆ. ಶೇಖರ್
ಡಿವೈಎಸ್ಪಿ, ಸಿಐಡಿ


ಎಸ್. ಕೃಷ್ಣಮೂರ್ತಿ
ಇನ್‌ಸ್ಪೆಕ್ಟರ್, ಲೋಕಾಯುಕ್ತ


ಸಿ.ಎಸ್. ಸಿಂಪಿ
ಸ್ಪೆಷಲ್ ಎಆರ್‌ಎಸ್‌ಐ, ಕೆಎಸ್‌ಆರ್‌ಪಿ 1ನೇ ಪಡೆ, ಬೆಂಗಳೂರು


ಜಿ.ವಿ. ವೆಂಕಟೇಶಪ್ಪ
ಹೆಡ್ ಕಾನ್‌ಸ್ಟೆಬಲ್, ರಾಜ್ಯಗುಪ್ತದಳ


ಎಚ್.ಆರ್. ಮುನಿರಾಜಯ್ಯ,
ಎಎಸ್‌ಐ, ಅಪರಾಧ ಶಾಖೆ, ಬೆಂಗಳೂರು


ಮಾರುತಿ ಶಂಕರ್ ಜೋಗದಂಕರ್
ಎಎಸ್‌ಐ, ಡಿಸಿಆರ್‌ಬಿ, ಗದಗ


ವಿಜಯ್ ಕಾಂಚನ್
ಎಎಸ್‌ಐ, ಮಂಗಳೂರು ಪೂರ್ವ ಪೊಲೀಸ್ ಠಾಣೆ


ಶಂಕರರಾವ್ ಮಾರುತಿರಾವ್ ಶಿಂಧೆ
ಹೆಡ್ ಕಾನ್‌ಸ್ಟೆಬಲ್, ಬೆಳಗಾವಿ ಖಡೇಬಜಾರ್


ದಸ್ತಗೀರ್ ಮೊಹಮ್ಮದ್ ಹನೀಫ್ ಘೋರಿ,
ಎಆರ್‌ಎಸ್‌ಐ, ಡಿಎಆರ್, ಬೆಳಗಾವಿ


ಲಿಂಗರಾಜಪ್ಪ
ಹೆಡ್ ಕಾನ್‌ಸ್ಟೆಬಲ್, ಮೈಸೂರಿನ ಎನ್‌ಆರ್ ಉಪವಿಭಾಗ

939 ಮಂದಿಗೆ ರಾಷ್ಟ್ರಪತಿಗಳ ಪೊಲೀಸ್ ಪದಕ, ಶೌರ್ಯ ಪ್ರಶಸ್ತಿ

ನವದೆಹಲಿ (ಪಿಟಿಐ): ಗಣನೀಯ ಸೇವೆಗಾಗಿ 189 ಮಂದಿಗೆ ಶೌರ್ಯ ಪ್ರಶಸ್ತಿ ಸೇರಿ 939 ಪೊಲೀಸ್ ಸಿಬ್ಬಂದಿಯನ್ನು ಕೇಂದ್ರ ಸರ್ಕಾರ ಗಣರಾಜ್ಯೋತ್ಸವದ ಮುನ್ನಾ ದಿನವಾದ ಮಂಗಳವಾರ ಪೊಲೀಸ್ ಪದಕಕ್ಕಾಗಿ ಆಯ್ಕೆ ಮಾಡಿದೆ.

ಶೌರ್ಯ ಪ್ರಶಸ್ತಿ ಪುರಸ್ಕೃತ 189 ಸಿಬ್ಬಂದಿಯಲ್ಲಿ 134 ಮಂದಿಯನ್ನು ಜಮ್ಮು ಮತ್ತು ಕಾಶ್ಮೀರ ಪ್ರದೇಶದಲ್ಲಿ ಸೇವಾ ಹಂತದಲ್ಲಿ ತೋರಿದ ಶೌರ್ಯಕ್ಕಾಗಿ ಆಯ್ಕೆ ಮಾಡಲಾಗಿದೆ. 47 ಮಂದಿ ಈಶಾನ್ಯ ವಲಯದಲ್ಲಿ ಕಾರ್ಯನಿರ್ವಹಿಸಿದವರು.

ಶೌರ್ಯ ಪ್ರಶಸ್ತಿ, ರಾಷ್ಟ್ರಪತಿಗಳ ಪೊಲೀಸ್ ಪದಕ ಪುರಸ್ಕೃತರ ಪಟ್ಟಿಯನ್ನು ಕೇಂದ್ರ ಗೃಹ ಸಚಿವಾಲಯವು ಪ್ರಕಟಿಸಿದೆ. 88 ಮಂದಿಗೆ ಸೇವಾ ಪದಕ ಮತ್ತು 662 ಮಂದಿಗೆ ವಿಶಿಷ್ಟ ಸೇವಾ ಪದಕ ನೀಡಿ ಪುರಸ್ಕರಿಸಲಾಗುತ್ತದೆ.

ಜಮ್ಮು ಮತ್ತು ಕಾಶ್ಮೀರ ಪೊಲೀಸರಿಗೆ ಗರಿಷ್ಠ ಅಂದರೆ 115 ಪದಕ ನೀಡಲಾಗಿದೆ. ಉಳಿದಂತೆ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್), ಛತ್ತೀಸಗಡದ 10 ಸಿಬ್ಬಂದಿ, ಒಡಿಶಾದ 9, ಮಹಾರಾಷ್ಟ್ರದ ಏಳು ಮಂದಿ, ಇಂಡೊ–ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಮತ್ತು ಸಶಸ್ತ್ರ ಸೀಮಾ ಬಲದ (ಎಸ್‌ಎಸ್‌ಬಿ) ತಲಾ ಮೂವರು, ಗಡಿ ಭದ್ರತಾ ಪಡೆಯ ಇಬ್ಬರು ಶೌರ್ಯಪ್ರಶಸ್ತಿ ಪುರಸ್ಕೃತರಲ್ಲಿ ಸೇರಿದ್ದಾರೆ.

ಮದುವೆ ಭರವಸೆ ವಂಚನೆ ವ್ಯಾಪ್ತಿಗೆ ಸೇರದು: ಹೈಕೋರ್ಟ್

ಬೆಂಗಳೂರು: 'ಯುವತಿಯನ್ನು ಪ್ರೀತಿಸಿ ಮದುವೆಯಾಗುತ್ತೇನೆ ಎಂದು ಭರವಸೆ ನೀಡಿ ನಂತರ ಆ ಭರವಸೆ ನಿರಾಕರಿಸುವುದು ಭಾರತೀಯ ದಂಡ ಸಂಹಿತೆ–1860 (ಐಪಿಸಿ) ಕಲಂ 420ರ ಅಡಿಯಲ್ಲಿ ವಂಚನೆಯಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ವಿರುದ್ಧ ಯುವತಿ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಕೆ.ಆರ್ ಪುರ ನಿವಾಸಿ ವೆಂಕಟೇಶ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಮದುವೆಯ ಭರವಸೆ ಮುರಿಯುವುದನ್ನು ಐಪಿಸಿ ಕಲಂ 415ರ ಅನುಸಾರ ವಂಚನೆ ವ್ಯಾಖ್ಯಾನದ ವ್ಯಾಪ್ತಿಗೆ ಸೇರಿಸಲಾಗದು. ಮೋಸ ಮಾಡುವ ಉದ್ದೇಶದಿಂದಲೇ ಒಪ್ಪಂದ ಮಾಡಿಕೊಂಡು ಬಳಿಕ ಅದನ್ನು ಉಲ್ಲಂಘಿಸಿದಾಗ ಮಾತ್ರ ಕ್ರಿಮಿನಲ್ ಪ್ರಕರಣ ದಾಖಲಿಸಬಹುದು' ಎಂದು ನ್ಯಾಯಪೀಠ ಹೇಳಿದೆ.

'ಅರ್ಜಿದಾರ ವ್ಯಕ್ತಿ ಮೋಸ ಮಾಡುವ ಉದ್ದೇಶದಿಂದಲೇ ಈ ರೀತಿ ವಂಚಿಸಿದ್ದಾನೆ ಎಂಬುದನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡುವಲ್ಲಿ ಯುವತಿ ವಿಫಲವಾಗಿದ್ದಾರೆ' ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, ಎಫ್‌ಐಆರ್ ರದ್ದುಪಡಿಸಿದೆ.

ಗಣರಾಜ್ಯೋತ್ಸವ ಪರೇಡ್– ಮೈಸೂರು ವಿದ್ಯಾರ್ಥಿನಿ ನೇತೃತ್ವ

ಮೈಸೂರು: ನಗರದ ಮಹಾರಾಣಿ ವಿಜ್ಞಾನ ಕಾಲೇಜಿನ ಬಿ.ಎಸ್ಸಿ ವಿದ್ಯಾರ್ಥಿನಿ ಪ್ರಮೀಳಾ ಕುನ್ವರ್, ನವದೆಹಲಿಯ ರಾಜಪಥದಲ್ಲಿ ಬುಧವಾರ (ಜ.26) ನಡೆಯಲಿರುವ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಎನ್‌ಸಿಸಿ ತಂಡದ ನೇತೃತ್ವ ವಹಿಸಲಿದ್ದಾರೆ.

ಪರೇಡ್‌ಗೆ ಆಯ್ಕೆಯಾಗಿರುವ ದೇಶದ ಎಲ್ಲಾ 17 ಎನ್‌ಸಿಸಿ ನಿರ್ದೇಶನಾಲಯ ಘಟಕಗಳ ಸೀನಿಯರ್ ವಿಂಗ್ ಕೆಡೆಟ್‌ಗಳಿಗೆ ಕಮಾಂಡಿಂಗ್ ಲೀಡರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ. ಅದಕ್ಕಾಗಿ ಬೆಂಗಳೂರು ಹಾಗೂ ನವದೆಹಲಿಯಲ್ಲಿ 3 ತಿಂಗಳಿಂದ ತರಬೇತಿ ಪಡೆದಿದ್ದಾರೆ.

ರಾಜಸ್ಥಾನ ಮೂಲದ ಪ್ರಮೀಳಾ ಅವರ ತಂದೆ ಪ್ರತಾಪ್ ಸಿಂಗ್, ನಗರದ ಕಾಳಿದಾಸ ರಸ್ತೆಯಲ್ಲಿ ಚಹಾ ಅಂಗಡಿ ಇಟ್ಟುಕೊಂಡಿದ್ದಾರೆ.


ಪ್ರಮೀಳಾ ಕುನ್ವರ್

'ಕಮಾಂಡರ್ ಆಗಿ ತಂಡ ಮುನ್ನಡೆಸಬೇಕು ಎಂಬುದು ಮಗಳ ಕನಸಾಗಿತ್ತು. ಆ ಗೌರವ ಒಲಿದಿದ್ದು, ಸತತ ಪರಿಶ್ರಮದಿಂದ ಅಂದುಕೊಂಡಿದ್ದನ್ನು ಸಾಧಿಸಿರುವ ಮಗಳಿಗೆ ಶಹಬ್ಬಾಸ್ ಹೇಳಬೇಕು. ವಿವಿಧ ರಾಜ್ಯಗಳನ್ನು ಪ್ರತಿನಿಧಿಸುತ್ತಿರುವ ಕೆಡೆಟ್‌ಗಳ ತಂಡದ ನಾಯಕಿಯಾಗಿ ಕರ್ನಾಟಕ ಪ್ರತಿನಿಧಿಸುತ್ತಿರುವುದು ಹೆಮ್ಮೆಯ ಸಂಗತಿ' ಎಂದು ಪ್ರತಾಪ್ ಸಿಂಗ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಪ್ರಮೀಳಾ ಸೇರಿದಂತೆ ಮೈಸೂರು ಗ್ರೂಪ್‌ನಿಂದ ಒಟ್ಟು 19 ಕೆಡೆಟ್‌ಗಳು ಪರೇಡ್‌ಗೆ ಆಯ್ಕೆಯಾಗಿದ್ದಾರೆ.

'ಅನ್ಯಾಯವಾಗಿದ್ದರೆ ಮೇಲ್ಮನವಿ ಸಲ್ಲಿಸಿ'

ಶಿವಮೊಗ್ಗ: 'ಸಬ್ ಇನ್‌ಸ್ಪೆಕ್ಟರ್ ಹುದ್ದೆ ಆಯ್ಕೆಯಲ್ಲಿ ಅಕ್ರಮ ನಡೆದಿದೆ ಎಂಬ ಸಂಶಯವಿದ್ದರೆ ಅಂತಹ ಅಭ್ಯರ್ಥಿಗಳು ಉತ್ತರ ಪತ್ರಿಕೆಯ ನಕಲು ಪಡೆದು ಮೇಲ್ಮನವಿ ಸಲ್ಲಿಸಬಹುದು' ಎಂದು ಗೃಹಸಚಿವ ಆರಗ ಜ್ಞಾನೇಂದ್ರ ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ಪೊಲೀಸ್ ಅಧಿಕಾರಿಗಳ ಸಭೆ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಪಿಎಸ್‌ಐ ಆಯ್ಕೆ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ನಿರಾಧಾರ. ಕಲಬುರಗಿಯಲ್ಲಿ ಬ್ಲೂಟೂತ್ ಬಳಸಿ ಪರೀಕ್ಷೆ ಬರೆದ ಅಭ್ಯರ್ಥಿಗಳನ್ನು ಜೈಲಿಗೆ ಕಳುಹಿಸಲಾಗಿದೆ. ಒಂದು ಲಕ್ಷ ಅಭ್ಯರ್ಥಿಗಳು ಪಿಎಸ್‌ಐ ಪರೀಕ್ಷೆ ಬರೆದಿದ್ದರು. ಆಯ್ಕೆಯಾಗಿದ್ದು 450. ಉಳಿದವರಿಗೆ ಅಸಹನೆ ಸಹಜ. ಆದರೂ ಅನ್ಯಾಯವಾಗಿದ್ದರೆ ವಿಚಾರಣೆ ನಡೆಸಲಾಗುವುದು' ಎಂದು ಹೇಳಿದರು.

'ಕೋವಿಡ್ ಪ್ರಮಾಣಪತ್ರದಲ್ಲಿ ಪ್ರಧಾನಿ ಚಿತ್ರ: ಜಾಹೀರಾತು ಎನ್ನಲಾಗದು'

ಕೊಚ್ಚಿ (ಪಿಟಿಐ): 'ಕೋವಿಡ್ ಲಸಿಕೆ ಪ್ರಮಾಣಪತ್ರದಲ್ಲಿ ಪ್ರಧಾನಿ ಅವರ ಭಾವಚಿತ್ರ ಇರುವುದನ್ನು ಜಾಹೀರಾತು ಎಂದು ಪರಿಗಣಿಸಲಾಗದು' ಎಂದು ಕೇರಳ ಹೈಕೋರ್ಟ್ ಮಂಗಳವಾರ ಹೇಳಿದೆ.

'ಕೋವಿಡ್ ಲಸಿಕೆ ಕುರಿತಂತೆ ಸಂದೇಶ ನೀಡುವ ಪೂರ್ಣ ಹಕ್ಕು ಪ್ರಧಾನಮಂತ್ರಿಗಿದೆ' ಎಂದೂ ಹೈಕೋರ್ಟ್‌ನ ವಿಭಾಗೀಯ ಪೀಠವು ಪ್ರತಿಪಾದಿಸಿತು.

ಮುಖ್ಯ ನ್ಯಾಯಮೂರ್ತಿ ಎಸ್. ಮಣಿಕುಮಾರ್ ಮತ್ತು ನ್ಯಾಯಮೂರ್ತಿ ಶಾಜಿ ಪಿ.ಚಾಲಿ ಅವರಿದ್ದ ವಿಭಾಗೀಯ ಪೀಠವು ಈ ಕುರಿತು ಸಲ್ಲಿಸಿದ್ದ ಅರ್ಜಿಯನ್ನು ವಜಾಮಾಡಿತು. ಪೀಟರ್ ಮೈಲಿಪರಂಪಿಲ್ ಎಂಬವರು ಸಲ್ಲಿಸಿದ್ದ ಅರ್ಜಿಯನ್ನು ಈ ಹಿಂದೆ ಏಕಸದಸ್ಯ ಪೀಠವು ವಜಾ ಮಾಡಿತ್ತು. ಅದನ್ನು ಪ್ರಶ್ನಿಸಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಿದ್ದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯ

'ರಾಗಿ ಖರೀದಿ ನಿರ್ಬಂಧ ಹಿಂತೆಗೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಗೆ ವಿಧಿಸಿರುವ ನಿರ್ಬಂಧಗಳನ್ನು ತೆಗೆದು ಹಾಕಬೇಕು. ಅಲ್ಲದೆ, ರಾಗಿ, ಭತ್ತ ಮತ್ತಿತರ ಉತ್ಪನ್ನಗಳಿಗೆ ನಿಗದಿಗೊಳಿಸಿರುವ ಬೆಂಬಲ ಬೆಲೆ ಹೆಚ್ಚಿಸಬೇಕು' ಎಂದು ರಾಜ್ಯ ಸರ್ಕಾರವನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.


ಸಿದ್ದರಾಮಯ್ಯ

'ರೈತರ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿ ಸರ್ಕಾರ ಖರೀದಿಸದಿದ್ದರೆ ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ಕೇವಲ 2.10 ಲಕ್ಷ ಟನ್ ಖರೀದಿಸಲು ವಿಧಿಸಿರುವ ನಿರ್ಬಂಧವನ್ನು ಹಿಂತೆಗೆಸಬೇಕು. ಸ್ಥಗಿತಗೊಳಿಸಿರುವ ನೋಂದಣಿ ಕೇಂದ್ರಗಳನ್ನು ಮತ್ತೆ ಆರಂಭಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ತುಮಕೂರು, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಚಾಮರಾಜನಗರ ಜಿಲ್ಲೆಗಳಲ್ಲಿ ರಾಗಿ ಪ್ರಮುಖ ಬೆಳೆ. ರೈತರು ಈ ವರ್ಷ ಸುಮಾರು 17.50 ಲಕ್ಷ ಎಕರೆ ಪ್ರದೇಶದಲ್ಲಿ ರಾಗಿ ಬೆಳೆದಿದ್ದಾರೆ. ಈ ಬಾರಿ ಕನಿಷ್ಠ 14 ಲಕ್ಷದಿಂದ 15 ಲಕ್ಷ ಟನ್ ಇಳುವರಿ ನಿರೀಕ್ಷಿಸಲಾಗಿದೆ. ಆದರೆ, ಅತಿವೃಷ್ಟಿಯ ಕಾರಣದಿಂದ ದೊಡ್ಡ ಮಟ್ಟದ ಬೆಳೆ ನಷ್ಟವಾಗಿದೆ.

'ಮಾತೆತ್ತಿದರೆ ರೈತರ ಆದಾಯ ದ್ವಿಗುಣಗೊಳಿಸಲಾಗುವುದು ಎಂದು ಮಾತನಾಡುವ ಪ್ರಧಾನಿ ಮೋದಿ ನೇತೃತ್ವದ ಸರ್ಕಾರ, ಈ ಬಾರಿ ರಾಜ್ಯದ ರೈತರಿಂದ ಕೇವಲ 2.10 ಲಕ್ಷ ಟನ್ ರಾಗಿ ಮಾತ್ರ ಖರೀದಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ. ಈ ಸೂಚನೆಯನ್ನು ಆಧರಿಸಿ ರಾಜ್ಯದ ಸರ್ಕಾರ ರೈತರಿಂದ ರಾಗಿ ಖರೀದಿಸಲು ವಿಪರೀತ ನಿಬಂಧನೆಗಳನ್ನು ವಿಧಿಸಿದೆ. ಒಬ್ಬ ರೈತರಿಂದ ಕೇವಲ 20 ಕ್ವಿಂಟಲ್ ರಾಗಿ ಮಾತ್ರ ಖರೀದಿಸಲಾಗುವುದೆಂದು ಆದೇಶದಲ್ಲಿ ತಿಳಿಸಲಾಗಿದೆ' ಎಂದು ಸಿದ್ದರಾಮಯ್ಯ ದೂರಿದ್ದಾರೆ.

'ರಾಗಿಗೆ ನೀಡುತ್ತಿರುವ ಬೆಂಬಲ ಬೆಲೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಕ್ವಿಂಟಲಿಗೆ ಕೇವಲ ₹ 82 ಮಾತ್ರ ಏರಿಕೆ ಮಾಡಲಾಗಿದೆ. ಡಾ.ಸ್ವಾಮಿನಾಥನ್ ಅವರ ವರದಿಯಲ್ಲಿನ ಸೂತ್ರಗಳನ್ನು ಪೂರ್ತಿಯಾಗಿ ಅಳವಡಿಸಿದರೆ ಒಂದು ಕ್ವಿಂಟಲ್ ರಾಗಿಗೆ ಈಗ ನಿಗದಿಪಡಿಸಿರುವ ಬೆಂಬಲ ಬೆಲೆಯ ಎರಡರಷ್ಟನ್ನು ರೈತರಿಗೆ ನೀಡಬೇಕಾಗುತ್ತದೆ' ಎಂದೂ ಅವರು ಹೇಳಿದ್ದಾರೆ.

'ಮುಖ್ಯಮಂತ್ರಿ ಮನೆಗೆ ಮುತ್ತಿಗೆ'

ಮೈಸೂರು: 'ಭತ್ತ ಹಾಗೂ ರಾಗಿ ಖರೀದಿ ಮೇಲೆ ಹೇರಿರುವ ಮಿತಿಯನ್ನು ಕೂಡಲೇ ರದ್ದುಗೊಳಿಸದಿದ್ದರೆ ಕೋವಿಡ್ ನಿಯಮ ಮೀರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು' ಎಂದು ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.


ಬಡಗಲಪುರ ನಾಗೇಂದ್ರ

'ಎಲ್ಲ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ನೀಡುವುದಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ವಾಗ್ದಾನ ಮಾಡಿದ್ದರು. ಈಗ ಅವರದ್ದೇ ಸರ್ಕಾರ ಬೆಂಬಲ ಬೆಲೆಯಲ್ಲಿ ಖರೀದಿಸುವ ಧಾನ್ಯದ ಪ್ರಮಾಣವನ್ನು ಕಡಿತ ಮಾಡಿರುವುದು ದ್ವಿಮುಖ ನೀತಿಗೆ ಸಾಕ್ಷಿ' ಎಂದು ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

'ಮೇಕೆದಾಟು ಯೋಜನೆಯಿಂದ ಪರಿಸರಕ್ಕೆ ಹಾನಿಯಾದರೂ ಬಹುಜನರಿಗೆ ಉಪಯೋಗವಾಗುವುದರಿಂದ ಜಾರಿಗೆ ಬರುವುದು ಅವಶ್ಯ. ಪರ್ಯಾಯವಾಗಿ ಅರಣ್ಯವನ್ನು ಬೆಳೆಸುವ ಮೂಲಕ ಅಸಮತೋಲನವನ್ನು ಸರಿದೂಗಿಸಬಹುದು' ಎಂದು ಹೇಳಿದರು.

ಬುಧವಾರ, ಜನವರಿ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 26 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಣರಾಜ್ಯೋತ್ಸವದ ಶುಭಾಶಯಗಳು

ತಂತ್ರಜ್ಞಾನ
ಯಕ್ಷಗಾನ ಆಸಕ್ತರು, ಕವಿಗಳು, ಕಲಾವಿದರು ಇನ್ನು ಮುಂದೆ ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ ತಮಗೆ ಬೇಕಾದ ಪ್ರಸಂಗಗಳನ್ನು ಆ್ಯಪ್‌ನ ಮೂಲಕವಾಗಿ ಡೌನ್ಲೋಡ್ ಮಾಡಿಕೊಳ್ಳಬಹುದು...




ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,858	17,277	₹50,480 (ಬೆಂಗಳೂರು)	₹65,500 (ಬೆಂಗಳೂರು)	74.78

ಬಿಪಿನ್ ರಾವತ್, ಕಲ್ಯಾಣ್ ಸಿಂಗ್ ಸೇರಿದಂತೆ ನಾಲ್ವರಿಗೆ 'ಪದ್ಮವಿಭೂಷಣ'

ರಾಜ್ಯದ ಐವರಿಗೆ ಒಲಿದ 'ಪದ್ಮಶ್ರೀ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷಿ ಮತ್ತು ಸಂಶೋಧನೆ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಧಾರವಾಡ ಜಿಲ್ಲೆಯ ಅಣ್ಣಿಗೇರಿಯ ಅಬ್ದುಲ್ ಖಾದರ್ ನಡಕಟ್ಟಿ, ಕೃಷಿ ತಂತ್ರಜ್ಞಾನ ಕ್ಷೇತ್ರದ ಸಂಶೋಧಕ ಎಸ್.ಅಯ್ಯಪ್ಪನ್ ಸೇರಿದಂತೆ ರಾಜ್ಯದ ಐವರು ಸಾಧಕರು ಪ್ರಸಕ್ತ ಸಾಲಿನ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ.


ಬಿಪಿನ್ ರಾವತ್

ಒಟ್ಟು 128 ಸಾಧಕರಿಗೆ ಪ್ರಸಕ್ತ ಸಾಲಿನ ಪ್ರತಿಷ್ಠಿತ 'ಪದ್ಮ' ಪ್ರಶಸ್ತಿ ಘೋಷಿಸಲಾಗಿದೆ. ಮಂಗಳವಾರ ಸಂಜೆ ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಲಾಯಿತು. ಕವಿ ಸಿದ್ದಲಿಂಗಯ್ಯ ಅವರಿಗೆ ಮರಣೋತ್ತರವಾಗಿ ಪದ್ಮಶ್ರೀ ಪುರಸ್ಕಾರ ಪ್ರಕಟಿಸಲಾಗಿದೆ.

ಸೇನಾ ಪಡೆಗಳ ಮುಖ್ಯಸ್ಥರಾಗಿದ್ದ ಜನರಲ್ ಬಿಪಿನ್ ರಾವತ್ ಅವರಿಗೆ ಮರಣೋತ್ತರವಾಗಿ ಪದ್ಮ ವಿಭೂಷಣ ಗೌರವ ನೀಡಲಾಗಿದೆ. ಕಳೆದ ತಿಂಗಳು ತಮಿಳುನಾಡಿನ ಕೂನೂರಿನಲ್ಲಿ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಅವರು ಹುತಾತ್ಮರಾಗಿದ್ದರು.

ಒಟ್ಟು ನಾಲ್ವರು ಪದ್ಮ ವಿಭೂಷಣ ಮತ್ತು 17 ಮಂದಿ ಪದ್ಮ ಭೂಷಣ ಪ್ರಶಸ್ತಿಗೆ ಪಾತ್ರರಾಗಿದ್ದು, ಇವರಲ್ಲಿ ಕನ್ನಡಿಗರಿಲ್ಲ.


ಶಿವಮೊಗ್ಗ ಜಿಲ್ಲೆ ಮತ್ತೂರಿನ ಗಮಕಿ ಎಚ್.ಆರ್.ಕೇಶವಮೂರ್ತಿ, ಗುಡ್ಡಕ್ಕೆ ಸುರಂಗ ಕೊರೆದು ನೀರು ಪಡೆದ ಸಾಹಸಿ, ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಅಮೈ ಮಹಾಲಿಂಗ ನಾಯ್ಕ ಅವರೂ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ.


ಸಿದ್ದಲಿಂಗಯ್ಯ


ಕೇಶವಮೂರ್ತಿ


ಅಬ್ದುಲ್ ಖಾದರ್ ನಡಕಟ್ಟಿ


ಅಮೈ ಮಹಾಲಿಂಗ ನಾಯ್ಕ


ಅಯ್ಯಪ್ಪನ್

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಪದ್ಮವಿಭೂಷಣ
- **ಪ್ರಭಾ ಅತ್ರೆ**, ಕಲೆ (ಮಹಾರಾಷ್ಟ್ರ)
- **ರಾಧೇಶ್ಯಾಮ ಖೇಮ್ಕಾ** ಸಾಹಿತ್ಯ–ಶಿಕ್ಷಣ (ಉತ್ತರ ಪ್ರದೇಶ) (ಮರಣೋತ್ತರ)
- **ಬಿಪಿನ್ ರಾವತ್**, ನಾಗರಿಕ ಸೇವೆ (ಉತ್ತರಾಖಂಡ) (ಮರಣೋತ್ತರ)
- **ಕಲ್ಯಾಣ್ ಸಿಂಗ್**, ಸಾರ್ವಜನಿಕ ಸೇವೆ (ಉತ್ತರ ಪ್ರದೇಶ) (ಮರಣೋತ್ತರ)

ಪದ್ಮಭೂಷಣ
- **ಗುಲಾಂ ನಬಿ ಆಜಾದ್** ಸಾರ್ವಜನಿಕ ಸೇವೆ (ಜಮ್ಮು, ಕಾಶ್ಮೀರ)
- **ವಿಕ್ಟರ್ ಬ್ಯಾನರ್ಜಿ**, ಕಲೆ (ಪಶ್ಚಿಮ ಬಂಗಾಳ)
- **ಗುರ್ಮೀತ್ ಬಾವಾ**, ಕಲೆ (ಪಂಜಾಬ್) (ಮರಣೋತ್ತರ)
- **ಬುದ್ಧದೇವ ಭಟ್ಟಾಚಾರ್ಯ** ಸಾರ್ವಜನಿಕ ಸೇವೆ
- **ನಟರಾಜನ್ ಚಂದ್ರಶೇಖರನ್** ವ್ಯಾಪಾರ ಮತ್ತು ಕೈಗಾರಿಕೆ (ಮಹಾರಾಷ್ಟ್ರ)
- **ಕೃಷ್ಣ ಎಲ್ಲಾ/ ಸುಚಿತ್ರಾ ಎಲ್ಲಾ** (ಜೋಡಿ) ವ್ಯಾಪಾರ ಮತ್ತು ಕೈಗಾರಿಕೆ (ತೆಲಂಗಾಣ)
- **ಮಧುರ್ ಜಾಫ್ರಿ**, ಪಾಕವಿಧಾನ (ಅಮೆರಿಕ)
- **ದೇವೇಂದ್ರ ಝಾಝಾರಿಯಾ** ಕ್ರೀಡೆ (ರಾಜಸ್ಥಾನ)
- **ರಶೀದ್ ಖಾನ್**, ಕಲೆ (ಉತ್ತರ ಪ್ರದೇಶ)
- **ರಾಜೀವ್ ಮೆಹರ್ಷಿ**, ನಾಗರಿಕ ಸೇವೆ (ರಾಜಸ್ಥಾನ)
- **ಸತ್ಯನಾರಾಯಣ ನಾದೆಲ್ಲಾ** ವ್ಯಾಪಾರ ಮತ್ತು ಕೈಗಾರಿಕೆ (ಅಮೆರಿಕ)
- **ಸುಂದರರಾಜನ್ ಪಿಚ್ಚೈ** ವ್ಯಾಪಾರ ಮತ್ತು ಕೈಗಾರಿಕೆ (ಅಮೆರಿಕ)
- **ಸೈರಸ್ ಪೂನಾವಾಲಾ**, ವ್ಯಾಪಾರ ಮತ್ತು ಕೈಗಾರಿಕೆ (ಮಹಾರಾಷ್ಟ್ರ)
- **ಸಂಜಯ ರಾಜಾರಾಮ್** ವಿಜ್ಞಾನ ಮತ್ತು ಎಂಜಿನಿಯರಿಂಗ್ (ಮೆಕ್ಸಿಕೊ) (ಮರಣೋತ್ತರ)
- **ಪ್ರತಿಭಾ ರೇ**, ಸಾಹಿತ್ಯ ಮತ್ತು ಶಿಕ್ಷಣ (ಒಡಿಶಾ)
- **ಸ್ವಾಮಿ ಸಚ್ಚಿದಾನಂದ** ಸಾಹಿತ್ಯ ಮತ್ತು ಶಿಕ್ಷಣ (ಗುಜರಾತ್)
- **ವಸಿಷ್ಠ ತ್ರಿಪಾಠಿ**, ಸಾಹಿತ್ಯ ಮತ್ತು ಶಿಕ್ಷಣ (ಉತ್ತರ ಪ್ರದೇಶ)

ಪ್ರಶ್ನೋತ್ತರ
ಇಂದಿನ ಅಂಕಣ 10

ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾರ್ಚ್ 28ರಿಂದ ಏ. 11ರವರೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನ (2021–22) ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಮಾರ್ಚ್ 28ರಿಂದ ಏ. 11ರವರೆಗೆ ನಡೆಯಲಿವೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮುಖ್ಯ ಪರೀಕ್ಷೆಯ ವೇಳಾಪಟ್ಟಿಯನ್ನು ಮಂಗಳವಾರ ಪ್ರಕಟಿಸಿದೆ.

ಇತ್ತೀಚೆಗೆ ಮಂಡಳಿಯು ತಾತ್ಕಾಲಿಕ ವೇಳಾಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಗಳಿದ್ದರೆ ಜ. 14ರ ಒಳಗೆ ಸಲ್ಲಿಸುವಂತೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಸೂಚಿಸಿತ್ತು. ಆದರೆ, ಆಕ್ಷೇಪಣೆಗಳು ಸಲ್ಲಿಕೆ ಆಗದಿರುವುದರಿಂದ ಅದೇ ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಗಿದೆ.

ಪ್ರಥಮ ಭಾಷೆ ಮತ್ತು ಐಚ್ಛಿಕ ವಿಷಯಗಳ ಪರೀಕ್ಷೆ ಬೆಳಿಗ್ಗೆ 10.30ರಿಂದ 1.45ರವರೆಗೆ ಹಾಗೂ ದ್ವಿತೀಯ ಭಾಷೆ ಮತ್ತು ತೃತೀಯ ಭಾಷೆಯ ಪರೀಕ್ಷೆ ಬೆಳಿಗ್ಗೆ 10.30ರಿಂದ 1.30ರವರೆಗೆ ನಡೆಯಲಿದೆ.

ಎಸ್ಸೆಸ್ಸೆಲ್ಸಿ ವೇಳಾಪಟ್ಟಿ

ದಿನ	ವಿಷಯ
ಮಾರ್ಚ್ 28	ಪ್ರಥಮ ಭಾಷೆ
ಮಾರ್ಚ್ 30	ದ್ವಿತೀಯ ಭಾಷೆ
ಏಪ್ರಿಲ್ 1	ಅರ್ಥಶಾಸ್ತ್ರ
ಏಪ್ರಿಲ್ 4	ಗಣಿತ
ಏಪ್ರಿಲ್ 6	ಸಮಾಜ ವಿಜ್ಞಾನ
ಏಪ್ರಿಲ್ 8	ತೃತೀಯ ಭಾಷೆ
ಏಪ್ರಿಲ್ 11	ವಿಜ್ಞಾನ

ಮೌನಕ್ಕೆ ಶರಣಾದ ಸಚಿವ ಅಶೋಕ

ಉಸ್ತುವಾರಿ ಬದಲು: ಸಚಿವರ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಉಸ್ತುವಾರಿ ಹಂಚಿಕೆಯ ಬೆನ್ನಲ್ಲೇ ಕೆಲವು ಸಚಿವರು ನೇರವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರೆ, ಇನ್ನು ಕೆಲವು ಸಚಿವರು ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಮಾತನಾಡುವ ಮೂಲಕ ನೋವು ತೋಡಿಕೊಂಡಿದ್ದಾರೆ.

ಈ ಬೆಳವಣಿಗೆಗಳ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉಸ್ತುವಾರಿ ಹಂಚಿಕೆ ವಿಚಾರದಲ್ಲಿ ಯಾವುದೇ ಅಸಮಾಧಾನ ಉಂಟಾಗಿಲ್ಲ ಎಂದು ಹೇಳಿದ್ದಾರೆ.

ಜಿಲ್ಲಾ ಉಸ್ತುವಾರಿ ಸಿಗದೇ ಇರುವ ಕಂದಾಯ ಸಚಿವ ಆರ್. ಅಶೋಕ ಅವರು ಮೌನಕ್ಕೆ ಶರಣಾಗಿದ್ದಾರೆ.

ಈ ಹಿಂದೆ ತುಮಕೂರು ಜಿಲ್ಲೆ ಉಸ್ತುವಾರಿ ಹೊತ್ತಿದ್ದ ಕಾನೂನು ಸಚಿವ ಜೆ.ಸಿ.ಮಧುಸ್ವಾಮಿ, 'ನನಗೆ ಜಿಲ್ಲಾ ಉಸ್ತುವಾರಿ ತಪ್ಪಿದ ಬಗ್ಗೆ ಅಸಮಾಧಾನವಿದೆ. ಯಾವ ಕಾರಣಕ್ಕೆ ಬದಲಾವಣೆ ಮಾಡಿದ್ದಾರೊ ಗೊತ್ತಿಲ್ಲ. ಹಾಗೆಂದು ಇದನ್ನು ದೊಡ್ಡ ವಿಷಯ ಮಾಡಲು ಹೋಗಲ್ಲ. ಮುಖ್ಯಮಂತ್ರಿಯವರ ತೀರ್ಮಾನ. ಇದರಲ್ಲಿ ಯಾರದ್ದೋ ಪಿತೂರಿ ಇದೆ ಎಂದು ಭಾವಿಸುವುದಿಲ್ಲ' ಎಂದು ಹೇಳಿದ್ದಾರೆ.

4ನೇ ಪುಟ ನೋಡಿ

ಯಾರಿಗೂ ಅಸಮಾಧಾನ ಇಲ್ಲ: ಸಿ.ಎಂ

ಬೆಂಗಳೂರು: 'ಉಸ್ತುವಾರಿ ಹಂಚಿಕೆಗೂ ಮೊದಲು ನಾನು ಎಲ್ಲ ಸಚಿವರ ಜೊತೆ ಮಾತನಾಡಿದ್ದೇನೆ. ಯಾರೂ ಅಸಮಾಧಾನ ವ್ಯಕ್ತಪಡಿಸಿಲ್ಲ. ಯಾರೊಬ್ಬರಿಗೂ ಅಸಮಾಧಾನ ಮೂಡಿದೆ ಎಂಬ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು 'ಜಿಲ್ಲೆಗಳ ಉಸ್ತುವಾರಿ ಜವಾಬ್ದಾರಿ ನೀಡುವ ಮೊದಲು ಮತ್ತು ನಂತರ ಎಲ್ಲರ ಜೊತೆಗೂ ಮಾತನಾಡಿದ್ದೇನೆ. ಸ್ವಂತ ಜಿಲ್ಲೆ ಬಿಟ್ಟು ಬೇರೆ ಜಿಲ್ಲೆಗೆ ಉಸ್ತುವಾರಿ ನೀಡಬೇಕು ಎನ್ನುವುದು ನಮ್ಮ ಪಕ್ಷದ ರಾಷ್ಟ್ರೀಯ ನೀತಿ. ಇದರ ಬಗ್ಗೆ ಸುದೀರ್ಘವಾಗಿ ಸಚಿವರ ಜತೆ ಚರ್ಚೆ ಮಾಡಿದ್ದೇನೆ' ಎಂದರು.

'ನಾವೆಲ್ಲರೂ ಒಗ್ಗಟ್ಟಾಗಿ ಇದ್ದೇವೆ. ಒಂದಾಗಿದ್ದೇವೆ. ಸರ್ಕಾರವನ್ನು ಅತ್ಯಂತ ಸೂಕ್ತವಾಗಿ ಜನರ ಪರವಾಗಿ ಕೆಲಸ ಮಾಡಲು ಬದ್ಧರಾಗಿದ್ದೇನೆ. ಅಸಮಾಧಾನ ಇದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು' ಎಂದರು.

> **ತಾವು ಪ್ರತಿನಿಧಿಸುವ ಜಿಲ್ಲೆಯ ಉಸ್ತುವಾರಿಯನ್ನು ಸಚಿವರಿಗೆ ನೀಡಬಾರದು ಎಂಬುದು ನಮ್ಮ ಪಕ್ಷದ ನಿಯಮ. ಅದನ್ನೇ ರಾಜ್ಯದಲ್ಲೂ ಅನುಷ್ಠಾನ ಮಾಡಿದ್ದಾರೆ**
> **ನಳಿನ್ ಕುಮಾರ್ ಕಟೀಲ್**
> ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಆಳ–ಅಗಲ
ಉಕ್ರೇನ್ ಸಂಘರ್ಷ ಜಗತ್ತಿಗೂ ಸಂಕಟ

ಒಳ ಪುಟ
ಕೋವಿಡ್: ದೃಢ ಪ್ರಮಾಣ 6 ಜಿಲ್ಲೆಗಳಲ್ಲಿ ಅಧಿಕ 7

ಚಿನಕುರಳಿ
ಪ್ರಕಾಶ್ ಶೆಟ್ಟಿ




ಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ನಿರ್ದೇಶನ

ತೆರಿಗೆ ಸಂಗ್ರಹ ಹೆಚ್ಚಿಸಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣದಿಂದ ಸಾರಿಗೆ ಇಲಾಖೆಯಲ್ಲಿ ತೆರಿಗೆ ಸಂಗ್ರಹ ಕುಂಠಿತವಾಗಿರುವುದರಿಂದ ವರ್ಷಾಂತ್ಯದೊಳಗೆ ಗುರಿ ತಲುಪುವ ನಿಟ್ಟಿನಲ್ಲಿ ಜಾರಿ ವಿಭಾಗದ ಕಾರ್ಯಾಚರಣೆಗಳನ್ನು ಚುರುಕುಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.



ಬಸವರಾಜ ಬೊಮ್ಮಾಯಿ

ಮಂಗಳವಾರ ಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ತೆರಿಗೆ ಸಂಗ್ರಹದ ಕುರಿತು ಮಾಹಿತಿ ಪಡೆದರು. 2021ರ ಡಿಸೆಂಬರ್ ಅಂತ್ಯದವರೆಗೆ ನಿಗದಿತ ಗುರಿಗೆ ಹೋಲಿಸಿದಲ್ಲಿ ಶೇಕಡ 80ರಷ್ಟು ಮಾತ್ರ ತೆರಿಗೆ ಸಂಗ್ರಹವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಕೋವಿಡ್ ಮತ್ತಿತರ ಕಾರಣಗಳಿಂದ ತೆರಿಗೆ ಸಂಗ್ರಹದಲ್ಲಿ ಇಳಿಮುಖವಾಗಿರಬಹುದು. ಆದರೆ, ಆರ್ಥಿಕ ವರ್ಷದ ಅಂತ್ಯದೊಳಗೆ ಗುರಿ ಸಾಧಿಸಲೇಬೇಕು. ಅದಕ್ಕಾಗಿ ಇಲಾಖೆಯ ಜಾರಿ ವಿಭಾಗ ಚುರುಕಾಗಬೇಕು. ಮೋಟಾರು ವಾಹನ ತೆರಿಗೆ ವಂಚನೆ ಪ್ರಕರಣಗಳನ್ನು ಪತ್ತೆಹಚ್ಚಿ ಬಾಕಿ ಮತ್ತು ದಂಡ ವಸೂಲಿ ಮಾಡಬೇಕು ಎಂಬ ನಿರ್ದೇಶನವನ್ನು ಮುಖ್ಯಮಂತ್ರಿ ನೀಡಿದರು' ಎಂದು ಮೂಲಗಳು ತಿಳಿಸಿವೆ.

ಹುದ್ದೆ ಭರ್ತಿಗೆ ಕ್ರಮ: ಸಾರಿಗೆ ಇಲಾಖೆಯಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಜಾಸ್ತಿಯಾಗಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿ ಕೊರತೆ ತೀವ್ರವಾಗಿರುವ ಕುರಿತೂ ಸಭೆಯಲ್ಲಿ ಚರ್ಚೆ ನಡೆದಿದೆ. ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳು ಕೋರಿದ್ದಾರೆ ಎಂಬ ಮಾಹಿತಿ ಲಭಿಸಿದೆ.

'ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಪ್ರಕರಣ ಹೈಕೋರ್ಟ್‌ನಲ್ಲಿ ಬಾಕಿ ಇದೆ. ಅದನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಪೂರಕ ಕ್ರಮಗಳನ್ನು ಕೈಗೊಳ್ಳುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಇತರ ಖಾಲಿ ಹುದ್ದೆಗಳ ಭರ್ತಿ ಬಗ್ಗೆಯೂ ಪರಿಶೀಲಿಸುವುದಾಗಿ ಭರವಸೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಸಾರಿಗೆ ಸಚಿವ ಬಿ. ಶ್ರೀರಾಮುಲು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ಆಯುಕ್ತ ಎನ್. ಶಿವಕುಮಾರ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಮಿನಿ ಬಸ್‌ಗೆ ಆದ್ಯತೆ

ನಗರಗಳಲ್ಲಿ ಸಾರ್ವಜನಿಕ ಸಾರಿಗೆಗೆ ಮಿನಿ ಬಸ್‌ಗಳನ್ನು ಓಡಿಸಲು ಆದ್ಯತೆ ನೀಡಬೇಕು. ಬೇಡಿಕೆ ಇರುವ ಎಲ್ಲ ಕಡೆಗಳಿಗೂ ಬಸ್ ಸೌಲಭ್ಯ ಒದಗಿಸಬೇಕು. ಸಾರಿಗೆ ನಿಗಮಗಳ ವಾಹನಗಳನ್ನು ಸಿಎನ್‌ಜಿ ಇಂಧನ ಬಳಕೆಗೆ ಪೂರಕವಾಗಿ ಪರಿವರ್ತಿಸಬೇಕು. ಸಾರಿಗೆ ಇಲಾಖೆಯಲ್ಲಿ 30 ಸೇವೆಗಳನ್ನು ಆನ್‌ಲೈನ್ ಮೂಲಕ ನೀಡುತ್ತಿರುವ ಕುರಿತು ಜಾಗೃತಿ ಮೂಡಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಏಪ್ರಿಲ್‌ನಲ್ಲಿ ಬಿಬಿಎಂಪಿ ಚುನಾವಣೆ ಸಾಧ್ಯತೆ

ಬೆಂಗಳೂರು: ಬಿಬಿಎಂಪಿಗೆ ಏಪ್ರಿಲ್ ಅಥವಾ ಮೇನಲ್ಲಿ ಚುನಾವಣೆ ನಡೆಯಬಹುದು. ಪಾಲಿಕೆಯಲ್ಲಿ ಪುನಃ ಪಕ್ಷ ಬಹುಮತ ಪಡೆಯಲು ಕಠಿಣ ಶ್ರಮ ಹಾಕಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಗರದ ಶಾಸಕರು ಮತ್ತು ಸಚಿವರಿಗೆ ಸೂಚನೆ ನೀಡಿದ್ದಾರೆ.

ಪಕ್ಷದ ಕಚೇರಿಯಲ್ಲಿ ಮಂಗಳವಾರ ಸಂಜೆ ಅವರು ಪಕ್ಷದ ಪದಾಧಿಕಾರಿಗಳು ಮತ್ತು ಶಾಸಕರನ್ನು ಉದ್ದೇಶಿಸಿ ಮಾತನಾಡಿದರು.

ಗೆಲುವಿಗಾಗಿ ಎಲ್ಲರೂ ಸಂಕಲ್ಪ ಮಾಡಿ ಅಖಾಡಕ್ಕೆ ಇಳಿಯಬೇಕು. ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಬಳಸಿ, ಆದಷ್ಟು ಬೇಗ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಈ ನಿಟ್ಟಿನಲ್ಲಿ ನಗರದ ಸಚಿವರು ಮತ್ತು ಶಾಸಕರು ಹೆಚ್ಚು ಮುತುವರ್ಜಿಯಿಂದ ಕೆಲಸಮಾಡಬೇಕೆಂದು ಸಭೆಯಲ್ಲಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

ರಸ್ತೆಗಳು, ಮೇಲು ರಸ್ತೆ ಸೇರಿದಂತೆ ಎಲ್ಲ ಕಾಮಗಾರಿಗಳು ಸಮಯಬದ್ಧವಾಗಿ ಪೂರ್ಣಗೊಳಿಸಬೇಕು. ಸರ್ವಾಂಗೀಣ ಅಭಿವೃದ್ಧಿಯತ್ತ ಕೆಲಸ ಮಾಡಬೇಕು. ಸ್ಮಾರ್ಟ್ ಸಿಟಿ ಕೆಲಸವೂ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಬಿಜೆಪಿ ಶಾಸಕರಿಲ್ಲದ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಕದ ಕ್ಷೇತ್ರದ ಶಾಸಕರು ಹೋಗಿ ಕೆಲಸ ಮಾಡಬೇಕು. ಸರ್ಕಾರ ಮಾಡಿರುವ ಕೆಲಸಗಳನ್ನು ಜನರ ಗಮನಕ್ಕೆ ತರಲು ಶ್ರಮಿಸಬೇಕು. ಜನರಿಗಾಗಿ ಜನಪ್ರಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ನಿಟ್ಟಿನಲ್ಲಿ ಶಾಸಕರು ಸಲಹೆ-ಸೂಚನೆಗಳನ್ನು ನೀಡಬೇಕು ಎಂದು ಬೊಮ್ಮಾಯಿ ಅವರು ಹೇಳಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಭೆಯಲ್ಲಿ ಇದ್ದರು. ಬೆಂಗಳೂರು ಉತ್ತರ ಲೋಕಸಭಾ ಸದಸ್ಯರಾದ ಡಿ.ವಿ.ಸದಾನಂದ ಗೌಡ, ಶಾಸಕರು, ಜಿಲ್ಲಾ ಪದಾಧಿಕಾರಿಗಳು ಮತ್ತು ಮಂಡಲಗಳ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಗೊಲ್ಲಹಳ್ಳಿ ವ್ಯಾಪ್ತಿಯಲ್ಲಿ ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಗೊಲ್ಲಹಳ್ಳಿಯ ವಿದ್ಯುತ್ ಕೇಂದ್ರದಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 26 ರಿಂದ 29ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ಬಸವನಪುರ, ಹೊಮ್ಮದೇವನಹಳ್ಳಿ, ಚಿಕ್ಕಕಮ್ಮನಹಳ್ಳಿ, ದೊಡ್ಡಕಮ್ಮನಹಳ್ಳಿ, ಬಾಲಾಜಿ ಗಾರ್ಡನ್, ಬೋರಾ ಲೇಔಟ್, ಗೊಟ್ಟಿಗೆರೆ, ಕಾಳೇನ ಅಗ್ರಹಾರ, ಎಂಎಲ್‌ಎ ಲೇಔಟ್, ನೊಬೊ ನಗರ, ಬೆಂಚ್ ಮಾರ್ಕ್ ಅಪಾರ್ಟ್‌ಮೆಂಟ್, ರಮಣಶ್ರೀ ಲೇಔಟ್, ಪ್ರೆಸ್ಟೀಜ್ ನೈಟಿಂಗೇಲ್ ವಸತಿ ಸಮುಚ್ಚಯ ಹಾಗೂ ಬನ್ನೇರುಘಟ್ಟ ಮುಖ್ಯರಸ್ತೆ ಸುತ್ತಲಿನ ಪ್ರದೇಶಗಳು.

ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆ: ಆಕ್ಷೇಪ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು (ಕೆಪಿಟಿಸಿಎಲ್) ಸಹಾಯಕ ಎಂಜಿನಿಯರ್ ಮತ್ತು ಕಿರಿಯ ಎಂಜಿನಿಯರ್ ಪರೀಕ್ಷೆಗಳನ್ನು ಆಂಗ್ಲ ಮಾಧ್ಯಮದಲ್ಲಿ ನಡೆಸಿರುವುದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ.


ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಸುದ್ದಿ 2 ನಿಮಿಷ

ಬ್ರಿಟಿಷರ ಹೆಸರಿನ ಸಂಸ್ಥೆ, ರಸ್ತೆಗಳ ಮರುನಾಮಕರಣಕ್ಕೆ ಒತ್ತಾಯ

ಬೆಂಗಳೂರು: ಬ್ರಿಟಿಷರ ಹೆಸರಿನಲ್ಲಿ ಬೆಂಗಳೂರಿನಲ್ಲಿರುವ ಸರ್ಕಾರಿ ಸಂಸ್ಥೆಗಳು ಮತ್ತು ರಸ್ತೆಗಳಿಗೆ ಕರ್ನಾಟಕದ ಸ್ವಾತಂತ್ರ್ಯ ವೀರರ ಹೆಸರುಗಳನ್ನು ಮರುನಾಮಕರಣ ಮಾಡುವಂತೆ ಸಂಸದ ಪಿ.ಸಿ. ಮೋಹನ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಅವರು, 'ಭಾರತಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳಾಗಿವೆ. ಆದರೂ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಅನೇಕ ಸರ್ಕಾರಿ ಸಂಸ್ಥೆಗಳು ಮತ್ತು ರಸ್ತೆಗಳಿಗೆ ಬ್ರಿಟಿಷರು ಆಡಳಿತಾವಧಿಯಲ್ಲಿಟ್ಟ ಹೆಸರುಗಳೇ ಉಳಿದುಕೊಂಡಿವೆ' ಎಂದು ತಿಳಿಸಿದ್ದಾರೆ.



'ಶಿವಾಜಿನಗರದ ಲೇಡಿ ಕರ್ಜನ್ ರಸ್ತೆಯಲ್ಲಿರುವ ಬೌರಿಂಗ್ ಆ್ಯಂಡ್ ಲೇಡಿ ಕರ್ಜನ್ ಆಸ್ಪತ್ರೆಗೆ ಬ್ರಿಟಿಷ್ ಅಧಿಕಾರಿಯ ಹೆಸರು, ಲಾರ್ಡ್ ಕರ್ಜನ್ ಪತ್ನಿ ವಿಕ್ಟೋರಿಯಾ ಕರ್ಜನ್ ಹೆಸರು, ಚಾಮರಾಜಪೇಟೆಯ ಮಿಂಟೋ ಆಸ್ಪತ್ರೆಗೆ ಬ್ರಿಟಿಷ್ ವೈಸ್‌ರಾಯ್ ಆಗಿದ್ದ ಲಾರ್ಡ್ ಮಿಂಟೋ ಹೆಸರು, ವಿಕ್ಟೋರಿಯಾ ಆಸ್ಪತ್ರೆಗೆ ಇಂಗ್ಲೆಂಡ್ ರಾಣಿ ವಿಕ್ಟೋರಿಯಾ ಹೆಸರು ಇಂದಿಗೂ ಉಳಿದುಕೊಂಡಿವೆ. ಇನ್ನೂ ಅನೇಕ ರಸ್ತೆಗಳು ಬ್ರಿಟಿಷರ ಹೆಸರುಗಳಲ್ಲೇ ಇವೆ. ಬ್ರಿಟಿಷರು ಭಾರತದಲ್ಲಿ ಅಂಚೆ ವ್ಯವಸ್ಥೆ, ರೈಲ್ವೆ ವ್ಯವಸ್ಥೆ ಕಲ್ಪಿಸಿದರು ಎಂದು ಹೇಳಿದರೂ, ಅವೆಲ್ಲವೂ ಭಾರತದ ಸಂಪತ್ತನ್ನು ಬಂದರುಗಳಿಗೆ ಸಾಗಿಸಲು ಮಾಡಲಾದ ವ್ಯವಸ್ಥೆಗಳು. ಸ್ವಾತಂತ್ರ್ಯ ಭಾರತದಲ್ಲಿ ಸರ್ಕಾರಿ ಸಂಸ್ಥೆಗಳು ಮತ್ತು ರಸ್ತೆಗಳಲ್ಲಿ ಇಂತಹ ಅಧಿಕಾರಶಾಯಿಗಳ ಹೆಸರು ಉಳಿದುಕೊಂಡಿರುವುದು ಗುಲಾಮಗಿರಿಯ ಸಂಕೇತ' ಎಂದರು

ಮಾರ್ಚ್ 27ಕ್ಕೆ ಸಾಮೂಹಿಕ ವಿವಾಹ

ಬೆಂಗಳೂರು: 'ಈ ವರ್ಷದ ಮಾರ್ಚ್ 27ರಂದು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಗಿದೆ. ಈ ಬಾರಿ 100ಕ್ಕಿಂತಲೂ ಹೆಚ್ಚು ಜೋಡಿಗಳು ಹಸೆಮಣೆ ಏರಲಿವೆ' ಎಂದು ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ ಅಧ್ಯಕ್ಷ ಎ.ಎಚ್.ಬಸವರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, 'ಪ್ರತಿಬಾರಿಯಂತೆ ಈ ಸಲವೂ ಬನಶಂಕರಿ ದೇವಿಯ ಸನ್ನಿಧಾನದಲ್ಲಿ ವಿವಾಹ ಮಹೋತ್ಸವ ನಡೆಯಲಿದೆ. 22 ವರ್ಷಗಳಿಂದ ಈ ಉಚಿತ ವಿವಾಹ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. ಈವರೆಗೆ 1,231ಕ್ಕೂ ಹೆಚ್ಚು ಜೋಡಿ ವೈವಾಹಿಕ ಬದುಕಿಗೆ ಕಾಲಿಡಲು ವೇದಿಕೆಯು ನೆರವಾಗಿದೆ' ಎಂದರು.

'ಜಾತಿ, ಮತ, ಭೇದವಿಲ್ಲದೆ ಎಲ್ಲಾ ವರ್ಗದ ಜನರೂ ಒಂದೇ ಮಂಟಪದಲ್ಲಿ ತಮ್ಮಿಷ್ಟದವರನ್ನು ವರಿಸಲಿದ್ದಾರೆ. ಸಮಾರಂಭದಲ್ಲಿ ಹಾಜರಿರುವ ಮಠಾಧೀಶರು ನವಜೋಡಿಗೆ ಶುಭ ಹಾರೈಸಲಿದ್ದಾರೆ. ಈ ಬಾರಿ ಕೇರಳ, ಗೋವಾ, ತಮಿಳುನಾಡು ಹಾಗೂ ಇತರ ರಾಜ್ಯಗಳ ಜೋಡಿಗಳೂ ಪಾಲ್ಗೊಳ್ಳಲಿದ್ದಾರೆ. ಹೋದ ವರ್ಷ 70ಕ್ಕಿಂತಲೂ ಹೆಚ್ಚು ಜೋಡಿ ಹಸೆಮಣೆ ಏರಿದ್ದವು. ಮಾರ್ಚ್ 27ರಂದು ಬೆಳಿಗ್ಗೆ 7.40ರಿಂದ 9.15ರವರೆಗಿನ ಮೇಷ ಲಗ್ನದಲ್ಲಿ ಸಾಮೂಹಿಕ ವಿವಾಹ ನಡೆಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಇದೇ 27ರಂದು ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ಉತ್ತರಹಳ್ಳಿ ರಸ್ತೆ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಲೇಔಟ್, ಭೂಮಿಕ ಲೇಔಟ್, ಪಟ್ಟಣಗೆರೆ, ಬಿ.ಎಚ್.ಇ.ಎಲ್. ಲೇಔಟ್, ಹರ್ಷ ಲೇಔಟ್, ವಿದ್ಯಾಪೀಠ ರಸ್ತೆ, ಬಿ.ಜಿ.ಎಸ್. ಆಸ್ಪತ್ರೆ ರಸ್ತೆ, ಮೈಸೂರು ಹೈವೆ, ಸಿದ್ದಾರ್ಥ ಶಾಲೆ ರಸ್ತೆ, ಮುನೇಶ್ವರ ಲೇಔಟ್, ಪ್ರಸನ್ನ ಲೇಔಟ್, ಮಾರುತಿನಗರ, ಕೆಂಪೇಗೌಡ ನಗರ, ಸನ್‌ಸಿಟಿ, ಬಿ.ಡಿ.ಕಾಲೊನಿ, ಗಾಂಧಿನಗರ, ಉಲ್ಲಾಳನಗರ, ಭುವನೇಶ್ವರಿನಗರ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣಿ ಲೇಔಟ್, ಆರ್.ಆರ್. ಲೇಔಟ್, ಉಪಾಧ್ಯಾಯ ಲೇಔಟ್, ಕುವೆಂಪು ಮುಖ್ಯರಸ್ತೆ, ಜಿ.ಕೆ.ಗಲ್ಲಿ ರಸ್ತೆ, ಗಂಗಾನಗರ, ಯಮುನಾಗರ ಶಾಲೆ, ಬಿ.ಇ.ಎಲ್. 1 ಮತ್ತು 2ನೇ ಹಂತ, ಗಾಂಧಿ ಪಾರ್ಕ್-1, ಸರ್.ಎಂ.ವಿ. 3 ಮತ್ತು 5ನೇ ಬ್ಲಾಕ್

ನಗರದಲ್ಲಿ ಇಂದು

ಗಣರಾಜ್ಯೋತ್ಸವ ದಿನಾಚರಣೆ

ಕನ್ನಡ ಯುವಜನ ಸಂಘ: **ಧ್ವಜಾರೋಹಣ:** ಕೆ.ಎನ್. ರಾಮ್ ಮೋಹನ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಸ್ಥಳ: ಕನ್ನಡ ಯುವಜನ ಸಂಘದ ಆವರಣ, ಹೊಂಬೇಗೌಡ ನಗರ, ಬೆಳಿಗ್ಗೆ 7.30

ಕನ್ನಡ ಸಾಹಿತ್ಯ ಪರಿಷತ್ತು: **ಧ್ವಜಾರೋಹಣ:** ಮಹೇಶ ಜೋಶಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 8.30

ನ್ಯಾಷನಲ್ ಕಾಲೇಜು: ಧ್ವಜಾರೋಹಣ: ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಉಪಸ್ಥಿತಿ: ಡಾ.ವೈ.ಸಿ. ಕಮಲಾ, ಪ್ರೊ.ಸಿ.ಆರ್. ಸಂಪತಕುಮಾರಿ, ಸ್ಥಳ: ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 8.30

ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲೆ: ಧ್ವಜಾರೋಹಣ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಸ್ಥಳ: ಮಾಣೇಕ್ ಷಾ ಪರೇಡ್ ಮೈದಾನ, ಬೆಳಿಗ್ಗೆ 9

ಬೆಂಗಳೂರು ವಿಶ್ವವಿದ್ಯಾಲಯ: **ಧ್ವಜಾರೋಹಣ:** ಪ್ರೊ. ವೇಣುಗೋಪಾಲ್ ಕೆ.ಆರ್., ಸ್ಥಳ: ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 9

ಕರ್ನಾಟಕ ಲೋಕಾಯುಕ್ತ: ನ್ಯಾ. ಪಿ. ವಿಶ್ವನಾಥ ಶೆಟ್ಟಿ, ಉಪಸ್ಥಿತಿ: ನ್ಯಾ. ಬಿ.ಎಸ್. ಪಾಟೀಲ, ಸ್ಥಳ: ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಳಿಗ್ಗೆ 9

ಹೈಕೋರ್ಟ್: ಧ್ವಜಾರೋಹಣ: ನ್ಯಾ. ಋತುರಾಜ್ ಅವಸ್ಥಿ, ಸ್ಥಳ: ಹೈಕೋರ್ಟ್, ಕಬ್ಬನ್ ಉದ್ಯಾನ, ಬೆಳಿಗ್ಗೆ 9.30

ಉದಯಭಾನು ಕಲಾಸಂಘ: **ಧ್ವಜಾರೋಹಣ:** ಶ್ರೀರಾಮೇಗೌಡ, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಕೆಂಪೇಗೌಡ ನಗರ, ಬೆಳಿಗ್ಗೆ 9.30

ಇತರ ಕಾರ್ಯಕ್ರಮಗಳು

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಸ್ಮರೋತ್ಸವ: ವಿ. ಸೋಮಣ್ಣ, ಮುಖ್ಯ ಅತಿಥಿಗಳು: ಸಂತೋಷ್ ಹಾನಗಲ್, ಅರುಣ್ ಸೋಮಣ್ಣ, ಆಯೋಜನೆ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಳಗ, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣ, 4ನೇ ಅಡ್ಡರಸ್ತೆ, ಜೆ.ಕೆ. ಡಬ್ಲ್ಯು ಬಡಾವಣೆ, ಬೆಳಿಗ್ಗೆ 9.30

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಸ್ಮರೋತ್ಸವ: ಆಶೀರ್ವಚನ: ನಿರಂಜನಾನಂದಪುರಿ ಸ್ವಾಮೀಜಿ, ಮಾಲಾರ್ಪಣೆ: ಬಸವರಾಜ ಬೊಮ್ಮಾಯಿ, ಸಿದ್ದರಾಮಯ್ಯ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಆವರಣ, ದೇವರಾಜ ಅರಸು ವೃತ್ತ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಎದುರು, ಬೆಳಿಗ್ಗೆ 10

ಗಣರಾಜ್ಯೋತ್ಸವ ಪ್ರಯುಕ್ತ ಸಂವಾದ ಹಾಗೂ ಸಲಹೆ ಸಂಗ್ರಹ: ವಿಷಯ: 'ಭಾರತೀಯ ಕಾನೂನು ಸುಧಾರಣೆಗಳು', ಭಾಷಣ: ತೇಜಸ್ವಿ ಸೂರ್ಯ, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬಿಜೆಪಿ ಕಾನೂನು ವಿಭಾಗ, ಸ್ಥಳ: ಮೌರ್ಯ ಹೋಟೆಲ್, ಆನಂದ ರಾವ್ ವೃತ್ತ, ಬೆಳಿಗ್ಗೆ 11.30

ಪುಸ್ತಕ ಬಿಡುಗಡೆ: 'ಕರ್ನಾಟಕದ ಜ್ಞಾನ ಸಂಪದ', 'ಚೈತನ್ಯದಾಯಕ ನುಡಿಮುತ್ತುಗಳು', ಪುಸ್ತಕ ಬಿಡುಗಡೆ: ಮರಿಮಲ್ಲಯ್ಯ, ಅಧ್ಯಕ್ಷತೆ: ಬಿ.ವಿ. ಮುನಿರಾಜು, ಸ್ಥಳ: ಶ್ರೀ ಸತ್ಯ ಕಲ್ಯಾಣ ಮಂಟಪ, ನ್ಯಾಷನಲ್ ಕಾಲೇಜು ಎದುರು, ಬಸವನಗುಡಿ, ಮಧ್ಯಾಹ್ನ 3.30

ಸಂವಾದ: 'ಭಾರತ ಜ್ಞಾನ ವ್ಯವಸ್ಥೆ ಹಾಗೂ ಇತಿಹಾಸ ತಿರುಚುವಿಕೆ', ಭಾಷಣಕಾರರು: ಪ್ರೊ. ಕುಂಕುಮ್ ರಾಯ್, ಪ್ರೊ. ಸೌಮಿತ್ರೊ ಬ್ಯಾನರ್ಜಿ, ಆಯೋಜನೆ: ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ಗಣರಾಜ್ಯೋತ್ಸವ ಪ್ರಯುಕ್ತ ಚರ್ಚೆ: 'ನಮ್ಮ ಸಂವಿಧಾನ-ನಾವೆಷ್ಟು ತಿಳಿದಿದ್ದೇವೆ?', ಸಂವಿಧಾನ ಪ್ರಸ್ತಾವನೆಯ ಅನಾವರಣ: ಮೋಹನ್ ಕುಮಾರ್, ವಿಷಯ ಮಂಡನೆ: ಪ್ರೊ.ಎಂ. ಅಬ್ದುಲ್ ರೆಹಮಾನ್ ಪಾಷ, ಆಯೋಜನೆ: ಸಂವೇದನಾ ಬೆಂಗಳೂರು, ಆರ್.ಟಿ.ನಗರ ಕಲಾ ಸಾಹಿತ್ಯ ವೇದಿಕೆ, ಸ್ಥಳ: ಪುನೀತ್ ರಾಜ್‌ಕುಮಾರ್ ಚಾವಡಿ, ಕುವೆಂಪು ಉದ್ಯಾನ, 2ನೇ ಬ್ಲಾಕ್, ಆರ್.ಟಿ. ನಗರ, ಸಂಜೆ 4.15

ಪುಸ್ತಕ ಬಿಡುಗಡೆ: 'ಚಕ್ರವರ್ತಿಯಾಗದ ನಚ್ಚಿ', ಮುಖ್ಯ ಅತಿಥಿಗಳು: ವೂಡೇ ಪಿ. ಕೃಷ್ಣ, ಅಡಗೂರು ಎಚ್. ವಿಶ್ವನಾಥ್, ಸಂಪಾದಕರು: ಎನ್.ಕೆ. ಮೋಹನ್ ರಾಮ್, ವಿಜಯ್ ಭಟ್, ಸ್ಥಳ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಭವನ, ಸಂಜೆ 5



ವಿದೇಶಿ ದೇಣಿಗೆ: ಅರ್ಜಿ ವಿಚಾರಣೆಗೆ ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಂದಾಜು 6,000 ಎನ್‌ಜಿಒಗಳ (ಸ್ವಯಂ ಸೇವಾ ಸಂಸ್ಥೆ) ವಿದೇಶಿ ದೇಣಿಗೆ ಸಂಗ್ರಹ ಪರವಾನಗಿಯನ್ನು ನವೀಕರಿಸದ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

‘ಆ ಎನ್‌ಜಿಒಗಳು ಅಂತಿಮ ಕಾಲಾವಧಿಯಲ್ಲಿ ನವೀಕರಣ ಕೋರಿ ಅರ್ಜಿ ಸಲ್ಲಿಸದಿದ್ದರೆ, ಅವರಿಗೆ ದೇಣಿಗೆ ಸಂಗ್ರಹದಲ್ಲಿ ಆಸಕ್ತಿ ಇಲ್ಲ ಎಂದೇ ಭಾವಿಸಲಾಗುತ್ತದೆ’ ಎಂದು ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ದಿನೇಶ್ ಮಾಹೇಶ್ವರಿ ಹಾಗೂ ಸಿ.ಟಿ. ರವಿಕುಮಾರ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿದೆ.

ಅರ್ಜಿ ಸಲ್ಲಿಸಿರುವ ಅಮೆರಿಕ ಮೂಲದ ಗ್ಲೋಬಲ್ ಪೀಸ್ ಇನಿಶಿಯೇಟಿವ್ ಸಂಸ್ಥೆಯ ಪರ ವಕೀಲ ಸಂಜಯ್ ಹೆಗ್ಡೆ, ಈ ಎನ್‌ಜಿಒಗಳು ಭಾರತದ ಲಕ್ಷಾಂತರ ಜನರಿಗೆ ನೆರವು ನೀಡುತ್ತಿದ್ದು, ವಿದೇಶಿ ದೇಣಿಗೆ ಸಂಗ್ರಹ ಪರವಾನಗಿ ರದ್ದು-ಗೊಳಿಸಿದ್ದರಿಂದ ಕೋವಿಡ್- 19 ಸಂದರ್ಭದಲ್ಲಿ ಅಗತ್ಯ ನೆರವು ನೀಡುವುದಕ್ಕೆ ಹಿನ್ನಡೆ ಉಂಟಾಗಿದೆ ಎಂದು ವಾದ ಮಂಡಿಸಿದರು.

ಇದಕ್ಕೆ ಕೇಂದ್ರದ ಪರ ಪ್ರತಿಕ್ರಿಯೆ ನೀಡಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 11,000ಕ್ಕೂ ಅಧಿಕ ಎನ್‌ಜಿಒಗಳು ಅಂತಿಮ ಗಡುವಿನೊಳಗೆ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಅಡಿ ಪರವಾನಗಿ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿ ಈಗಾಗಲೇ ಅನುಮತಿ ಪಡೆದುಕೊಂಡಿವೆ ಎಂದು ಪೀಠಕ್ಕೆ ತಿಳಿಸಿದರು.

‘ಸರ್ಕಾರಕ್ಕೆ ಈ ಸಂಸ್ಥೆಗಳ ಬಗ್ಗೆ ಮಾಹಿತಿ ಇದೆ. ಆದರೆ, ಅರ್ಜಿ ಸಲ್ಲಿಸದೇ ನವೀಕರಣ ಕೋರಿ ಪಿಐಎಲ್ ಸಲ್ಲಿಸಿರುವುದರ ಹಿಂದಿನ ಉದ್ದೇಶ ಏನು ಎಂಬುದು ತಿಳಿಯದಾಗಿದೆ’ ಎಂದ ಮೆಹ್ತಾ, ‘ಅಮೆರಿಕದ ಹ್ಯೂಸ್ಟನ್ ಮೂಲದ ವ್ಯಕ್ತಿಗೆ ಛತ್ತೀಸ್‌ಗಢದ ಬಗ್ಗೆ ಏಕೆ ಆಸಕ್ತಿ ಎಂಬುದೇ ಕುತೂಹಲ ಮೂಡಿಸಿದೆ’ ಎಂದು ಅಚ್ಚರಿ ವ್ಯಕ್ತಪಡಿಸಿದರು.



ವಂಚನೆ: ಜಾಮೀನು ನಿರಾಕರಣೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ (ಕೆಎಸ್‌ಆರ್‌ಟಿಸಿ) ಸಂಚಾರಿ ನಿರೀಕ್ಷಕ ಹುದ್ದೆ ಕೊಡಿಸುವುದಾಗಿ ನಂಬಿಸಿ ಅರಗಿಶೆಟ್ಟಿ ಎಂಬುವರಿಂದ ₹ 11 ಲಕ್ಷ ಲಂಚ ಪಡೆದು ವಂಚಿಸಿದ ಪ್ರಕರಣದ ಪ್ರಮುಖ ಆರೋಪಿ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮಂಜುನಾಥ ಬಿಲ್ಲಾ ನಾಯಕ್‌ಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಜಾಮೀನು ಕೋರಿ ಬಳ್ಳಾರಿ ಜಿಲ್ಲೆ ಹಗರಿ-ಬೊಮ್ಮನಹಳ್ಳಿ ಕೂಗಲಿ ತಾಂಡಾದ ನಿವಾಸಿ ಮಂಜುನಾಥ್ ಬಿಲ್ಲಾ ನಾಯಕ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

’ಅರ್ಜಿದಾರರ ವಿರುದ್ಧದ ಆರೋಪಗಳು ಗಂಭೀರ ಸ್ವರೂಪದಿಂದ ಕೂಡಿವೆ. ಈ ಹಂತದಲ್ಲಿ ಜಾಮೀನು ನೀಡಿದರೆ ಆರೋಪಿಯು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಹಾಗೂ ಸಾಕ್ಷ್ಯಾಧಾರ ನಾಶಪಡಿಸುವ ಸಾಧ್ಯತೆಯಿದೆ‘ ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ ಜಾಮೀನು ನಿರಾಕರಿಸಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	35.68 ಕೋಟಿ ▲	3.97ಕೋಟಿ
ಸಕ್ರಿಯ ಪ್ರಕರಣ	6.82 ಕೋಟಿ ▲	22,36 ಲಕ್ಷ ▼
ಗುಣಮುಖ	28.29 ಕೋಟಿ ▲	3.70 ಕೋಟಿ ▲
ಸಾವು	56.26 ಲಕ್ಷ ▲	4.90 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	24.23 ಲಕ್ಷ ▲	2.55 ಲಕ್ಷ ▼
ಗುಣಮುಖ	21.35 ಲಕ್ಷ ▲	2.67 ಲಕ್ಷ ▲
ಸಾವು	6,645 ▲	614 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ) -ಲಕ್ಷಗಳಲ್ಲಿ

ಅಮೆರಿಕ	ಫ್ರಾನ್ಸ್	ಸ್ಪೇನ್
4.65 ▲	1.08 ▲	1,01

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಫ್ರಾನ್ಸ್	ಸ್ಪೇನ್
2.72 ಕೋಟಿ ▲	62.11 ▼	35.62

ಎಲ್ಲಿ ಹೆಚ್ಚು ಸಾವು

1.42 ಲಕ್ಷ	ಮಹಾರಾಷ್ಟ್ರ
51,987 ▲	ಕೇರಳ
37,264 ▲	ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

75.35 ▲	ಮಹಾರಾಷ್ಟ್ರ
56.69 ▲	ಕೇರಳ
31.64 ▲	ತಮಿಳುನಾಡು

(ಭಾರತ ಕೋವಿಡ್ ಸಂಖ್ಯೆ ವಿವರ: ಮಂಗಳವಾರ ಬೆಳಿಗ್ಗೆ 8ರವರೆಗಿನ ಮಾಹಿತಿ)

ಪ್ರಜಾವಾಣಿ ಗ್ರಾಫಿಕ್ಸ್

ಐಎಸ್‌ಐ ಗುರುತಿಲ್ಲದ ಹೆಲ್ಮೆಟ್ ನಾಶ

ಬೆಂಗಳೂರು: ಐಎಸ್‌ಐ ಗುರುತು ಇಲ್ಲದ ಹಾಗೂ ಕಳಪೆ ಹೆಲ್ಮೆಟ್‌ಗಳ ಬಳಕೆಯನ್ನು ಸಂಚಾರ ಪೊಲೀಸರು ನಿಷೇಧಿಸಿದ್ದು, ಇಂಥ ಪ್ರಕರಣದಲ್ಲಿ ಜಪ್ತಿ ಮಾಡಲಾಗಿರುವ ಹೆಲ್ಮೆಟ್‌ಗಳನ್ನು ನಾಶ-ಪಡಿಸುತ್ತಿದ್ದಾರೆ.

‘ನಗರದಲ್ಲಿ ಸಂಭವಿಸಿದ ಹಲವು ಅಪಘಾತಗಳಲ್ಲಿ ಬೈಕ್ ಸವಾರ ಹಾಗೂ ಹಿಂಬದಿ ಸವಾರರು ಮೃತ-ಪಟ್ಟಿದ್ದಾರೆ. ಆ ಪೈಕಿ ಕೆಲವರು, ಕಳಪೆ ಮಟ್ಟದ ಹೆಲ್ಮೆಟ್ ಧರಿಸಿದ್ದು ಅಧ್ಯಯನದಿಂದ ಗೊತ್ತಾಗಿತ್ತು. ಅದೇ ಕಾರಣಕ್ಕೆ ಇದೀಗ, ಐಎಸ್‌ಐ ಗುರುತು ಇರುವ ಗುಣಮಟ್ಟದ ಹೆಲ್ಮೆಟ್ ಬಳಕೆಯನ್ನು ಕಡ್ಡಾಯ ಮಾಡಲಾಗಿದೆ‘ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

16,26,331 ▲	ಒಟ್ಟು ಸೋಂಕಿತರು (16,07,226 ನಿನ್ನೆಯ ವಿವರ)
2,12,460 ▼	ಸಕ್ರಿಯ ಪ್ರಕರಣಗಳು
13,97,344 ▲	ಗುಣಮುಖ ಆದವರು
16,526 ▲	ಒಟ್ಟು ಸಾವು

ದಿನದ ಮಾಹಿತಿ

ಹೊಸ ಪ್ರಕರಣ	19,105 ▼
ಗುಣಮುಖ	33,011 ▲
ಸಾವು	19 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕಾಣೆಯಾಗಿದ್ದಾರೆ



ಮೇರಿ ಹೆಪ್ಸಿಭ, 35 ವರ್ಷ
ದಿನಾಂಕ 18–1–2020 ಕ್ಕೆ BEL ನಾಗಾಲ್ಯಾಂಡ್ ಕಾಲೋನಿ ಇಂದ ಕಾಣೆಯಾಗಿರುತ್ತಾರೆ.
ಚಿಕ್ಕ ಮಗುವನ್ನು ಬಿಟ್ಟು ಹೋಗಿರುತ್ತಾರೆ.
ತೆಲುಗು ಬಾಷೆ ಮಾತನಾಡುತ್ತಾರೆ
ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದಯವಿಟ್ಟು ಸಂಪರ್ಕಿಸಿ: 7829219277



ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕಸಾಪ ಸದಸ್ಯತ್ವ ಪಡೆದ ದೇವೇಗೌಡ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಒಂದು ಕೋಟಿ ಸದಸ್ಯತ್ವ ಅಭಿಯಾನ ಹಮ್ಮಿಕೊಂಡಿದೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಪರಿಷತ್ತಿನ ಆಜೀವ ಸದಸ್ಯತ್ವ ಸ್ವೀಕರಿಸುವ ಮೂಲಕ ಈ ಅಭಿಯಾನಕ್ಕೆ ಬೆಂಬಲ ಸೂಚಿಸಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಸದಸ್ಯತ್ವ ಪ್ರತಿಯನ್ನು ಎಚ್.ಡಿ. ದೇವೇಗೌಡ ಅವರಿಗೆ ಹಸ್ತಾಂತರಿಸಿದರು.

'ಕನ್ನಡ ಸಾಹಿತ್ಯ ಪರಿಷತ್ತಿನ ನಡೆ-ಕನ್ನಡಿಗರ ಕಡೆ' ಎಂಬ ಆಶಯದೊಂದಿಗೆ ಒಂದು ಕೋಟಿ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ಹೇಳಿದ್ದಾರೆ.

ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕರಾಗಿ ನಳಿನ್ ಅತುಲ್

19 ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪರೀಕ್ಷಾ ನಿಯಂತ್ರಕರಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಲಬುರ್ಗಿ ವಿಭಾಗದ ಹೆಚ್ಚುವರಿ ಆಯುಕ್ತರಾಗಿದ್ದ ನಳಿನ್ ಅತುಲ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಈ ಹುದ್ದೆಯಲ್ಲಿ ಪ್ರಭಾರ ಆಗಿದ್ದ ಎಂ. ಕನಗವಲ್ಲಿ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ಒಟ್ಟು 19 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ವರ್ಗಾವಣೆಯಾದವರು: ಅನಿಲ್‌ಕುಮಾರ್ ಬಿ.ಎಚ್- ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ. ಶಮ್ಲಾ ಇಕ್ಬಾಲ್- ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ. ಎಂ. ಕನಗವಲ್ಲಿ- ಆಯುಕ್ತೆ, ಆಹಾರ ಇಲಾಖೆ. ವಿ. ವಿ. ಜೋತ್ಸ್ನಾ- ವ್ಯವಸ್ಥಾಪಕ ನಿರ್ದೇಶಕಿ, ರೇಷ್ಮೆ ಕೈಗಾರಿಕಾ ನಿಗಮ. ಯಶವಂತ ಗುರುಕರ್- ಜಿಲ್ಲಾಧಿಕಾರಿ, ಕಲಬುರ್ಗಿ. ಹೆಪ್ಸಿಬಾ ರಾಣಿ ಕೊರ್ಲಪಾಟಿ- ವ್ಯವಸ್ಥಾಪಕ ನಿರ್ದೇಶಕಿ, ಕರ್ನಾಟಕ ವಿದ್ಯುತ್ ಕಾರ್ಖಾನೆ. ಕೆ.ಎ. ದಯಾನಂದ- ಆಯುಕ್ತ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಜಗದೀಶ ಜಿ- ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ. ಕೆ.ಎಸ್. ಲತಾಕುಮಾರಿ- ನಿರ್ದೇಶಕಿ, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ. ವೆಂಕಟ್ ರಾಜ - ಜಿಲ್ಲಾಧಿಕಾರಿ, ಕೋಲಾರ. ಶಿಲ್ಪಾ ನಾಗ್- ಆಯುಕ್ತೆ, ಗ್ರಾಮೀಣಾಭಿವೃದ್ಧಿ ಇಲಾಖೆ. ಶಿಲ್ಪಾ ಶರ್ಮ- ಆಯುಕ್ತೆ, ಪಂಚಾಯತ್‌ರಾಜ್ ಇಲಾಖೆ. ಎನ್.ಎಂ. ನಾಗರಾಜ- ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ವೈದ್ಯಕೀಯ ಸಾಮಗ್ರಿಗಳ ಪೂರೈಕೆ ನಿಗಮ. ಶೇಖ್ ತನ್ವೀರ್ ಆಸಿಫ್- ಹೆಚ್ಚುವರಿ ಆಯುಕ್ತ, ಅಬಕಾರಿ ಇಲಾಖೆ. ಲಿಂಗಮೂರ್ತಿ ಜಿ- ಕಾರ್ಯದರ್ಶಿ, ರಾಜ್ಯ ಚುನಾವಾಣಾ ಆಯೋಗ. ಇಬ್ರಾಹಿಂ ಮೈಗೂರ- ಕಾರ್ಯದರ್ಶಿ, ರೇರಾ. ಗರಿಮಾ ಪವಾರ್- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಯಾದಗಿರಿ. ಭುವನೇಶ ದೇವಿದಾಸ ಪಾಟೀಲ- ವ್ಯವಸ್ಥಾಪಕ ನಿರ್ದೇಶಕ, ಕಲ್ಯಾಣ ಕರ್ನಾಟಕ ಸಾರಿಗೆ ನಿಗಮ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 15/2021-22 ದಿನಾಂಕ:14.01.2022.
(ದ್ವಿ ಟೆಂಡರ್ ದಾಖಲೆ & ಇ- ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ ಕರ್ನಾಟಕ ನೀರಾವರಿ ನಿಗಮದಲ್ಲಿ ನೊಂದಾಯಿತವಾಗಿರುವ ಕೆ.ಎನ್.ಎನ್.ಎಲ್ ಕೆಟಗೆರಿ - III ಮತ್ತು ಮೇಲ್ಪಟ್ಟ ದರ್ಜೆಯ ಹಾಗೂ ಕೆ.ಪಿಡಬ್ಲ್ಯೂ.ಡಿ ಕ್ಲಾಸ್-I ದರ್ಜೆಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

ಶಿಕಾರಿಪುರ ತಾಲ್ಲೂಕು ವ್ಯಾಪ್ತಿಯಲ್ಲಿನ ವಿವಿಧ ಅಭಿವೃದ್ಧಿಯ 26 ಸಂಖ್ಯೆ ಕಾಮಗಾರಿಗಳ ಟೆಂಡರಿಗಿಟ್ಟ ಮೊತ್ತ ರೂ. 498.55 ಲಕ್ಷಗಳಿಂದ ರೂ. 74.77 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 4.99 ಲಕ್ಷಗಳಿಂದ ರೂ. 0.75 ಲಕ್ಷಗಳು.

(1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ : **24.01.2022 ರಿಂದ 01.02.2022 ಸಂಜೆ 5.30 ರವರೆಗೆ.** (2) ಪ್ರೀಬಿಡ್ ಸಭೆಯ ದಿನಾಂಕ : **28.01.2022 ಬೆಳಿಗ್ಗೆ 11.00 ಗಂಟೆಗೆ (ಸ್ಥಳ : ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕನೀನಿನಿ, ದಂ.ಜ.ಯೋ, ಶಿಕಾರಿಪುರ.** (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **03.02.2022 ಬೆಳಿಗ್ಗೆ 11.00 ಗಂಟೆಗೆ.** (4) **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.**

ಹೆಚ್ಚಿನ ಮಾಹಿತಿಗಾಗಿ (**www.eproc.karnataka.gov.in**) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ.

ವಾ.ಸಾ.ಸಂ.ಇ./ಶಿ/ನಂ148-01 ಝೇಂಕಾರ್/2021-22

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕ.ನೀ.ನಿ.ನಿ., ವಾರಾಹಿ ಯೋಜನಾ ವಿಭಾಗ
ಸಿದ್ದಾಪುರ, ಉಡುಪಿ ಜಿಲ್ಲೆ -576229
ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಇಂ/ಕನೀನಿನಿ/ವಾಯೋವಿ/ಪಿಬಿ/ಟೆಂಡರ್/26 & 27/2021-22 /1256 & 1257 ದಿನಾಂಕ: 24-01-2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ) (Two tender document system)

ವಾರಾಹಿ ನೀರಾವರಿ ಯೋಜನೆಯಡಿ ವಾರಾಹಿ ಯೋಜನಾ ವಿಭಾಗದ ವ್ಯಾಪ್ತಿಯಡಿ ಕಾರ್ಯ ನಿರ್ವಹಿಸುತ್ತಿರುವ ನಂ.1 ವಾರಾಹಿ ಯೋಜನಾ ಉಪವಿಭಾಗ ಕಛೇರಿಗೆ ಸಂಬಂಧಿಸಿದ ಕಾಮಗಾರಿಯನ್ನು ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ವಿವರಗಳು ಕೆಳಕಂಡಂತಿರುತ್ತದೆ.

(1) ಗುತ್ತಿಗೆದಾರರು **www.eproc.karnataka.gov.in** ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. (2) ಟೆಂಡರಿಗಿಟ್ಟ **ಮೊತ್ತ ರೂ. 473.98 & 434.52 ಲಕ್ಷ** (3) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ ದಿನಾಂಕ: **27/01/2022** (4) ಗುತ್ತಿಗೆದಾರರು ಟೆಂಡರ್ ಬಗ್ಗೆ ಸ್ಪಷ್ಟೀಕರಣ ಕೇಳಲು **ದಿನಾಂಕ: 01/02/2022** (5) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ **ದಿನಾಂಕ: 04/02/2022 ಸಂಜೆ 5.00 ಗಂಟೆಯವರೆಗೆ** (6) **ತಾಂತ್ರಿಕ** ಬಿಡ್‌ನ್ನು ತೆರೆಯುವ **ದಿನಾಂಕ: 05/02/2022** ಹೆಚ್ಚಿನ ವಿವರಗಳಿಗಾಗಿ **http://eproc.karnataka.gov.in, www.knnlindia.com** ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ವಾರಾಹಿ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ಜಿಲ್ಲೆ ಇವರನ್ನು ಸಂಪರ್ಕಿಸುವುದು. (7) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, **www.eproc.karnataka.gov.in** ವೆಬ್‌ಸೈಟ್ ನಲ್ಲಿ ಪ್ರಚುರಪಡಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ ಉಡುಪಿ ಜಿಲ್ಲೆ

ವಾಸಾಇ/ಸನಿಉ/ಎಂಸಿಎ/597/21-22 ದಿ:25.01.2022

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ-585105
ಫೋ.ನಂ 08472-278634/256944, Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021-22/2313 ದಿನಾಂಕ : 21-01-2022

ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ Sanitary Napkins incinerator machine with smoke control unit ಸರಬರಾಜು ಮಾಡಲು ಅರ್ಹ ಸರಬರಾಜುದಾರರು/ವಿತರಕರು ಇವರಿಗೆ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : Supply of sanitary Napkins incinerator machine with smoke control unit, 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : **1,04,40,000/-**, ಗರಿಷ್ಠ : **1,04,40,000/-**, 3) ಲೆಕ್ಕ ಶೀರ್ಷಿಕೆ : SBM, 4) ಗುತ್ತಿಗೆದಾರರ ಅರ್ಹತೆ : ಸರಬರಾಜುದಾರರು/ವಿತರಕರು, 5) ಟೆಂಡರ ಫಾರಂ ಪಡೆಯುವ ದಿನಾಂಕ : **24-01-2022 ರಿಂದ 07-02-2022,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ :ಇ-ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 07-02-2022 ಸಾಯಂಕಾಲ 4:00 ಗಂಟೆವರೆಗೆ, 8) ಪ್ರಿ ಬಿಡ್ ಸಭೆ ದಿನಾಂಕ: 03-02-2022 ಬೆ. 11.00 ಗಂಟೆಗೆ, 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ: 08-02-2022 ಸಾಯಂಕಾಲ 4.01 ಗಂಟೆಗೆವೆರೆಗೆ, 10) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : 10-02-2022 ಬೆ. 11.00 ಗಂಟೆಯ ನಂತರ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/994/ಎಂ.ಸಿ.&ಎ/2021-22

ಕರ್ನಾಟಕ ಸರ್ಕಾರ GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BALLARI Cantonment Area,
Director:8147796529, CAO:8147796526,
PA: 8147796539, website: www.vimsBallari.org.in
e-mail : directorvimsballari@gmail.com

No. VIMS/SUP/69/2021-22, DATE: 24.01.2022

ಮರು ಇ-ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಡಿಜಿಟಲ್ ಎಕ್ಸ್-ರೆ ಫಿಲ್ಮ್‌ಗಳನ್ನು ಧರ ಗುತ್ತಿಗೆ ಆಧಾರದ ಮೇಲೆ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ-1999 ಮತ್ತು ನಿಯಮ-2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ ಹಾಗು ಹೆಚ್ಚಿನ ಮಾಹಿತಿಯನ್ನು ಕಾರ್ಯಾಲಯದ ಕಛೇರಿ ಅವಧಿಯಲ್ಲಿ ಪಡೆಯಲು ಮತ್ತು ವೆಬ್‌ಸೈಟ್: **https://eproc.karnataka.gov.in** ಮೂಲಕ ಪಡೆಯಲು ಕೋರಿದೆ.

01. ಟೆಂಡರ್ ಫಾರಂ ಅನ್ನು ವೆಬ್‌ಸೈಟ್ - http//eproc.karnataka.gov.in ರಲ್ಲಿ ಡೌನ್ ಲೋಡ್ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: **24.01.2022.**
02. ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **28.01.2022 Up to 5.00 PM.**
03. ಪ್ರಿ ಬಿಡ್ ಮಿಟಿಂಗ್ ದಿನಾಂಕ ಮತ್ತು ಸಮಯ: **29.01.2022 @ 11.30 AM in the chambers of Director, VIMS, Ballari.**
04. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್‌ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **07.02.2022 up to 5.00 PM.** 05. ಟೆಂಡರಿನ ಟೆಕ್ನೋ-ಕಮರ್ಷಿಯಲ್ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ (ಮೊದಲನೇ ಬಿಡ್): **08.02.2022 @ 5:15 PM.** 06. ಸದರಿ ಟೆಂಡರಿನ ಅಂದಾಜು ಮೊತ್ತ: **126.26 Lakhs**

ಸಹಿ/- ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/671/ಎಂಸಿಎ/2021-22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ,
ಬಿಬಿಎಂಪಿ ಕಛೇರಿ ಕಟ್ಟಡ, ರಾಬರ್ಟ್‌ಸನ್ ರಸ್ತೆ, ಫ್ರೇಜ಼ರ್ ಟೌನ್, ಬೆಂಗಳೂರು.
ಸಂಖ್ಯೆ: ಕಾಅ/ಪುನ/ಟೆಂಡರ್/11/2021-22 ದಿನಾಂಕ: 25-01-2022

ಅಲ್ಪಾವಧಿ ಟೆಂಡರ್ ಆಹ್ವಾನ
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಬಿಬಿಎಂಪಿಯಲ್ಲಿ ಅಥವಾ ತತ್ಸಮಾನ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್/ ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ವಾರ್ಡ್ ಸಂಖ್ಯೆ. 78, ಪುಲಿಕೇಶಿನಗರ ಇಲ್ಲಿನ ಎಂಎಂ ರಸ್ತೆಯಲ್ಲಿ ಎಂಎಲ್ಎ ಕಛೇರಿ ಕಟ್ಟಡದ ನಿರ್ಮಾಣ. – (2ನೇ ಕರೆ)	500.00	750000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: **01-02-2022, 16.00 ಗಂಟೆಯಿಂದ** ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯು ದಿನಾಂಕ: **07-02-2022ರಂದು 16.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ, ರಾಬರ್ಟ್‌ಸನ್ ರಸ್ತೆ, ಬೆಂಗಳೂರು** ಇಲ್ಲಿ ನಡೆಯುತ್ತದೆ. 3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: **23-02-2022ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ** ಸಲ್ಲಿಸಬಹುದು. 4) ತಾಂತ್ರಿಕ ಬಿಡ್‌ಗಳನ್ನು **ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು** ಇಲ್ಲಿ ದಿನಾಂಕ: **25-02-2022ರಂದು 11.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ,
ವಿಜಯಪುರ ವಿಭಾಗ, ವಿಜಯಪುರ
ಸಂಖ್ಯೆ: ಕಕರಸಾ/ವಿವಿ/ಸಂಚಾರ/ವಾಣಿಜ್ಯ/5205/2021-22 ದಿನಾಂಕ:24.01.2022

ಇ-ಟೆಂಡರ್ ಪ್ರಕಟಣೆ ಸಂಖ್ಯೆ: 713/21/ಇ/2
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ವಿಭಾಗದ ವ್ಯಾಪ್ತಿಯಲ್ಲಿರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ / ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು,ಸದರಿ ಇ-ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳ ವಿವರಗಳು ಈ ಕೆಳಗಿನಂತೆ ಇರುತ್ತವೆ.

1) ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 21.02.2022** ರ 17.30 **ಗಂಟೆಯ ವರೆಗೆ.**
2) ಇ-ಟೆಂಡರ್ ತೆರೆಯುವ **ದಿನಾಂಕ:23.02.2022** ರಂದು 11.00 **ಗಂಟೆಯವರೆಗೆ**
ಸೂಚನೆ : 1) ಇ.ಎಂ.ಡಿ ಶುಲ್ಕವನ್ನು ಇ-ಪ್ರೋಕ್ಯೂರಮೇಂಟ್ ಮೂಲಕ ಪಾವತಿಸುವುದು.

ಸಂಸ್ಥೆಯ ಹೊಸ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 713/22 ರನ್ವಯ ಬಿಡ್‌ದಾರರು ವಿಭಾಗೀಯ ಕಚೇರಿಯಲ್ಲಿ ಬಂದು ಅರ್ಜಿ ಶುಲ್ಕ, ಇ.ಎಂ.ಡಿ, ಡಿ.ಡಿ ಹಾಗೂ ಯಾವುದೇ ದಾಖಲಾತಿಗಳು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ವೆಬಸೈಟ್ https://eproc.karnataka.gov.in ಅಥವಾ DTO ರವರ ದೂರವಾಣಿ ಸಂಖ್ಯೆ:7760992252 ಗೆ ಕರೆಮಾಡಿ ಪಡೆಯಬಹುದಾಗಿದೆ ಅಥವಾ ವಾಣಿಜ್ಯ ನಿರ್ವಾಹಕರನ್ನು ಕ.ಕ.ರ.ಸಾ ಸಂಸ್ಥೆ, ವಿಜಯಪುರ ವಿಭಾಗ, ವಿಭಾಗೀಯ ಕಚೇರಿಯಲ್ಲಿ ಭೇಟಿ ಮಾಡಿ ವಿಚಾರಿಸಬಹುದಾಗಿದೆ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ಕ.ರ.ಸಾ ಸಂಸ್ಥೆ, ವಿಜಯಪುರ ವಿಭಾಗ

ವಾಸಾಸಂಇ/ವಿಜಯಪುರ/489/ಎಂಸಿಎ/2021-22

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯಿತ್, ಚಿತ್ರದುರ್ಗ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ದೂ: ಸಂ: 08194-235464 ಇ-ಮೇಲ್: dhochitradurga@gmail.com
ಸಂ. ಸಾರಿಗೆ: ಡಿ.ಎಂ.ಎಫ್./150/3/2021-22 ದಿನಾಂಕ: 14.01.2022

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

2021-22ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನದ ಅನುದಾನದಲ್ಲಿ ಚಿತ್ರದುರ್ಗ ಜಿಲ್ಲೆಯ ಗಣಿ ಭಾದಿತ ಪ್ರದೇಶಗಳಲ್ಲಿ ಸಂಚಾರಿ ಆರೋಗ್ಯ ಘಟಕಗಳ ಸೇವೆಯನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಔಷಧಿ, ರಾಸಾಯನಿಕ ಮತ್ತು ಇತರೆ ಸಲಕರಣೆಗಳನ್ನು ಖರೀದಿಸಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ-1999 ಮತ್ತು ನಂತರದ ತಿದ್ದುಪಡಿ ಆದೇಶಗಳ ಅನ್ವಯ ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳನ್ನು ಮತ್ತು ಟೆಂಡರ್ ಅರ್ಜಿಗಳನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka. gov.in ನಲ್ಲಿ ಪಡೆಯಬಹುದು. ಟೆಂಡರ್ ವಿವರ: (1) **Procurement of Medicines, Chemicals & other Items to implement the mobile medical units service at Mining affected areas in Chitradurga Distinct. Indent No DHFWS/2021-22/IND 5405** (3) ಇಎಂಡಿ ಮೊತ್ತ ರೂ.ಗಳಲ್ಲಿ:- 50,000/- 1) ಖಾಲಿ ಟೆಂಡರ್ ಅರ್ಜಿಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡುವ ಪ್ರಾರಂಭದ ದಿನಾಂಕ: 14.01.2022 2) ಭರ್ತಿ ಮಾಡಿದ ಟೆಂಡರ್ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 28.01.2022 ರಂದು 17.00 ಗಂಟೆಯವರೆಗೆ. 3) ಭರ್ತಿ ಮಾಡಿದ ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 29.01.2022 ರಂದು 17.01 ಗಂಟೆ ನಂತರ. (4) ಭರ್ತಿ ಮಾಡಿದ ಟೆಂಡರ್‌ನ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 29.01.2022 ರಂದು 11.00 ಗಂಟೆ ನಂತರ.

DIPR/CTA/MCA/ 812/2021-22

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Engg/ Production Technical

WANTED DIPLOMA or BE in electronics and communication, freshers and 2 years experienced for Poornaprajna Electronics, near glass factory, Kanakapura road. Salary 15K-25K Contact 8880888071.

REQUIRED: CIVIL SITES ENGINEER STRUCTURAL ENGINEER, ACCOUNTS ASSISTANT. Minimum 4+ years Experience. Email resume: turnkey.jobs@gmail.com Phone: 080- 26600669.

General

OPPORTUNITY FOR Retired Officials, Bankers, NRI, Teachers, Professionals, Homemakers, CAs. Earn salary+ Incentives. 8095301555

Marketing & Sales

WANTED SALES EXECUTIVES.Candidates in and around Nagarabhavi, Chandra-Layout, Vijayanagar.Walk-in interview on:27.1.2022 at 10am to 2pm. Contact:9900265678

Part-Time Jobs

WORK FROM HOME, Earn 30- 50K more per month. Qualification: PUC and above. Malleshwaram. 7899493370

REPUTED MNC Company Provide Work From Home to 30 to 35K at Malleswaram: 7019215243/ 9886641282

Receptionist/ Secretary

SRIRAKSHA CREDIT CO-OPERATIVE SOCIETY. Moodalapallya,Nagarabhavi Main Road.REQUIRED SECRETARY (Male)with B.Com.Candidates in and around Nagarabhavi, Chandralayout,Vijayanagar. Walk-in-interview on:27.1.2022 at 10am to 2pm.Contact:080-23396322

Teachers/ Professors

ST SOPHIA Convent School (CBSE) Nagarabhavi requires trained experienced Female Academic Coordinators and Teachers for the academic year 2022-23 to subjects Mathematics, Science, Social Science, English, Kannada and Hindi for primary and High school. Walk-in interview scheduled on Saturday 5th February 2022 principal@stsophiaconvent.org Contact: 9243031872

HARWARD
Pre-University College
Dasanapura, Tumkur Road, Bangalore North – 562123
www.harwardinstitutions.com
WANTED
Chemistry (M.Sc, B.Ed) Integrated Lecturer (10 yrs Experience)
Accountant- (Female) Exp in Education institutions with typing skill)
PRO, Marketing Executives
Please send CV to infoharwardints@gmail.com
Ph:9880112833/9945230286

SANSKRIT TEACHERS needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 WALK-IN WELCOME.

Wanted

FRESHERS DATA ENTRY OPERATOR Required at Hombegowda Nagar, Near NIMHANS Hospital, Bangaluru, Immediately Below Degree/ 10/ 12, M/F. Contact: 9902127585, 9902999711, 9322928212.

REAL ESTATE SELLING

Flat

Sahakarnagar

3 BHK Lease 3yrs 30 Lakhs with Terrace Area Building, Also Sale 2 BHK 1356 Sqft Semi furn : 8904028166

Industrial & Factory

Tumkur Road

SALE 150 Acres Agriculture Land near Dabaspet. Rs. 45 lakhs to 1.25 cr/ acre. 9141326819

REAL ESTATE BUYING

Sites

Anjanapura

ANJANAPURA LAYOUT Wanted BDA Sites 40x60, 50x80 Any Block Any Facing. Immediate settlement contact 6366722845.

Arkavathy Layout

ARKAVATHY LAYOUT Wanted BDA Sites 40x60, 50x80 Any Block any facing. Immediate settlement contact 6366722845.

PUBLIC NOTICE

ಸಾರ್ವಜನಿಕ ನೋಟಿಸು

ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ರಾಯಪ್ಪನಹಳ್ಳಿ ಗ್ರಾಮದ ಸರ್ವೆ ನಂಬರು.98/1ರಲ್ಲಿ 01ಎಕರೆ 08 ಗುಂಟೆ (03 ಗುಂಟೆ ಖರಾಬು ಸೇರಿ) ಮತ್ತು 99ರಲ್ಲಿ 02ಎಕರೆ 28ಗುಂಟೆ (07ಗುಂಟೆ ಖರಾಬು ಸೇರಿ) ಖುಷ್ಕಿ ಜಮೀನಿನ ಸ್ವತ್ತನ್ನು ಇದರ ಜಂಟಿ ಮಾಲೀಕರು-ಗಳಾದ ರಾಯಪ್ಪನಹಳ್ಳಿ ಗ್ರಾಮದ ನಿವಾಸಿಗಳಾದ ಲೇಟ್.ಶ್ರೀ.ಮುನಿಯಪ್ಪನವರ ಮಕ್ಕಳಾದ ಶ್ರೀ. ಮುನಿರಾಜ, ಶ್ರೀಮತಿ.ನಾಗರತ್ನಮ್ಮ, ಶ್ರೀಮತಿ. ಭಾಗ್ಯಮ್ಮ, ಶ್ರೀಮತಿ.ಕೃಷ್ಣಮ್ಮ, ಶ್ರೀಮತಿ.ಲಕ್ಷ್ಮಮ್ಮ ಮತ್ತು ಶ್ರೀ.ರಾಮಯ್ಯ ಬಿನ್ ಲೇಟ್.ಮುನಿಕೆಂಪಯ್ಯ ಮತ್ತು ಅವರ ಕುಟುಂಬದವರಿಂದ ನನ್ನ ಕಕ್ಷಿದಾರ-ರಾದ ಶ್ರೀ.ವನಿತ್ ಶಾಮುಸುಂದರ್ ಬಿನ್ ಶಾಮ-ಸುಂದರ್, ವಾಸ.ನಂ.403,12ನೇ ಮುಖ್ಯ ರಸ್ತೆ, ರಾಜಮಹಲ್ ವಿಲಾಸ್ ಎಕ್ಸ್‌ಟೆಂಶನ್, ಸದಾಶಿವ-ನಗರ್, ಬೆಂಗಳೂರು-560080 ಖರೀದಿಸಲು ಇಚ್ಚಿಸಿರುತ್ತಾರೆ.

ಷೆಡ್ಯೂಲು ಸ್ವತ್ತಿನಲ್ಲಿ ಲೇಟ್.ಶ್ರೀ.ಮುನಿಯಪ್ಪನವರ ಮಕ್ಕಳಾದ ಶ್ರೀಮುನಿರಾಜ, ಶ್ರೀಮತಿ. ನಾಗರತ್ನಮ್ಮ, ಶ್ರೀಮತಿ.ಭಾಗ್ಯಮ್ಮ, ಶ್ರೀಮತಿ. ಕೃಷ್ಣಮ್ಮ, ಶ್ರೀಮತಿ.ಲಕ್ಷ್ಮಮ್ಮ ಮತ್ತು ಶ್ರೀ. ರಾಮಯ್ಯ ಬಿನ್ ಲೇಟ್.ಮುನಿಕೆಂಪಯ್ಯ ಅವರನ್ನು ಹೊರತುಪಡಿಸಿ ಬೇರಾರಿಗಾದರು ಯಾವುದೇ ತರಹವಾದಂತಹ ಹಕ್ಕಾಗಲಿ, ಭಾಗವಾಗಲಿ, ಕ್ಲೇಮುಗಳಾಗಲಿ, ಅಧಿಕಾರವಾಗಲಿ, ಹಿತಾಸಕ್ತಿ ಯಾಗಲೀ ಇದ್ದಲ್ಲಿ ಅಂತಹವರು ಸದರಿ ಉದ್ದೇಶಿತ ಕ್ರಯದ ವ್ಯವಹಾರಕ್ಕೆ, ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅವರಲ್ಲಿರುವ ದಾಖಲೆಗಳ ಛಾಯಾ ಪ್ರತಿಗಳೊಂದಿಗೆ ಈ ಕೆಳಗೆ ಸಹಿ ಮಾಡಿರುವವರಿಗೆ ಈ ನೋಟಿಸು ಪ್ರಕಟಗೊಂಡ 10 ದಿನದೊಳಗಾಗಿ ಸಲ್ಲಿಸಲು ಕೋರಲಾಗಿದೆ. ಈ ಮೇಲ್ಕಂಡಂತೆ ಈ ಕೆಳಗೆ ಸಹಿಮಾಡಿರುವವ-ರಿಗೆ ಯಾವುದೇ ತರಹವಾದಂತಹ ಆಕ್ಷೇಪಣೆಗಳು ಬರದೇ ಇದ್ದಲ್ಲಿ, ಮೇಲ್ಕಂಡವರೆ ಷೆಡ್ಯೂಲು ಸ್ವತ್ತಿನ ಏಕೈಕ ಮಾಲೀಕರೆಂದೂ, ಅವರನ್ನು ಹೊರತುಪಡಿಸಿ, ಬೇರಾರಿಗೂ ಯಾವುದೇ ವಿಧವಾದಂತಹ ಹಕ್ಕಿಲ್ಲವೆಂದು ಭಾವಿಸಿ ಷೆಡ್ಯೂಲು ಸ್ವತ್ತಿನ ಉದ್ದೇಶಿತ ಕ್ರಯದ ವ್ಯವಹಾರವನ್ನು ಮಾಡಲಾಗುವುದು. **ಷೆಡ್ಯೂಲು**

ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ರಾಯಪ್ಪನಹಳ್ಳಿ ಗ್ರಾಮದ ಸರ್ವೆ ನಂಬರು.98/1ರಲ್ಲಿ 01ಎಕರೆ 08ಗುಂಟೆ (03ಗುಂಟೆ ಖರಾಬು ಸೇರಿ) ಮತ್ತು 99ರಲ್ಲಿ 02 ಎಕರೆ 28ಗುಂಟೆ (07ಗುಂಟೆ ಖರಾಬು ಸೇರಿ) ಖುಷ್ಕಿ ಜಮೀನಿಗೆ ಚೆಕ್ಕುಬಂದಿ:
ಪೂರ್ವಕ್ಕೆ : ಜಯ್ಯಪ್ಪ ಮುನಿಯಪ್ಪನವರ ಸ್ವತ್ತು
ಪಶ್ಚಿಮಕ್ಕೆ : ರಾಮಯ್ಯನವರ ಜಮೀನು
ಉತ್ತರಕ್ಕೆ : ರಸ್ತೆ
ದಕ್ಷಿಣಕ್ಕೆ : ನಾಗಪ್ಪ ಮತ್ತು ಕೆ.ವೆಂಕಟೇಶ್‌ರವರ ಜಮೀನು

ಸಹಿ/-
ಕೆ.ಪಿ.ನಟರಾಜ್ (ವಕೀಲರು)
ನಂ.13, 2ನೇ ಮಹಡಿ, 4ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018
ಮೊಬೈಲ್: 9886209950
ಇಮೇಲ್: vakil.nataraj@gmail.com

EDUCATIONAL

Training

PHOENIX INSTITUTE of Aviation & Hospitality. Course: Diploma in Airhostess, Jobs Place: Airports /Airlines, Age: 18-26 Qualification: PUC /Degree, Gender: Boys /Girls, Address: Mandur (V), Budigere Cross, Bangalore. CONTACT: 9740044668 9880768048 9902865643

BUSINESS

Business to Business

Business

GOVT APPROVED Industrial land around Bangalore, Mysore, Tumkur, Kolar, Chamrajanagar, North Karnataka direct allotment call 9535283772

Finance

WE ARRANGE Mortgage, House Purchase, Construction, Site Purchase and Mortgage Loans from Banks. Contact: 9353705002

Business Offers

Business For Sale

RUNNING PETROL Bunk for Sale at Kanakapura Main Road Close to Banashakari Bus-stop Contact: 9742019177

Finance

FINANCE AGAINST Land & Building Properties Industries Schools Hospitals Projects & NRIFunds 7358729820

NRI'S INVESTMENTS And Finance Available On Low Interest Against Properties, Land& Buildings, Finance Sites, Flats, Converted and Agriculture Lands. Also Introducing Luxury Cars Finance @ Very Low Interest Call: 7411265189

PERSONAL

Change of Name

I, M. RAGAVENDRA REDDY S/o. Munireddy, #3/84, BalajiNagar, Bedarapalli Village, Sipcot (Post), Zuzuvadi, Hosur- 635126, Krishnagiri District, Tamilnadu, in the Marks Sheet issued to my Son HARSHA. R. Father Name Mentioned as RAGHU instead of M. RAGAVENDRA REDDY issued by Council For The Indian School Certificate Examinations, New Delhi, Vide Certificate No. TT 40041804 vide Affidavit Dated: 23.12.2021 Before Notary Aadi Venkatachalam, Hosur.

I, SHUBHA SRIDHAR, D/o. R Sridhara Murthy, aged 33 years, residing No. 508, 4th D Cross, 2nd Block, Kalyan Nagar Bangalore 560043 have changed my name to VIBHA SHREYA VASISTA vide affidavit dated 21/01/2022 before notary Uday Kumar.K

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

CONNECT ಕ್ಲಾಸಿಫೈಡ್ಸ್

EDUCATION CORNER

ಜಿಂಕೆಗಳ 9 ಕೊಂಬು ಜಪ್ತಿ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಂಕೆಗಳ ಕೊಂಬುಗಳನ್ನು ನಗರಕ್ಕೆ ತಂದು ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪದಡಿ ನರಸಿಂಹಪ್ಪ (60) ಎಂಬುವವರನ್ನು ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಕಾಮನದೊಡ್ಡಿಯ ನರಸಿಂಹಪ್ಪ, ಕೊಂಬು ಮಾರಲು ನಗರಕ್ಕೆ ಬಂದಿದ್ದರು. ಅವರ ಬಗ್ಗೆ ಅನುಮಾನಗೊಂಡಿದ್ದ ಸ್ಥಳೀಯರೊಬ್ಬರು ಮಾಹಿತಿ ನೀಡಿದ್ದರು. ಕಾರ್ಯಾಚರಣೆ ನಡೆಸಿ, ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಜಿಂಕೆಗಳ 9 ಕೊಂಬುಗಳನ್ನು ಆರೋಪಿಯಿಂದ ಜಪ್ತಿ ಮಾಡಲಾಗಿದೆ. ಪರಿಚಯಸ್ಥರೊಬ್ಬರು ನೀಡಿದ್ದ ಕೊಂಬುಗಳನ್ನು ಮಾರಲೆಂದು ಬೆಂಗಳೂರಿಗೆ ತಂದಿದ್ದಾಗಿ ಆರೋಪಿ ಹೇಳುತ್ತಿದ್ದಾರೆ. ಜಿಂಕೆಗಳನ್ನು ಕೊಂದಿದ್ದರು ಎನ್ನಲಾದ ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರಿಗಾಗಿ ಶೋಧ ಮುಂದುವರಿದಿದೆ' ಎಂದೂ ತಿಳಿಸಿದರು.

ಭಾರಿ ವಾಹನ ಸಂಚಾರ ನಿಯಂತ್ರಣ ಅಸಾಧ್ಯವೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಒಳ ಭಾಗದಲ್ಲಿ ಕೆಲವು ದಿನಗಳಿಂದ ಈಚೆಗೆ ಹಗಲಿನ ವೇಳೆಯೂ ಭಾರಿ ವಾಹನಗಳ ಸಂಚಾರದ ಅಬ್ಬರ ಜೋರಾಗಿದೆ. ಬೃಹತ್ ಟಿಪ್ಪರ್, ಲಾರಿಗಳ ಅನಿಯಂತ್ರಿತ ಓಡಾಟದಿಂದಾಗಿ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದೆ. ಮಿತಿಗಿಂತ ಹೆಚ್ಚು ಭಾರ ತುಂಬಿದ ವಾಹನಗಳು ಇತರ ವಾಹನಗಳಲ್ಲಿರುವವರ ಪ್ರಾಣಕ್ಕೆ ಎರವಾಗುತ್ತಿವೆ.

ನಗರದ ಒಳಭಾಗದಲ್ಲಿ ಹಗಲಿನ ವೇಳೆ, ಅದರಲ್ಲೂ ಮುಖ್ಯವಾಗಿ ದಟ್ಟಣೆ ಅವಧಿಯಲ್ಲಿ ಭಾರಿ ವಾಹನಗಳ ಸಂಚಾರ ನಿರ್ಬಂಧ ಸಾಧ್ಯವಿಲ್ಲವೇ? ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿದೆ. ಈ ಬೇಡಿಕೆಯೂ ಬಲವಾಗಿದೆ. ಈ ಕುರಿತು ತಜ್ಞರ ಅಭಿಪ್ರಾಯಗಳು ಈ ವಾರದ 'ರಾಜಧಾನಿ ಒಡಲ ದನಿ'ಯಲ್ಲಿ...

'ಭಾರಿ ವಾಹನಗಳ ತಪಾಸಣೆ, ನಿಗಾ ಹೆಚ್ಚಿಸಬೇಕು'



ನಗರದಲ್ಲಿ ಅಪಘಾತಕ್ಕೀಡಾಗುವ ಭಾರಿ ವಾಹನಗಳಲ್ಲಿ ನಿರ್ಮಾಣ ಕಾಮಗಾರಿಗೆ ಸರಕು ಸಾಗಿಸುವ ಟಿಪ್ಪರ್ ಮತ್ತು ಲಾರಿಗಳ ಸಂಖ್ಯೆಯೇ ಹೆಚ್ಚು. ಹೊರ ರಾಜ್ಯದ ಗುತ್ತಿಗೆದಾರರು ಬೇರೆ ಕಡೆಗಳಿಂದ ಇಲ್ಲಿಗೆ ವಾಹನಗಳನ್ನು ತರುತ್ತಾರೆ. ಅವುಗಳ ಚಾಲಕರೂ ಹೊರ ರಾಜ್ಯದವರೇ ಆಗಿರುತ್ತಾರೆ. ನಿರ್ವಹಣೆ ಇಲ್ಲದ ವಾಹನಗಳು ಮತ್ತು ಅನನುಭವಿ ಚಾಲಕರು ಅಪಘಾತಗಳಿಗೆ ಪ್ರಮುಖ ಕಾರಣ.

ಭಾರಿ ವಾಹನಗಳಲ್ಲಿ ನಿಗದಿತ ಮಿತಿಗಿಂತ ದುಪ್ಪಟ್ಟು ಭಾರ ಹಾಕಿ ಸಾಗಿಸುವವರ ಸಂಖ್ಯೆ ಹೆಚ್ಚು. ಅಂತಹ ಸಮಯದಲ್ಲಿ ನಿಯಂತ್ರಣ ತಪ್ಪಿದರೆ ದೊಡ್ಡ ದುರಂತಗಳಾಗುತ್ತವೆ. ಇದೇ ಕಾರಣಕ್ಕಾಗಿ ದಟ್ಟಣೆಯ ಅವಧಿಯಲ್ಲಿ ಭಾರಿ ವಾಹನಗಳು ನಗರದೊಳಕ್ಕೆ ಪ್ರವೇಶಿಸದಂತೆ ನಿರ್ಬಂಧಿಸುವ ಕ್ರಮ ಜಾರಿಯಲ್ಲಿದೆ. ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದರೆ ಸಮಸ್ಯೆ ಕಡಿಮೆಯಾಗುತ್ತದೆ.

ಭಾರಿ ವಾಹನಗಳ ನಿರ್ವಹಣೆ ಕುರಿತು ಸಾರಿಗೆ ಇಲಾಖೆ ಅಧಿಕಾರಿಗಳೂ ನಿಯಮಿತವಾಗಿ ತಪಾಸಣೆ ನಡೆಸಬೇಕು. ಪೊಲೀಸರು ಕೂಡ ವಾಹನಗಳ ದಾಖಲೆ ಮತ್ತು ಚಾಲಕರ ದಾಖಲೆಗಳನ್ನು ತಪಾಸಣೆ ಮಾಡಬೇಕು. ಭಾರಿ ವಾಹನಗಳ ಚಾಲನೆಯ ಅನುಭವವಿಲ್ಲದವರನ್ನು ಚಾಲಕರನ್ನಾಗಿ ಬಳಕೆ ಮಾಡುವ ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸಬೇಕು. ವಾಹನಗಳ ಮಾಲೀಕರು ಕಟ್ಟುನಿಟ್ಟಾಗಿ ಕಾನೂನು ಪಾಲನೆ ಮಾಡುವಂತೆ ಜಾಗೃತಿ ಮೂಡಿಸಬೇಕು.

– ಟಿ.ಆರ್. ಸುರೇಶ್,
ನಿವೃತ್ತ ಐಪಿಎಸ್ ಅಧಿಕಾರಿ

'ಬಹು ಆಯಾಮಗಳಲ್ಲಿ ಕ್ರಮ ಅಗತ್ಯ'

ನಗರದಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿಗಳು, ಇತರ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳು, ಖಾಸಗಿ ನಿರ್ಮಾಣ ಕಾಮಗಾರಿಗಳಿಂದ ರಸ್ತೆಗಳಲ್ಲಿ ಅಡತಡೆಗಳು ಜಾಸ್ತಿಯಾಗುತ್ತಿವೆ. ಅದರ ಜತೆಯಲ್ಲೇ ವಾಹನಗಳ ದಟ್ಟಣೆ ಏರುತ್ತಲೇ ಇವೆ. ನಗರದ ರಸ್ತೆ ಮಾರ್ಗಗಳ ಕುರಿತು ಸರಿಯಾಗಿ ತಿಳಿದಿರದ ಚಾಲಕರು ಭಾರಿ ವಾಹನಗಳನ್ನು ನಗರದೊಳಕ್ಕೆ ತಂದು, ಗಲಿಬಿಲಿಗೊಂಡು ಅಪಘಾತಕ್ಕೆ ಕಾರಣವಾಗುವುದೇ ಹೆಚ್ಚು.

ಭಾರಿ ವಾಹನಗಳ ಚಾಲಕರು ದೀರ್ಘ ಕಾಲ ಕೆಲಸ ಮಾಡುತ್ತಾರೆ. ಅವರಲ್ಲಿ ಹೆಚ್ಚಿನವರು ರಾತ್ರಿ ವೇಳೆ ಅತಿ ವೇಗವಾಗಿ ವಾಹನ ಓಡಿಸುವ ಅಭ್ಯಾಸ ಹೊಂದಿರುತ್ತಾರೆ. ಹಗಲಿನಲ್ಲಿ ನಗರದೊಳಕ್ಕೆ ಬಂದಾಗಲೂ ಅದೇ ವೇಗದಲ್ಲಿ ವಾಹನ ಓಡಿಸಿ ದುರ್ಘಟನೆಗಳಿಗೆ ಕಾರಣವಾಗುತ್ತಾರೆ. ಕೆಲಸದ ಒತ್ತಡದಿಂದ ಬಳಲಿ ಹಗಲಿನಲ್ಲೇ ಮದ್ಯ ಸೇವಿಸಿ ಚಾಲನೆ ಮಾಡುವವರೂ ಇರುತ್ತಾರೆ.

ಈ ಸಮಸ್ಯೆ ಪರಿಹಾರಕ್ಕೆ ಬಹು ಆಯಾಮದ ಕ್ರಮಗಳ ಅಗತ್ಯವಿದೆ. ರಸ್ತೆಗಳಲ್ಲಿನ ಅಡೆತಡೆಗಳನ್ನು ನಿವಾರಿಸಬೇಕು. ನಿಯಂತ್ರಣ ಕ್ರಮಗಳನ್ನು ಬಿಗಿಯಾಗಿ ಜಾರಿಗೊಳಿಸಬೇಕು. ಯಾವುದೇ ಒತ್ತಡಕ್ಕೆ ಮಣಿಯದೇ ಭಾರಿ ವಾಹನಗಳ ತಪಾಸಣೆ ನಡೆಸಬೇಕು. ಕಾನೂನುಗಳ ಕಟ್ಟುನಿಟ್ಟಿನ ಜಾರಿಯೇ ಅಂತಿಮ ಪರಿಹಾರ.

– ಎಚ್.ಎಸ್. ಮಂಜುನಾಥ್,
ನಿವೃತ್ತ ಡಿವೈಎಸ್‌ಪಿ

ರಾಜಧಾನಿ ಒಡಲದನಿ

'ಭಾರಿ ವಾಹನಗಳಿಗೆ ಪ್ರತ್ಯೇಕ ಪಥ ಅಗತ್ಯ'



ಬೆಂಗಳೂರು ನಗರದ ನಿವಾಸಿಗಳದ್ದೇ ಒಂದು ಕೋಟಿ ವಾಹನಗಳಿವೆ. ನಿತ್ಯವೂ ಹತ್ತು ಲಕ್ಷ ವಾಹನಗಳು ಹೊರಗಿನಿಂದ ಬರುತ್ತಿವೆ. ಇಲ್ಲಿನ ಶೇಕಡ 60ರಷ್ಟು ರಸ್ತೆಗಳು ಕಿರಿದಾಗಿಯೇ ಇವೆ. ಹೊರ ರಾಜ್ಯಗಳಿಗೆ ಹೋಗುವ ಮತ್ತು ನಗರದಲ್ಲಿನ ನಿರ್ಮಾಣ ಕಾಮಗಾರಿಗೆ ಸರಕು ಪೂರೈಸುವ ಭಾರಿ ವಾಹನಗಳು ಅನಿಯಂತ್ರಿತವಾಗಿ ನಗರದೊಳಕ್ಕೆ ಪ್ರವೇಶಿಸುತ್ತಿರುವುದು ಅಪಘಾತಕ್ಕೆ ಕಾರಣವಾಗುತ್ತಿದೆ.

ಹಿಂದೆ ಹಗಲಿನ ವೇಳೆ ಭಾರಿ ವಾಹನಗಳು ನಗರ ಪ್ರವೇಶಿಸದಂತೆ ಕಟ್ಟೆಚ್ಚರ ವಹಿಸಲಾಗುತ್ತಿತ್ತು. ಇತ್ತೀಚೆಗೆ ಅದು ಪಾಲನೆ ಆಗುತ್ತಿಲ್ಲ. ಹೀಗಾಗಿ ನಿಯಂತ್ರಣವಿಲ್ಲದೇ ಭಾರಿ ವಾಹನಗಳು ನಗರದೊಳಗೆ ಸಂಚರಿಸುತ್ತಿವೆ. ಯೋಜಿತ ರೀತಿಯಲ್ಲಿ ರಸ್ತೆಗಳನ್ನು ನಿರ್ಮಿಸುವುದು ಮತ್ತು ನಿರ್ಬಂಧಗಳನ್ನು ಸರಿಯಾಗಿ ಜಾರಿ ಮಾಡುವುದರಿಂದ ಮಾತ್ರ ಈ ಸಮಸ್ಯೆಗೆ ಪರಿಹಾರ ಸಾಧ್ಯ. ಪಕ್ಷ ರಾಜಕಾರಣವನ್ನು ಬದಿಗಿಟ್ಟು ಬೆಂಗಳೂರಿನ ಸಂಚಾರ ಸಮಸ್ಯೆಯನ್ನು ನೋಡಬೇಕು.

ವರ್ತುಲ ರಸ್ತೆಯಲ್ಲೂ ದಟ್ಟಣೆ ಹೆಚ್ಚಾಗಿದೆ. ನಗರದ ಹೊರ ವಲಯಗಳಲ್ಲಿ ಪ್ರತ್ಯೇಕವಾದ ರಸ್ತೆಗಳನ್ನು ನಿರ್ಮಿಸಿ, ಅಲ್ಲಿ ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಗೆ ಹೋಗುವ ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ನಗರದೊಳಕ್ಕೆ ಬರುವಂತಹ ಭಾರಿ ವಾಹನಗಳಿಗೆ ಸಮಯದ ಮಿತಿ ಹಾಗೂ ನಿರ್ದಿಷ್ಟ ಪ್ರದೇಶಗಳ ಮಿತಿಯನ್ನು ವಿಧಿಸಬೇಕು. ಆಗ ಭಾರಿ ವಾಹನಗಳಿಂದ ಅಪಘಾತವಾಗಿ ಸಾವು, ನೋವು ಸಂಭವಿಸುವುದನ್ನು ತಪ್ಪಿಸಬಹುದು.

– ಪ್ರೊ.ಎಂ.ಎನ್. ಶ್ರೀಹರಿ
ಸಾರಿಗೆ ತಜ್ಞ

ಸುದ್ದಿ 2 ನಿಮಿಷ


ಬ್ಯಾಗ್‌ನಲ್ಲಿದ್ದ ₹ 5.30 ಕೋಟಿ ಮೌಲ್ಯದ ಡ್ರಗ್ಸ್ ವಶ

ಬೆಂಗಳೂರು: ದಾಖಲೆಗಳ ಬ್ಯಾಗ್‌ನಲ್ಲಿ ಬಚ್ಚಿಟ್ಟು ಸಾಗಿಸುತ್ತಿದ್ದ ₹ 5.30 ಕೋಟಿ ಮೌಲ್ಯದ ಮಾದಕ ವಸ್ತುವನ್ನು (ಡ್ರಗ್ಸ್) ನಗರದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ದುಬೈನಿಂದ ಕೋರಿಯರ್ ಮೂಲಕ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಜ. 22ರಂದು ಬ್ಯಾಗ್ ಬಂದಿತ್ತು. ದಾಖಲೆಗಳ ಬ್ಯಾಗ್ ಎಂಬು ದಾಗಿ ಅದರ ಮೇಲೆ ನಮೂದಿಸಲಾಗಿತ್ತು. ಖಚಿತ ಮಾಹಿತಿ ಮೇರೆಗೆ ಬ್ಯಾಗ್ ಪರಿಶೀಲಿಸಿದಾಗ ಡ್ರಗ್ಸ್ ಪತ್ತೆಯಾಯಿತು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ಬ್ಯಾಗ್‌ನ ಸುತ್ತಲಿನ ಬಟ್ಟೆಯೊಳಗೆ ಡ್ರಗ್ಸ್ ಪುಡಿಯನ್ನು ತುಂಬಲಾಗಿತ್ತು. ಯಾರಿಗೂ ಕಾಣದಂತೆ, ಅದಕ್ಕೆ ಹೊದಿಕೆ ಇತ್ತು. ಹೊರಗಡೆಯಿಂದ ನೋಡಿದಾಗ ಡ್ರಗ್ಸ್ ಬಗ್ಗೆ ಯಾವುದೇ ಸುಳಿವು ಸಿಗುತ್ತಿರಲಿಲ್ಲ. ಲೋಹ ಶೋಧಕದಲ್ಲಿ ಪರಿಶೀಲಿಸಿದಾಗ, ಬ್ಯಾಗ್‌ನಲ್ಲಿ ಅನುಮಾನಾಸ್ಪದ ವಸ್ತು ಇರುವುದು ಗೊತ್ತಾಗಿತ್ತು.'

'ಬ್ಯಾಗ್ ವಶಕ್ಕೆ ಪಡೆದು, ಸುತ್ತಲಿನ ಬಟ್ಟೆ ತೆರೆದು ನೋಡಿದಾಗ ಡ್ರಗ್ಸ್ ಸಿಕ್ಕಿತು. ಬ್ಯಾಗ್ ಬಂದಿದ್ದ ವಿಳಾಸದ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿವೆ.



ಕೇಂದ್ರ ಕಾರಾಗೃಹ ಅಕ್ರಮದ ವಿಡಿಯೊ: ಕ್ರಿಮಿನಲ್ ಪ್ರಕರಣ?

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮವಾಗಿ ಕೈದಿಗಳಿಗೆ ದಿನಸಿ ವಸ್ತುಗಳನ್ನು ಮಾರುತ್ತಿರುವ ಆರೋಪ ಕೇಳಿಬಂದಿದ್ದು, ಈ ಬಗ್ಗೆ ಕೈದಿಯೊಬ್ಬರು ವಿಡಿಯೊ ಚಿತ್ರೀಕರಿಸಿ ಹರಿಬಿಟ್ಟಿದ್ದಾರೆ.

'ಕಾರಾಗೃಹಗಳ ನಿಯಮಗಳ ಪ್ರಕಾರ, ಕೈದಿಗಳಿಗೆ ನಿರ್ದಿಷ್ಟಪಡಿಸಿದ ದಿನಸಿ ನೀಡಲಾಗುತ್ತದೆ. ದಿನಸಿ ಖರೀದಿಯಲ್ಲಿ ಅವ್ಯವಹಾರವಾಗಿದ್ದು, ಕಳಪೆ ದಿನಸಿ ಪದಾರ್ಥಗಳು ಜೈಲಿಗೆ ಬರುತ್ತಿವೆ. ಗುಣಮಟ್ಟದ ದಿನಸಿ ಬೇಕೆನ್ನುವ ಕೈದಿಗಳು, ಹಣ ಕೊಟ್ಟು ಖರೀದಿಸುತ್ತಿದ್ದಾರೆ' ಎಂಬ ಆರೋಪ ವಿಡಿಯೊದಲ್ಲಿದೆ.

'ಅಪರಾಧ ಪ್ರಕರಣವೊಂದರಲ್ಲಿ ಬಂಧಿತನಾಗಿ ಜೈಲಿನಲ್ಲಿರುವ ರೌಡಿ ಜೆಸಿಬಿ ನಾರಾಯಣ ಸಹ ಐಷಾರಾಮಿ ಸೇವೆ ಪಡೆಯುತ್ತಿದ್ದಾನೆ. ಆತನಿಗೆ ಬೇಕಾದ ವಸ್ತುಗಳನ್ನು ಜೈಲಿನ ಸಿಬ್ಬಂದಿಯೇ ಪೂರೈಕೆ ಮಾಡುತ್ತಿದ್ದಾರೆ' ಎಂಬ ಸಂಗತಿಯೂ ವಿಡಿಯೊದಲ್ಲಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕಾರಾಗೃಹಗಳ ಡಿಜಿಪಿ ಅಲೋಕ್ ಮೋಹನ್, 'ವಿಡಿಯೊ ಬಗ್ಗೆ ಪರಿಶೀಲಿಸಲಾಗುವುದು' ಎಂದರು.



ಭಾರಿಪ್ರಮಾಣದ ಮೂಟೆಗಳು...

ಚಾಲಕನೊಬ್ಬ ಲಾರಿಯಲ್ಲಿ ಭಾರಿ ಪ್ರಮಾಣದಲ್ಲಿ ಮೂಟೆಗಳನ್ನು ತುಂಬಿಕೊಂಡು ದೊಡ್ಡ ಬಳ್ಳಾಪುರ ರಸ್ತೆಯ ರಾಜಾನುಕುಂಟೆ ಬಳಿ ಹೋಗುತ್ತಿದ್ದ ದೃಶ್ಯ ಮಂಗಳವಾರ ಕಂಡುಬಂತು
–ಪ್ರಜಾವಾಣಿ ಚಿತ್ರ

ಕೋವಿಡ್: ಮೃತ ಶಿಕ್ಷಕರ ಕುಟುಂಬಗಳಿಗೆ ಪರಿಹಾರ ಕೊಡಿ– ರುಪ್ಸಾ

ಪ್ರಜಾವಾಣಿ ವಾರ್ತೆ



ಲೋಕೇಶ್ ತಾಳಿಕಟ್ಟೆ

ಬೆಂಗಳೂರು: 'ಕೋವಿಡ್ ಕರ್ತವ್ಯದಲ್ಲಿದ್ದಾಗ ಸೋಂಕು ತಗಲಿ ಮೃತಪಟ್ಟ ಶಿಕ್ಷಕರ ಕುಟುಂಬಗಳಿಗೆ ರಾಜ್ಯ ಸರ್ಕಾರ ತಲಾ ₹ 50 ಲಕ್ಷ ಪರಿಹಾರವನ್ನು ತಕ್ಷಣ ನೀಡಬೇಕು' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ರುಪ್ಸಾ) ಒತ್ತಾಯಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಕೋವಿಡ್‌ನಿಂದ 400ಕ್ಕಿಂತಲೂ ಹೆಚ್ಚು ಶಿಕ್ಷಕರು ಸಾವಿಗೀಡಾಗಿದ್ದಾರೆ. ಅವರನ್ನೇ ನಂಬಿದ ಕುಟುಂಬಗಳು ನಿರ್ಗತಿಕ ಆಗಿವೆ. ಸರ್ಕಾರ ತಕ್ಷಣ ಈ ಕುಟುಂಬಗಳ ನೆರವಿಗೆ ಧಾವಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸರ್ಕಾರಿ, ಖಾಸಗಿ ಅನುದಾನಿತ, ಅನುದಾನರಹಿತ ಶಾಲೆಗಳ ಶಿಕ್ಷಕರನ್ನು ಕೋವಿಡ್ ಕೆಲಸಕ್ಕೆ ಸರ್ಕಾರ ಬಳಸಿಕೊಂಡಿದೆ. ಈ ಶಿಕ್ಷಕರನ್ನು ಕೋವಿಡ್ ವಾರಿಯರ್ಸ್‌ಗಳು ಎಂದು ಪರಿಗಣಿಸಿ ಪರಿಹಾರವನ್ನೂ ಘೋಷಿಸಿದೆ. ಹಿಂದಿನ ಶಿಕ್ಷಣ ಸಚಿವರಾಗಿದ್ದ ಎಸ್. ಸುರೇಶ್‌ಕುಮಾರ್ ಅವರು ಕೋವಿಡ್‌ನಿಂದ ಮೃತಪಟ್ಟ ಶಿಕ್ಷಕರ ಪಟ್ಟಿ ನೀಡುವಂತೆ ಇಲಾಖೆಯ ಅಧಿಕಾರಿಗಳಿಗೆ ಜ. 15ರಂದು ಸೂಚಿಸಿದ್ದರು. ಅಲ್ಲದೆ, ಶೀಘ್ರದಲ್ಲಿ ಪರಿಹಾರಧನ ನೀಡುವುದಾಗಿ ಹೇಳಿದ್ದರು, ಆದರೆ, ಆ ಕುಟುಂಬಗಳು ಕಳೆದ ಒಂದು ವರ್ಷದಿಂದಲೂ ಪರಿಹಾರದ ನಿರೀಕ್ಷೆಯಲ್ಲಿ ದಿನ ದೂಡುತ್ತಿವೆ' ಎಂದಿದ್ದಾರೆ.

'ಈ ಬಗ್ಗೆ ಸಂಘ ಹಲವು ಬಾರಿ ಮನವಿ ಸಲ್ಲಿಸಿ ಸರ್ಕಾರದ ಗಮನ ಸೆಳೆದಿದೆ. ಆದರೆ, ಯಾವುದೇ ಪ್ರಯೋಜನ ಆಗಿಲ್ಲ. ಮನೆಯ ಆಧಾರಸ್ತಂಭ ಕಳೆದುಕೊಂಡ ಹಲವು ಶಿಕ್ಷಕ ಕುಟುಂಬಗಳು ನಿರಾಶ್ರಿತ ಆಗಿವೆ. ಈ ಕುಟುಂಬಗಳ ಸದಸ್ಯರು ಪರಿಹಾರದ ಆಸೆಯಿಂದ ಸರ್ಕಾರದ ವಿವಿಧ ಇಲಾಖೆಗಳನ್ನು ಅಲೆದಾಡುತ್ತಿದ್ದಾರೆ. ಈ ನತದೃಷ್ಟ ಕುಟುಂಬಗಳಿಗೆ ಮಾನವೀಯ ನೆಲೆಯಲ್ಲಿ ತಕ್ಷಣ ನೆರವು ನೀಡಲು ಸರ್ಕಾರ ಮುಂದಾಗಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

ಸಂವಿಧಾನದ ಅವಧಿ ಮುಗಿದಿದೆ ಎಂಬ ಚರ್ಚಾ ಸ್ಪರ್ಧೆ: ದೂರು

ಬೆಂಗಳೂರು: '72 ವರ್ಷಗಳ ಭಾರತ ಸಂವಿಧಾನದ ಅವಧಿ ಮುಗಿದಿದೆ ಎಂಬ ವಿಷಯದಡಿ ಶಾಲೆಯಲ್ಲಿ ಚರ್ಚಾಸ್ಪರ್ಧೆ ಆಯೋಜಿಸಿ ಸಂವಿಧಾನಕ್ಕೆ ಅಪಚಾರ ಮಾಡಲಾಗಿದೆ' ಎಂದು ಆರೋಪಿಸಿ ಶಿಕ್ಷಣ ಇಲಾಖೆ ಆಯುಕ್ತರಿಗೆ ಸಂವಿಧಾನ ಸಂರಕ್ಷಣಾ ಏಕತಾ ಸಮಿತಿ ದೂರು ನೀಡಿದೆ.

'ಮಾಗಡಿ ರಸ್ತೆಯ ತಾವರೆಕೆರೆಯಲ್ಲಿನ ವಿಇಎಸ್ ಶಾಲೆಯಲ್ಲಿ ಗಣ ರಾಜ್ಯೋತ್ಸವದ ಅಂಗವಾಗಿ ಜ.26ರಂದು ಇಂಗ್ಲಿಷ್ ಭಾಷೆಯಲ್ಲಿ ಚರ್ಚಾ ಸ್ಪರ್ಧೆ ಆಯೋಜಿಸಲಾಗಿದೆ. ಹತ್ತನೇ ತರಗತಿ ವಿದ್ಯಾರ್ಥಿಗಳಿಗಾಗಿ ಶಿಕ್ಷಕ ರೋಹಿತ್ ಈ ಸ್ಪರ್ಧೆ ಆಯೋಜಿಸಿದ್ದು, ಅದಕ್ಕೆ ಮುಖ್ಯ ಶಿಕ್ಷಕರೂ ಸಮ್ಮತಿ ಸೂಚಿಸಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ಚರ್ಚಾ ವಿಷಯವು ಭಾರತದ ಸಂವಿಧಾನವನ್ನು ಅವಮಾನಿಸುವಂತಿದೆ. ಅಲ್ಲದೇ, ವಿದ್ಯಾರ್ಥಿಗಳಲ್ಲಿ, ಪೋಷಕರಲ್ಲಿ ಮತ್ತು ಸಾರ್ವಜನಿಕರಲ್ಲಿ ಸಂವಿಧಾನದ ಬಗ್ಗೆ ಅಪನಂಬಿಕೆ ಮತ್ತು ದ್ವೇಷ ಭಾವನೆ ಮೂಡಿಸುವ ದುರುದ್ದೇಶದಿಂದ ಕೂಡಿದೆ. ಸಂವಿಧಾನವನ್ನು ಅವಮಾನಿಸುವುದು ದೇಶವನ್ನು ಅವಮಾನಿಸಿದಂತೆ. ದೇಶದ್ರೋಹದ ಕೆಲಸ ಮಾಡಿರುವ ಶಾಲೆಯ ವಿರುದ್ಧ ಪ್ರಕರಣ ದಾಖಲಿಸಿ ಕಪ್ಪುಪಟ್ಟಿಗೆ ಸೇರಿಸಬೇಕು. ಸಂವಿಧಾನ ವಿರೋಧಿ ಶಾಲೆ ಎಂದು ಘೋಷಿಸಿ ಶಾಲೆಯ ಪರವಾನಗಿ ರದ್ದುಗೊಳಿಸಬೇಕು. ಶಿಕ್ಷಕ, ಮುಖ್ಯ ಶಿಕ್ಷಕರನ್ನು ಸೇವೆಯಿಂದ ವಜಾಗೊಳಿಸಬೇಕು' ಸಮಿತಿ ಒತ್ತಾಯಿಸಿದೆ.

'ಸಂವಿಧಾನದ ಬಗ್ಗೆ ತಪ್ಪು ತಿಳಿವಳಿಕೆ ಮಾಡಿಸುವ ಪ್ರಯತ್ನ ತಡೆಯಲು ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೆ ಸೂಕ್ತ ಸುತ್ತೋಲೆಯನ್ನು ಶಿಕ್ಷಣ ಇಲಾಖೆ ಹೊರಡಿಸಬೇಕು. ದೇಶದ್ರೋಹದ ಕೆಲಸ ಮಾಡಿರುವ ವಿಇಎಸ್ ಶಾಲೆಯ ವಿರುದ್ಧ ಪೊಲೀಸರಿಗೂ ದೂರು ನೀಡಲಾಗಿದ್ದು, ಪ್ರಕರಣ ದಾಖಲಿಸಲಾಗುತ್ತಿದೆ' ಎಂದು ಸಮಿತಿ ಸಂಚಾಲಕ ಎನ್.ಮಹದೇವಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

ವರದಿ ಕೇಳಿದ ಡಿಡಿಪಿಐ

'ವಿಇಎಸ್ ಶಾಲೆಯ ಮೇಲಿನ ಆರೋಪದ ಕುರಿತು ವಿವರಣೆ ಕೇಳಿ ಮುಖ್ಯ ಶಿಕ್ಷಕರಿಗೆ ನೋಟಿಸ್ ನೀಡಲಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ವರದಿಯನ್ನೂ ಕೇಳಲಾಗಿದೆ' ಎಂದು ಶಿಕ್ಷಣ ಇಲಾಖೆಯ ಬೆಂಗಳೂರು ದಕ್ಷಿಣ ಉಪನಿರ್ದೇಶಕ ಬೈಲಾಂಜನೇಯ ತಿಳಿಸಿದರು.

ಉಚಿತ ಕೊಡುಗೆ ಆಮಿಷ: ಪಕ್ಷಗಳ ಚಿಹ್ನೆ, ನೋಂದಣಿ ರದ್ದತಿ ಕೋರಿ ಅರ್ಜಿ

ಕೇಂದ್ರ, ಆಯೋಗಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಚುನಾವಣೆ ಪ್ರಚಾರದಲ್ಲಿ ಉಚಿತ ಕೊಡುಗೆಗಳ ಆಮಿಷ ಒಡ್ಡುವ ಪಕ್ಷಗಳ ಚಿಹ್ನೆಯನ್ನು ವಾಪಸ್ ಪಡೆಯಬೇಕು ಮತ್ತು ನೋಂದಣಿಯನ್ನು ರದ್ದುಪಡಿಸಬೇಕು ಎಂದು ಸಲ್ಲಿಸಲಾಗಿರುವ ಅರ್ಜಿಗೆ ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ನೀಡಿ ಎಂದು ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.

'ಚುನಾವಣೆಗಳಲ್ಲಿ ಒಡ್ಡುವ ಇಂತಹ ಆಮಿಷಗಳು ಮತದಾರರ ಮೇಲೆ ಹಾಗೂ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುತ್ತದೆ. ಇದು ಸಂವಿಧಾನ ವಿರೋಧಿ. ಇಂತಹ ಉಚಿತ ಕೊಡುಗೆಗಳ ಬಜೆಟ್, ಮುಖ್ಯ ಬಜೆಟ್‌ನ ಗಾತ್ರವನ್ನೂ ಮೀರುತ್ತದೆ. ಇದನ್ನು ತಡೆಯಬೇಕು' ಎಂದು ಬಿಜೆಪಿ ನಾಯಕ ಅಶ್ವಿನಿ ಉಪಾಧ್ಯಾಯ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್. ವಿ.ರಮಣ, ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು, ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನೋಟಿಸ್ ನೀಡಿದೆ.

'ಇದೊಂದು ಗಂಭೀರ ವಿಚಾರ. ರಾಜಕೀಯ ಪಕ್ಷಗಳು ನೀಡುವ ಈ ಕೊಡುಗೆಗಳ ಹೊರೆಯನ್ನು ಸಾರ್ವಜನಿಕರು ಹೊರಬೇಕಾಗುತ್ತದೆ. ಈಗ ಚುನಾವಣೆ ನಡೆಯುತ್ತಿರುವ ಐದು ರಾಜ್ಯಗಳಲ್ಲಿ ನೀಡುತ್ತಿರುವ ಇಂತಹ ಭರವಸೆಗಳನ್ನು ತಡೆಯಬೇಕು' ಎಂದು ಅರ್ಜಿದಾರರ ಪರ ವಕೀಲ ವಿಕಾಸ್ ಸಿಂಗ್ ವಾದಿಸಿದರು.

ಆಗ ಪೀಠವು, 'ಈ ಹಿಂದೆ ಈ ಬಗ್ಗೆ ಇದೇ ನ್ಯಾಯಾಲಯವು ತೀರ್ಪು ನೀಡಿದೆ. ಅದನ್ನು ಗಮನಿಸಿದ್ದೀರಾ' ಎಂದು ಅರ್ಜಿದಾರರ ಪರ ವಕೀಲರನ್ನು ಪ್ರಶ್ನಿಸಿತು.

'ಇದು ಸರಿಯಾದುದಲ್ಲ ಎಂದು ನ್ಯಾಯಾಲಯವು ಈ ಹಿಂದೆಯೇ ಹೇಳಿದೆ. ಈ ಬಗ್ಗೆ ಚುನಾವಣಾ ಆಯೋಗವು ಈವರೆಗೆ ಕೇವಲ ಒಂದು ಸಭೆಯನ್ನು ಮಾತ್ರ ನಡೆಸಿದೆ. ಇದನ್ನು ತಡೆಯಲು ಮಾರ್ಗಸೂಚಿಗಳನ್ನು ರಚಿಸುವಂತೆ ನ್ಯಾಯಾಲಯವು ಹೇಳಿತ್ತು. ಆದರೆ ಆಯೋಗವು ರಚಿಸಿರುವ ಮಾರ್ಗಸೂಚಿಗಳು ಹಲ್ಲಿಲ್ಲದ ಹಾವಿನಂತಾಗಿದೆ' ಎಂದು ವಕೀಲ ವಿಕಾಸ್ ಸಿಂಗ್ ವಾದಿಸಿದರು.

'ಕೆಲವು ಪಕ್ಷಗಳು ಮಹಿಳೆಯರಿಗೆ ₹1,000 ನೀಡುವುದಾಗಿ ಹೇಳುತ್ತಿವೆ. ಕೆಲವು ಪಕ್ಷಗಳು ಉಚಿತ ವಿದ್ಯುತ್ ನೀಡುವುದಾಗಿ ಹೇಳುತ್ತಿವೆ. ಅಂತಿಮವಾಗಿ ಇವುಗಳ ಹೊರೆಯನ್ನು ನಾಗರಿಕರು ಹೊರಬೇಕಾಗುತ್ತದೆ. ಇಂತಹ ಕೊಡುಗೆ ನೀಡಿದ್ದರಿಂದಲೇ ಪಂಜಾಬ್‌ನ ಸಾಲವು ₹1.80 ಲಕ್ಷ ಕೋಟಿಯಾಗಿದೆ' ಎಂದು ವಿಕಾಸ್ ವಾದಿಸಿದರು.

ಆಗ ಪೀಠವು, 'ಯಾವುದೋ ಒಂದು ರಾಜ್ಯದ ಹೆಸರು ಹೇಳುವುದು ಬೇಡ. ಇದಕ್ಕೆ ಏನು ಪರಿಹಾರ ಎಂಬುದೇ ಮುಖ್ಯವಾದುದು. ಪರಿಹಾರಗಳಿದ್ದರೆ ಹೇಳಿ. ಈ ಬಗ್ಗೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗವೂ ಪ್ರತಿಕ್ರಿಯೆ ನೀಡಲಿ' ಎಂದು ಹೇಳಿತು.

ಕಾನೂನು ಜಾರಿಗೆ ಆಗ್ರಹ



ಇದನ್ನು ತಡೆಯಲು ಕಾನೂನನ್ನು ಜಾರಿಗೆ ತರಬೇಕು ಎಂದು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿ ಎಂದು ಅರ್ಜಿದಾರರ ಪರ ವಕೀಲರು ವಾದಿಸಿದರು.

'ಕಾನೂನು ಅಥವಾ ಆದೇಶವನ್ನು ಜಾರಿಗೆ ತರಲು ಬಹಳ ಸಮಯವಾಗುತ್ತದೆ. ಅಷ್ಟರಲ್ಲಿ ಚುನಾವಣೆಯೇ ಮುಗಿದು ಹೋಗಿರುತ್ತದೆ' ಎಂದು ಪೀಠವು ಹೇಳಿತು. ಅಂತಹ ಕಾನೂನು ಬಂದರೆ ಮುಂದಿನ ಚುನಾವಣೆಗಳಿಗಾದರೂ ಅನುಕೂಲವಾಗುತ್ತದೆ ಎಂದು ವಕೀಲರು ಹೇಳಿದರು.

ಎಲ್ಲಾ ಪಕ್ಷಗಳೂ ಚುನಾವಣೆ ಸಂದರ್ಭದಲ್ಲಿ ಇಂತಹ ಆಮಿಷ ಒಡ್ಡುತ್ತಿವೆ. ಇದರಿಂದ ರಾಜ್ಯಗಳ ಸಾಲ ಏರಿಕೆಯಾಗುತ್ತಿದೆ

ವಿಕಾಸ್ ಸಿಂಗ್
ಅರ್ಜಿದಾರರ ಪರ ವಕೀಲ

ಎಲ್ಲಾ ಪಕ್ಷಗಳೂ ಇಂತಹ ಆಮಿಷ ಒಡ್ಡುತ್ತವೆ ಎಂದು ಇಲ್ಲಿ ಹೇಳುತ್ತಿದ್ದೀರಿ. ಆದರೆ, ನಿಮ್ಮ ಅರ್ಜಿಯಲ್ಲಿ ಎರಡು ಪಕ್ಷಗಳನ್ನಷ್ಟೇ ಏಕೆ ಹೆಸರಿಸಿದ್ದೀರಿ?

ಎನ್.ವಿ.ರಮಣ
ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ಸಕ್ಕರೆ ಕಾರ್ಖಾನೆಗಳ ಮಾರಾಟದಲ್ಲಿ ಹಗರಣ: ತನಿಖೆಗೆ ಆಗ್ರಹಿಸಿ 'ಅಣ್ಣಾ' ಪತ್ರ

ಪ್ರಜಾವಾಣಿ ವಾರ್ತೆ



ಅಣ್ಣಾ ಹಜಾರೆ

ಮುಂಬೈ: ಮಹಾರಾಷ್ಟ್ರದ ಸಹಕಾರ ಸಕ್ಕರೆ ಕಾರ್ಖಾನೆಗಳ ಮಾರಾಟದಲ್ಲಿ ನಡೆದಿದೆ ಎನ್ನಲಾದ ₹25,000 ಕೋಟಿ ಹಗರಣ ಕುರಿತು ತನಿಖೆ ನಡೆಸಬೇಕು ಎಂದು ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಅಣ್ಣಾ ಹಜಾರೆ ಆಗ್ರಹಪಡಿಸಿದ್ದಾರೆ.

ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದು, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸ್ವತಂತ್ರ ಮತ್ತು ನಿಷ್ಪಕ್ಷಪಾತವಾದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

'ಈ ಹಗರಣದಲ್ಲಿ ರಾಜಕಾರಣಿಗಳು, ಅಧಿಕಾರಿಗಳು ಭಾಗಿಯಾಗಿರುವ ಶಂಕೆ ಇದೆ. ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಕೈಗೆಟುಕುವ ದರಕ್ಕೆ ಖಾಸಗಿಯವರಿಗೆ ಮಾರಲಾಗಿದೆ. ಈ ಬಗ್ಗೆ ಪಾರದರ್ಶಕ ತನಿಖೆ ಆಗಬೇಕಿದೆ' ಎಂದಿದ್ದಾರೆ.

'ಸಕ್ಕರೆ ಕಾರ್ಖಾನೆಗಳ ಮಾರಾಟದ ವಿರುದ್ಧ ನಾವು ಹೋರಾಟ ನಡೆಸುತ್ತಿದ್ದೇವೆ. 2017ರಲ್ಲಿ ಮುಂಬೈನಲ್ಲಿ ದೂರು ದಾಖಲಿಸಿದ್ದೆವು. ಡಿಐಜಿ ದರ್ಜೆಯ ಅಧಿಕಾರಿಯನ್ನು ತನಿಖೆಗೆ ನಿಯೋಜಿಸಲಾಗಿತ್ತು. ಈ ಹಗರಣ ಕುರಿತು ಕ್ರಮ ಜರುಗಿಸಲು ಮಹಾರಾಷ್ಟ್ರ ಸರ್ಕಾರ ಸಿದ್ಧವಿಲ್ಲ. ಹೀಗಾಗಿ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಬೇಕು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಗುರು ರಾಘವೇಂದ್ರ ಬ್ಯಾಂಕ್: ಸಾಲ ವಸೂಲಾತಿಯಲ್ಲೂ ವಂಚನೆ'

ಬೆಂಗಳೂರು: 'ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನವರು ಗ್ರಾಹಕರಿಂದ ಸಾಲದ ಮೊತ್ತಕ್ಕಿಂತಲೂ ನೂರು ಪಟ್ಟು ಹೆಚ್ಚು ಹಣ ವಸೂಲಿ ಮಾಡುತ್ತಿದ್ದಾರೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ ಎಚ್.ಡಿ.ಬಸವರಾಜು ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, 'ಗ್ರಾಹಕರೊಬ್ಬರು 2006–07ರಲ್ಲಿ ₹9 ಲಕ್ಷ ಸಾಲ ಪಡೆದು ಮರುಪಾವತಿ ಮಾಡಿದ್ದರು. ಹೀಗಿದ್ದರೂ ₹57.30 ಕೋಟಿ ಸಾಲ ಬಾಕಿ ಉಳಿಸಿಕೊಂಡಿದ್ದಾರೆ ಎಂದು ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಆ ಮೂಲಕ ಮಾನಸಿಕ ಕಿರುಕುಳ ನೀಡಲಾಗುತ್ತಿದೆ. ಹೀಗೆ ಹಲವು ಗ್ರಾಹಕರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಬಲವಂತವಾಗಿ ಸಾಲ ವಸೂಲಿ ಮಾಡಲು ಪ್ರಯತ್ನಿಸಲಾಗುತ್ತಿದೆ. ಬ್ಯಾಂಕ್‌ನವರ ಈ ಕೃತ್ಯಕ್ಕೆ ಪೊಲೀಸರು ಸಹಕಾರ ನೀಡುತ್ತಿದ್ದಾರೆ' ಎಂದು ದೂರಿದರು.

ಎಎಪಿ ಬೆಂಗಳೂರು ನಗರ ಕಾನೂನು ಘಟಕದ ಅಧ್ಯಕ್ಷ ಮಂಜುನಾಥ್ ಸ್ವಾಮಿ, 'ಗ್ರಾಹಕರು ಬೃಹತ್ ಮೊತ್ತದ ಸಾಲ ಪಡೆದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಬ್ಯಾಂಕ್‌ನ ಆಡಳಿತ ಮಂಡಳಿಗೆ ವಕೀಲರ ಮೂಲಕ ನೋಟಿಸ್ ನೀಡಲಾಗಿದೆ. ಒಂದೂವರೆ ತಿಂಗಳಾದರೂ ಬ್ಯಾಂಕ್‌ನಿಂದ ಪ್ರತಿಕ್ರಿಯೆ ಬಂದಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಕೂಡಲೇ ಮಧ್ಯಪ್ರವೇಶಿಸಿ ಗ್ರಾಹಕರಿಗೆ ಆಗುತ್ತಿರುವ ಅನ್ಯಾಯ ತಡೆಯುವಂತೆ ಪೊಲೀಸರಿಗೆ ಸೂಚನೆ ನೀಡಬೇಕು' ಎಂದ ಒತ್ತಾಯಿಸಿದರು.

ಎಎಪಿ ಮುಖಂಡರಾದ ಉಷಾ ಮೋಹನ್, ಮಂಜುನಾಥ್ ಪಾಪಣ್ಣ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

'ಸಾಲ ವಿತರಣೆಯಲ್ಲಿ ಶೇ 68.18 ಗುರಿ ಸಾಧನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಹಕಾರ ಸಂಘಗಳ ಮೂಲಕ 30.86 ಲಕ್ಷ ರೈತರಿಗೆ ₹20,810 ಕೋಟಿ ಸಾಲ ವಿತರಿಸುವ ಗುರಿ ಹೊಂದಿದ್ದು, ಈವರೆಗೆ ಶೇಕಡ 68.18ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಸಹಕಾರ ಸಂಘಗಳ ರಿಜಿಸ್ಟ್ರಾರ್ ಕಚೇರಿಯಲ್ಲಿ ಸೋಮವಾರ ಸಹಕಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈವರೆಗೆ ಒಟ್ಟು 19.58 ಲಕ್ಷ ರೈತರಿಗೆ 14,188 ಕೋಟಿ ಸಾಲ ವಿವರಿಸಲಾಗಿದೆ. ಈ ಪೈಕಿ 19.27 ಲಕ್ಷ ರೈತರಿಗೆ ₹13,295 ಕೋಟಿ ಅಲ್ಪಾವಧಿ ಕೃಷಿ ಸಾಲ ನೀಡಿದ್ದರೆ, 31,000 ರೈತರಿಗೆ ₹893 ಕೋಟಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ನೀಡಲಾಗಿದೆ' ಎಂದು ವಿವರಿಸಿದರು.

ಕೃಷಿ ಸಾಲಕ್ಕೆ ಬಡ್ಡಿ ಸಹಾಯಧನ ನೀಡಲು ಪ್ರಸಕ್ತ ವರ್ಷ ₹ 1,012 ಕೋಟಿ ಅನುದಾನ ಒದಗಿಸಲಾಗಿದೆ. ಅದರಲ್ಲಿ ₹ 757.21 ಕೋಟಿಯನ್ನು ಈವರೆಗೆ ಬಿಡುಗಡೆ ಮಾಡಲಾಗಿದೆ. ಕೃಷಿ ಉತ್ಪನ್ನ ಅಡಮಾನ ಸಾಲ ಯೋಜನೆಯಲ್ಲಿ 18,958 ರೈತರಿಗೆ ₹ 306 ಕೋಟಿ ನೀಡಲಾಗಿದೆ ಎಂದು ತಿಳಿಸಿದರು.

ಕೃಷಿ ಸಾಲ ವಿತರಣೆಯಲ್ಲಿ ಮಾರ್ಚ್ 25ರೊಳಗೆ ಸಂಪೂರ್ಣ ಗುರಿ ಸಾಧಿಸುವಂತೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

19,196 ಸ್ವಸಹಾಯ ಗುಂಪುಗಳಿಗೆ ₹689 ಕೋಟಿ ಸಾಲ ನೀಡಲಾಗಿದೆ. ಆತ್ಮನಿರ್ಭರ ಯೋಜನೆಯಡಿ 873 ಸಹಕಾರ ಸಂಘಗಳಿಗೆ ₹302 ಕೋಟಿ ಸಾಲ ಮಂಜೂರು ಮಾಡಲಾಗಿದೆ. ಅದರಲ್ಲಿ 581 ಸಂಘಗಳಿಗೆ ₹72.73 ಕೋಟಿ ಸಾಲ ವಿತರಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಸಾಲ ಮನ್ನಾ ಪ್ರಸ್ತಾವವಿಲ್ಲ: ಹೆಚ್ಚಿನ ಪ್ರಮಾಣದ ರೈತರಿಗೆ ಶೂನ್ಯ ಬಡ್ಡಿ ಮತ್ತು ಕಡಿಮೆ ದರದ ಬಡ್ಡಿಯಲ್ಲಿ ಸಾಲ ವಿತರಿಸುವ ಗುರಿ ಸಹಕಾರ ಇಲಾಖೆಯ ಮುಂದಿದೆ. ಕೃಷಿ ಸಾಲವನ್ನು ಮನ್ನಾ ಮಾಡುವ ಯಾವುದೇ ಪ್ರಸ್ತಾವ ಇಲಾಖೆಯ ಮುಂದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಒಂದೇ ತಂತ್ರಾಂಶಕ್ಕೆ ಯೋಜನೆ: ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಮತ್ತು ಎಲ್ಲ ಕೃಷಿ ಪತ್ತಿನ ಪ್ರಾಥಮಿಕ ಸಹಕಾರ ಸಂಘಗಳಿಗೆ ಒಂದೇ ತಂತ್ರಾಂಶ ಅಳವಡಿಸಲು ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ. ಕೇಂದ್ರವು ಶೇ 60ರಷ್ಟು ಅನುದಾನ ನೀಡಲಿದೆ. ಉಳಿದ ಶೇ 40ರಷ್ಟನ್ನು ರಾಜ್ಯ ಸರ್ಕಾರ, ಅಪೆಕ್ಸ್ ಮತ್ತು ಡಿಸಿಸಿ ಬ್ಯಾಂಕ್‌ಗಳು ಭರಿಸಬೇಕು. ಈ ಕುರಿತು ಚರ್ಚಿಸಲು ಇದೇ 27ರಂದು ಸಭೆ ನಡೆಸಲಾಗುವುದು ಎಂದು ಸಚಿವರು ತಿಳಿಸಿದರು.

'ಫ್ರೂಟ್ಸ್' ತಂತ್ರಾಂಶ ಬಳಕೆ ಸ್ಥಗಿತ



ಎಸ್.ಟಿ. ಸೋಮಶೇಖರ್

'ಫ್ರೂಟ್ಸ್ ತಂತ್ರಾಂಶದ ಮೂಲಕ ರೈತರ ಪಹಣಿ ದಾಖಲೆಗಳಲ್ಲಿ ಸಾಲದ ವಿವರ ನಮೂದಿಸುವ ಮತ್ತು ಅದೇ ದಾಖಲೆ ಆಧಾರದಲ್ಲಿ ಸಾಲ ವಿತರಿಸುವ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಆದರೆ, ಅದರಿಂದ ರೈತರಿಗೆ ಹೆಚ್ಚಿನ ತೊಂದರೆ ಆಗುತ್ತಿದೆ. ಈ ಕಾರಣದಿಂದ ಸಹಕಾರ ಸಂಘಗಳಲ್ಲಿ ಫ್ರೂಟ್ಸ್ ತಂತ್ರಾಂಶ ಬಳಕೆಯನ್ನು ಸ್ಥಗಿತಗೊಳಿಸಲಾಗಿದೆ' ಎಂದು ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಹಿಂದಿನಂತೆ ಉಪ ನೋಂದಣಿ ಕಚೇರಿಗಳಲ್ಲೇ ಆಸ್ತಿಯ ಅಡಮಾನ ಪ್ರಕ್ರಿಯೆ ಮತ್ತು ದಾಖಲೆಗಳಲ್ಲಿ ನಮೂದಿಸುವ ಪ್ರಕ್ರಿಯೆ ನಡೆಯಲಿದೆ ಅವರು ಹೇಳಿದರು.

ಹೃದಯಾಘಾತ: ತುರ್ತು ಚಿಕಿತ್ಸೆಗೆ ಹೊಸ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯಾಘಾತ ಪ್ರಕರಣಗಳಲ್ಲಿ ಆಯಾ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳಲ್ಲೇ ತುರ್ತು ಚಿಕಿತ್ಸೆ ನೀಡಿ, ನಂತರದಲ್ಲಿ ನಿಯೋಜಿತ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದೊಯ್ಯಲು ಹೊಸ ಯೋಜನೆಯೊಂದನ್ನು ಜಾರಿಗೊಳಿಸುವ ಪ್ರಸ್ತಾವಕ್ಕೆ ಜಯದೇವ ಹೃದ್ರೋಗ ಸಂಸ್ಥೆಯ ಆಡಳಿತ ಮಂಡಳಿ ಸೋಮವಾರ ಒಪ್ಪಿಗೆ ನೀಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ. ಜಯದೇವ ಹೃದ್ರೋಗ ಸಂಸ್ಥೆಯ ನೇತೃತ್ವದಲ್ಲಿ ರಾಜ್ಯದ ಆಯ್ದ 75 ತಾಲ್ಲೂಕುಗಳಲ್ಲಿ ಪ್ರಸಕ್ತ ವರ್ಷದಿಂದಲೇ ಈ ಯೋಜನೆಯನ್ನು ಜಾರಿಗೊಳಿಸಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ಕಂದಾಯ ವಿಭಾಗಗಳ ವ್ಯಾಪ್ತಿಯ ತಲಾ 15 ತಾಲ್ಲೂಕುಗಳು ಹಾಗೂ ಮಂಗಳೂರು ಸುತ್ತಮುತ್ತಲಿನ ಜಿಲ್ಲೆಗಳ 15 ತಾಲ್ಲೂಕುಗಳನ್ನು ಈ ಯೋಜನೆಗೆ ಆಯ್ಕೆ ಮಾಡಲಾಗುತ್ತಿದೆ. ತಲಾ 15 ತಾಲ್ಲೂಕುಗಳನ್ನು ಒಂದು ಹೃದ್ರೋಗ ಚಿಕಿತ್ಸಾ ಕೇಂದ್ರದ ಅಡಿಯಲ್ಲಿ ತರುವ ಪ್ರಸ್ತಾವವಿದೆ.

'ಹಬ್ ಅಂಡ್ ಸ್ಪೋಕ್ ಮಾದರಿ' ಎಂದು ನೂತನ ಯೋಜನೆಗೆ ಹೆಸರಿಸಲಾಗಿದೆ. ಏಜೆನ್ಸಿಯೊಂದರ ಮೂಲಕ ಆಯ್ದ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳ ವೈದ್ಯರು ಮತ್ತು ಸಿಬ್ಬಂದಿಗೆ ಹೃದಯಾಘಾತಕ್ಕೆ ಒಳಗಾದವರಿಗೆ ತುರ್ತು ಚಿಕಿತ್ಸೆ ನೀಡುವ ಕುರಿತು ತರಬೇತಿ ನೀಡಲಾಗುತ್ತಿದೆ. ಆ ಎಲ್ಲ ಆಸ್ಪತ್ರೆಗಳಿಗೂ ತುರ್ತು ಚಿಕಿತ್ಸಾ ಕಿಟ್ ಕೂಡ ಪೂರೈಸಲಾಗುತ್ತದೆ. ಆರಂಭದಲ್ಲಿ ಅಲ್ಲಿ ಚಿಕಿತ್ಸೆ ನೀಡಿ, ತಕ್ಷಣ ನಿಯೋಜಿತ ಹೃದ್ರೋಗ ಕೇಂದ್ರಕ್ಕೆ ರವಾನಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇದಕ್ಕಾಗಿಯೇ ಪ್ರತ್ಯೇಕ ಆಂಬುಲೆನ್ಸ್ ಕೂಡ ಒದಗಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಉಪ ಕೇಂದ್ರ ಆರಂಭಕ್ಕೆ ಒಪ್ಪಿಗೆ: ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಯಿಂದ 50 ಹಾಸಿಗೆಗಳ ಸಾಮರ್ಥ್ಯದ ಹೃದ್ರೋಗ ಚಿಕಿತ್ಸಾ ಉಪ ಕೇಂದ್ರವನ್ನು ಜೂನ್ ತಿಂಗಳಲ್ಲಿ ಆರಂಭಿಸುವ ಪ್ರಸ್ತಾವಕ್ಕೂ ಆಡಳಿತ ಮಂಡಳಿ ಸಭೆ ಒಪ್ಪಿಗೆ ನೀಡಿದೆ.

ನಿರ್ದೇಶಕರಿಗೆ ಪ್ರಶಂಸೆ: 'ಜಯದೇವ ಹೃದ್ರೋಗ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದ ಹೃದ್ರೋಗ ಚಿಕಿತ್ಸಾ ಕೇಂದ್ರವಾಗಿ ಖ್ಯಾತಿ ಗಳಿಸಿದೆ. ಇದಕ್ಕೆ ಸಂಸ್ಥೆಯ ನಿರ್ದೇಶಕ ಡಾ.ಸಿ. ಎನ್. ಮಂಜುನಾಥ್ ಅವರ ಸಾರಥ್ಯವೇ ಕಾರಣ' ಎಂದು ಸಭೆಯಲ್ಲಿ ಮುಖ್ಯಮಂತ್ರಿ ಪ್ರಶಂಸಿಸಿದ್ದಾರೆ.

ಸಂಸ್ಥೆಯ ಮುಂದಿನ ಯೋಜನೆಗಳಿಗೆ ಸರ್ಕಾರ ಸಂಪೂರ್ಣ ಬೆಂಬಲ ನೀಡಲಿದೆ. ಬಜೆಟ್‌ನಲ್ಲಿ ಎಲ್ಲ ರೀತಿಯ ನೆರವು ಒದಗಿಸಲಾಗುವುದು ಎಂದು ಬೊಮ್ಮಾಯಿ ಸಭೆಯಲ್ಲೇ ಭರವಸೆ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.


ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮತ್ತು ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಹುಬ್ಬಳ್ಳಿಯಲ್ಲಿ ಜಯದೇವ ಕೇಂದ್ರ

ಜಯದೇವ ಹೃದ್ರೋಗ ಸಂಸ್ಥೆಯಿಂದ ಹುಬ್ಬಳ್ಳಿಯಲ್ಲಿ 350 ಹಾಸಿಗೆಗಳ ಸಾಮರ್ಥ್ಯದ ಹೃದ್ರೋಗ ಚಿಕಿತ್ಸಾ ಕೇಂದ್ರ ಆರಂಭಿಸುವ ಪ್ರಸ್ತಾವಕ್ಕೆ ಸಂಸ್ಥೆಯ ಆಡಳಿತ ಮಂಡಳಿ ಸಭೆ ಸೋಮವಾರ ಅನುಮೋದನೆ ನೀಡಿದೆ.

ಬೆಳಗಾವಿ ಕಂದಾಯ ವಿಭಾಗದ ಜಿಲ್ಲೆಗಳ ಜನರಿಗೆ ಅನುಕೂಲವಾಗುವಂತೆ ಈ ಕೇಂದ್ರ ಸ್ಥಾಪನೆಗೆ ಜಯದೇವ ಹೃದ್ರೋಗ ಸಂಸ್ಥೆ ಪ್ರಸ್ತಾವ ಸಲ್ಲಿಸಿತ್ತು. ಅದಕ್ಕೆ ಒಪ್ಪಿಗೆ ನೀಡಿದ್ದು, ಅಗತ್ಯವಿರುವ ಅನುದಾನವನ್ನು ಬಜೆಟ್‌ನಲ್ಲಿ ಒದಗಿಸುವುದಾಗಿ ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಪಘಾತ: ಮರ್ಮಾಂಗ ಊನ ವ್ಯಕ್ತಿಗೆ ₹ 17 ಲಕ್ಷ ಪರಿಹಾರ



ಬೆಂಗಳೂರು: ರಸ್ತೆ ಅಪಘಾತದಲ್ಲಿ ಮರ್ಮಾಂಗ ಶಾಶ್ವತ ಊನಗೊಂಡ ಸ್ಥಿತಿ ತಲುಪಿರುವ ಯುವಕನಿಗೆ ಹೈಕೋರ್ಟ್ ಒಟ್ಟು ₹ 17.66 ಲಕ್ಷ ಪರಿಹಾರ ನಿಗದಿಪಡಿಸಿದೆ. ಈ ಕುರಿತಂತೆ ಬಸವರಾಜು ಎಂಬುವರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯ ಮೂರ್ತಿ ಎಸ್. ಜಿ.ಪಂಡಿತ್ ಮತ್ತು ನ್ಯಾಯ ಮೂರ್ತಿ ಎ.ಆರ್ ಹೆಗಡೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಆದೇಶ ನೀಡಿದೆ.

'ಯುವಕನಿಗೆ ಆಗಿರುವ ವೈಕಲ್ಯವನ್ನು ಯಾವ ರೀತಿಯಲ್ಲೂ ಸರಿಪಡಿಸಲಾಗದು. ಅಪಘಾತದಿಂದಾಗಿ ಆತ ಮದುವೆಯಾದರೂ ಲೈಂಗಿಕ ಸುಖ ಅನುಭವಿಸಲು ಸಾಧ್ಯವಿಲ್ಲ. ಆದ್ದರಿಂದ, ಮೋಟಾರು ವಾಹನ ಅಪಘಾತ ನ್ಯಾಯಮಂಡಳಿಗಳು (ಎಂಎಸಿಟಿ) ಅಪಘಾತ ಪ್ರಕರಣಗಳಲ್ಲಿ ಪರಿಹಾರ ನಿಗದಿಪಡಿಸುವಾಗ ಮಾನವೀಯ ಅಂಶಗಳಿಗೆ ಒತ್ತು ನೀಡಬೇಕು' ಎಂದು ಪೀಠ ಹೇಳಿದೆ.

ಪ್ರಕರಣವೇನು?: 2011ರಲ್ಲಿ ಹಾವೇರಿ ಜಿಲ್ಲೆ ರಾಣೆಬೆನ್ನೂರಿನಲ್ಲಿ ರಸ್ತೆ ಬದಿ ನಡೆದು ಹೋಗುತ್ತಿದ್ದ ಬಸವರಾಜು ಅವರಿಗೆ ಹಿಂದಿನಿಂದ ಬಂದ ಲಾರಿ ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವರ ಮರ್ಮಾಂಗಕ್ಕೆ ತೀವ್ರ ಪೆಟ್ಟಾಗಿತ್ತು.

'ಅವರ ಮರ್ಮಾಂಗ ಕಾಯಂ ವೈಕಲ್ಯಕ್ಕೆ ಒಳಗಾಗಿದೆ. ಹಾಗಾಗಿ ಆತ ಜೀವನದಲ್ಲಿ ಲೈಂಗಿಕ ಸುಖ ಅನುಭವಿಸಲು ಸಾಧ್ಯವಿಲ್ಲ' ಎಂದು ವೈದ್ಯರು ಪ್ರಮಾಣಪತ್ರ ನೀಡಿದ್ದರು.

ಮೋಟಾರು ವಾಹನ ಅಪಘಾತ ನ್ಯಾಯಮಂಡಳಿ ಕೇವಲ ₹ 50 ಸಾವಿರ ಪರಿಹಾರ ನಿಗದಿಪಡಿಸಿ, ಒಟ್ಟು ₹ 3.73 ಲಕ್ಷ ಪರಿಹಾರ ನೀಡಲು ವಿಮಾ ಕಂಪನಿಗೆ ಆದೇಶಿಸಿತ್ತು. ಅರ್ಜಿದಾರ ಯುವಕ 11.75 ಲಕ್ಷ ಪರಿಹಾರ ಕೇಳಿದ್ದರು. ಆದರೆ, ನ್ಯಾಯಪೀಠ ಅದಕ್ಕೂ ಅಧಿಕ ಮೊತ್ತವನ್ನು ಪರಿಹಾರ ರೂಪದಲ್ಲಿ ನಿಗದಿಪಡಿಸಿದೆ.

ಕೆ.ಆರ್‌.ಪುರ ಹೋಬಳಿಯಲ್ಲಿನ ಭೂ ಕಬಳಿಕೆ ಆರೋಪ

ಸಚಿವ ಬೈರತಿ ಬಸವರಾಜು ವಿರುದ್ಧದ ವಿಚಾರಣೆ ತಡೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಬೈರತಿ ಬಸವರಾಜ್ ಮತ್ತು ಶಾಸಕ ಆರ್.ಶಂಕರ್ ವಿರುದ್ಧ ಅಧೀನ ನ್ಯಾಯಾಲಯದ ವಿಚಾರಣೆಗೆ ನೀಡಿದ್ದ ಮಧ್ಯಂತರ ತಡೆಯನ್ನು ಹೈಕೋರ್ಟ್ ಫೆಬ್ರುವರಿ ಎರಡನೇ ವಾರದವರೆಗೂ ವಿಸ್ತರಿಸಿದೆ.

'ಅಧೀನ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಸಚಿವ ಬೈರತಿ ಬಸವರಾಜ್, ಶಾಸಕ ಆರ್.ಶಂಕರ್ ಮತ್ತು ಎ.ಎಂ. ಮಾದಪ್ಪ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಮೇಲ್ಮನವಿ ವಿಚಾರಣೆ ನಡೆಸಿ ಈ ಮೊದಲು ಮಧ್ಯಂತರ ತಡೆ ನೀಡಿತ್ತು. ಮಂಗಳವಾರ ಪುನಃ ವಿಚಾರಣೆ ನಡೆಸಿದ ನ್ಯಾಯಪೀಠ ಫೆಬ್ರುವರಿ ಎರಡನೇ ವಾರಕ್ಕೆ ಮುಂದೂಡಿ ತಡೆ ವಿಸ್ತರಿಸಿ ಆದೇಶಿಸಿತು.

ಪ್ರಕರಣವೇನು?: 'ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ಕಲ್ಕೆರೆ ಗ್ರಾಮದ ಸರ್ವೆ ನಂಬರ್ 375/2ರಲ್ಲಿನ 22.43 ಎಕರೆ ಅದೂರ್ ಅಣ್ಣೈಯಪ್ಪ ಎಂಬುವವರಿಗೆ ಸೇರಿದ್ದು, 2003ರ ಮೇ 21ರಂದು ಸಂಬಂಧಿಕರಾದ ಮಾದಪ್ಪ ಮತ್ತು ಪಿಳ್ಳಮಾದಪ್ಪ ಖಾಲಿ ಹಾಳೆಗಳ ಮೇಲೆ ಅದೂರ್ ಅಣ್ಣೈಯಪ್ಪ ಅವರ ಸಹಿ ಮತ್ತು ಹೆಬ್ಬೆಟ್ಟು ಗುರುತು ಪಡೆದುಕೊಂಡರು. ನಂತರ ಪಾಲುದಾರಿಕೆ ಕರಾರು ಸಿದ್ಧಪಡಿಸಿಕೊಂಡರು' ಎಂಬುದು ಆರೋಪ.

'ಈ 22.43 ಎಕರೆಯನ್ನು ಬೈರತಿ ಬಸವರಾಜ್ ಅವರಿಗೆ 2003ರ ಮೇ 21ರಂದು ಅಕ್ರಮವಾಗಿ ಮಾರಾಟ ಮಾಡಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಡಲಾಗಿದೆ' ಎಂದು ಆರೋಪಿಸಿ ಅಣ್ಣೈಯಪ್ಪ ಪುತ್ರ ಮಾದಪ್ಪ ಖಾಸಗಿ ದೂರು ದಾಖಲಿಸಿದ್ದರು.

ನಗರದ 42ನೇ ಎಸಿಎಂಎಂ ನ್ಯಾಯಾಲಯ ಪ್ರಕರಣವನ್ನು ವಿಚಾರಣೆಗೆ ಅಂಗೀಕರಿಸಿ 2021ರ ನವೆಂಬರ್ 5ರಂದು ಬೈರತಿ ಬಸವರಾಜ್, ಆರ್.ಶಂಕರ್, ಮಾದಪ್ಪ ಮತ್ತು ಪಿಳ್ಳಮಾದಪ್ಪ ಅವರಿಗೆ ಸಮನ್ಸ್ ಜಾರಿ ಮಾಡಿತ್ತು.

ಬಲಿಜ ಸಂಘದ ಸದಸ್ಯತ್ವಕ್ಕಾಗಿ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ರಾಜ್ಯ ಬಲಿಜ ಸಂಘದಲ್ಲಿ ಸದಸ್ಯತ್ವ ನೋಂದಣಿ ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಬಲಿಜ ಸಮುದಾಯದ ಮುಖಂಡರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಚಾಮರಾಜಪೇಟೆಯಲ್ಲಿನ ಸಂಘದ ಕಚೇರಿ ಎದುರು ಧರಣಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. 'ಮಾರ್ಚ್‌ನಲ್ಲಿ ಸಂಘಕ್ಕೆ ಚುನಾವಣೆ ನಡೆಯಲಿದೆ. ಈಗಲೇ ಸದಸ್ಯತ್ವ ನೋಂದಣಿ ನಿಲ್ಲಿಸಲಾಗಿದೆ. ಸಂಘದ ಹಾಲಿ ಪದಾಧಿಕಾರಿಗಳು ತಮ್ಮ ಆಪ್ತರಿಗೆ ಮಾತ್ರ ಸದಸ್ಯತ್ವ ನೀಡಿದ್ದಾರೆ' ಎಂದು ಆರೋಪಿಸಿದರು.

ರಾಜ್ಯದಲ್ಲಿ ಬಲಿಜ ಸಮಾಜದ 50 ಲಕ್ಷ ಜನಸಂಖ್ಯೆ ಇದೆ. ಆದರೆ, 12 ಸಾವಿರ ಮಾತ್ರ ಸದಸ್ಯರನ್ನು ಸಂಘ ಹೊಂದಿದೆ. ಸದಸ್ಯತ್ವ ನೋಂದಣಿ ಮಾಡಬಹುದೆಂದು ಸಹಕಾರ ಸಂಘಗಳ ಉಪನಿಬಂಧಕರು ತಿಳಿಸಿದ್ದರೂ, ಸದಸ್ಯತ್ವ ಸ್ವೀಕರಿಸುತ್ತಿಲ್ಲ ಎಂದು ಸಮಾಜದ ಮುಖಂಡ ಮುನಿರಾಜು ದೂರಿದರು.



ಬಲಿಜ ಸಂಘದ ಕಚೇರಿ ಎದುರು ಪ್ರತಿಭಟನೆ ನಡೆಸಿದ ಸಮುದಾಯದ ಮುಖಂಡರು –ಪ್ರಜಾವಾಣಿ ಚಿತ್ರ

'ಚುನಾವಣೆಗೆ ಇನ್ನೂ ಎರಡು ತಿಂಗಳು ಬಾಕಿ ಇದೆ. ಈ ಹಿಂದೆ ಸದಸ್ಯತ್ವ ನೋಂದಣಿ ಮತ್ತು ಕೊನೆಯ ದಿನಾಂಕದ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ಈಗ ಸದಸ್ಯತ್ವ ನೀಡುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'2021ರ ಸೆ.30ರ ತನಕ ಸದಸ್ಯತ್ವ ನೋಂದಣಿಗೆ ಅವಕಾಶ ನೀಡಲಾಗಿತ್ತು. ಈ ಬಗ್ಗೆ ಪ್ರಚಾರವನ್ನೂ ಮಾಡಲಾಗಿತ್ತು. ಆ ದಿನಾಂಕದೊಳಗೆ ಅರ್ಜಿ ಸಲ್ಲಿಸಿದ್ದವರಿಗೆ ಸದಸ್ಯತ್ವ ನೀಡಲಾಗಿದೆ. ಚುನಾವಣೆ ನಡೆಸುವಂತೆ ಡಿಸೆಂಬರ್‌ನಲ್ಲಿ ಜಿಲ್ಲಾ ನೋಂದಣಾಧಿಕಾರಿ ಹಾಗೂ ಸಹಕಾರ ಸಂಘದ ಉಪನಿಬಂಧಕರಿಗೆ ಪತ್ರ ಬರೆಯಲಾಗಿದೆ. ಸಂಘದ ನಿಯಮದ ಪ್ರಕಾರ ಈಗ ಸದಸ್ಯತ್ವ ನೀಡಲು ಆಗುವುದಿಲ್ಲ' ಎಂದು ಸಂಘದ ಅಧಿಕಾರಿಗಳು ಸ್ಪಷ್ಟಪಡಿಸಿದರು.

ಐಪಿಎಸ್ ಶ್ರೇಣಿಯವರಲ್ಲದ ಅಧಿಕಾರಿಗಳಿಗೆ ಬಡ್ತಿಯಲ್ಲಿ ಅನ್ಯಾಯ: ಸರ್ಕಾರಕ್ಕೆ ಪತ್ರ

ಬೆಂಗಳೂರು: 'ಬಡ್ತಿ ನೀಡುವ ವಿಚಾರದಲ್ಲಿ ಐಪಿಎಸ್ ಶ್ರೇಣಿಯವರಲ್ಲದ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ' ಎಂದು ಆರೋಪಿಸಿ ರಾಜ್ಯ ಪೊಲೀಸ್ ಸಂಘದ ಪದಾಧಿಕಾರಿಗಳು, ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

'ನಾನ್ ಐಪಿಎಸ್ ಅಧಿಕಾರಿಗಳಿಗೆ ಆಗುತ್ತಿರುವ ಅನ್ಯಾಯವನ್ನು 15 ದಿನದೊಳಗೆ ಸರಿಪಡಿಸಬೇಕು' ಎಂದು ಸಂಘದ ಅಧ್ಯಕ್ಷ ಎಂ. ಯೋಗೇಶ್ ಒತ್ತಾಯಿಸಿದ್ದಾರೆ.

'ರಾಜ್ಯದಲ್ಲಿ 57 ಐಪಿಎಸ್ ಹಾಗೂ 109 ಐಪಿಎಸ್ ಶ್ರೇಣಿಯವರಲ್ಲದವರಿಗೆ ಮೀಸಲಾದ ಹುದ್ದೆಗಳು ಮಂಜೂರಾಗಿವೆ. ಈ ಹುದ್ದೆಗಳಿಗೆ ಬಡ್ತಿ ನೀಡುವ ಸಂದರ್ಭದಲ್ಲಿ, ಐಪಿಎಸ್‌ಗಳಿಗೆ ಮೀಸಲಿರುವ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ. ಇದರಿಂದ ಸ್ಥಳೀಯ ಕನ್ನಡಿಗರಾದ ಐಪಿಎಸ್ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ' ಎಂದೂ ಪತ್ರದಲ್ಲಿ ದೂರಿದ್ದಾರೆ.

'ಐಪಿಎಸ್ ಶ್ರೇಣಿಯವರಲ್ಲದ ಅಧಿಕಾರಿಗಳು ಇದ್ದರೂ, ಅವರಿಗಾಗಿ ಇರುವ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ನೇಮಿಸುವುದು ಸರಿಯಲ್ಲ. ಇಂಥ ಹುದ್ದೆಗಳಲ್ಲಿರುವ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ಆ ಹುದ್ದೆಗಳಿಗೆ ಐಪಿಎಸ್ ಶ್ರೇಣಿಯವರಲ್ಲದ ಅಧಿಕಾರಿಗಳನ್ನು ಭರ್ತಿ ಮಾಡಬೇಕು' ಎಂದೂ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಗೂ ಪತ್ರದ ಪ್ರತಿ ಕಳುಹಿಸಲಾಗಿದೆ.

'ಸಿದ್ದರಾಮಯ್ಯ ಆಗಾಗ್ಗೆ ಕರೆ ಮಾಡುತ್ತಾರೆ'

ಬೆಂಗಳೂರು: 'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬಹಳ ಸಲ ದೂರವಾಣಿ ಕರೆ ಮಾಡಿದ್ದಾರೆ. ಅವರ ಅಂತರಾಳದಲ್ಲಿ ಏನಿದೆಯೊ ನನಗಂತೂ ಗೊತ್ತಿಲ್ಲ' ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜು ಹೇಳಿದ್ದಾರೆ.

'ಅವರು ಆಗಿಂದಾಗ್ಗೆ ಫೋನ್ ಮಾಡುತ್ತಾರೆ. ಸೋಮವಾರವೂ ಬಾದಾಮಿಯಿಂದ ಕರೆ ಮಾಡಿದ್ದರು. ದೇವರ ಮೇಲೆ ಸತ್ಯ ಮಾಡಿ ಹೇಳುತ್ತೇನೆ ಅವರು ರಾಜಕೀಯವಾಗಿ ಒಂದು ಸಲವೂ ಮಾತನಾಡಿಲ್ಲ' ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ನನ್ನ ಬಳಿ ಯಾರೂ ಕೂಡ ಪಕ್ಷ ಬಿಡುವ ವಿಚಾರ ಹೇಳಿಲ್ಲ. ನಾನು ಹೋಗುವುದಾದರೆ ರಾಜಕೀಯ ಬಿಟ್ಟು ಮನೆಗೆ ಹೋಗುತ್ತೇನೆಯೇ ಹೊರತು ಬೇರೆ ಪಕ್ಷಕ್ಕೆ ಹೋಗುವುದಿಲ್ಲ. ಪ್ರತಿ ಚುನಾವಣೆಗೂ ಪಕ್ಷ ಬದಲು ಮಾಡಲು ಆಗುವುದಿಲ್ಲ. ಜನಸೇವೆ ಮಾಡುವುದಕ್ಕೆ ಬಂದಿದ್ದೇನೆ ಹೊರತು ಅಧಿಕಾರಕ್ಕಲ್ಲ. ನಾನು ಯಾವುದಕ್ಕೂ ಆಸೆ ಪಡುವವನಲ್ಲ' ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸಕೋಟೆ

ಟಿ.ಜಿ. ಬಡಾವಣೆ, 2ನೇ ಅಡ್ಡರಸ್ತೆ, ಪಿ.ಎಲ್.ಡಿ. ಬ್ಯಾಂಕ್, 1ನೇ ಅಂತಸ್ತು, ಹೊಸಕೋಟೆ-562114
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೂ: 080-27931066 ಇ-ಮೇಲ್: apmc.hskote@gmail.com

ಕ್ರಸಂ.: ಕೃಮಾಇ/ಕೃಉಮಾಸ/ಹೊ/359/2021-22 ದಿನಾಂಕ: 21.01.2022

ತಿದ್ದುಪಡಿ

ದಿನಾಂಕ: 23.01.2022 ರಂದು ಇದೇ ದಿನಪತ್ರಿಕೆಯಲ್ಲಿ ಪ್ರಕಟವಾದ ಇ-ಟೆಂಡರ್ ಪ್ರಕಟಣೆಯಲ್ಲಿ **ಟೆಂಡರ್‌ಗಿಟ್ಟ ಮೊತ್ತ ರೂ. 15.00** ಎಂದು ತಪ್ಪಾಗಿ ಮುದ್ರಿತವಾಗಿದೆ ಇದನ್ನು **ಟೆಂಡರ್‌ಗಿಟ್ಟ ಮೊತ್ತ : ರೂ.15,00,000/–** ಎಂದು ಓದಿಕೊಳ್ಳುವುದು. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/– ಕಾರ್ಯದರ್ಶಿ, ಕೃಉಮಾಸ, ಹೊಸಕೋಟೆ — ಸಹಿ/–ಆಡಳಿತಾಧಿಕಾರಿಗಳು, ಕೃಉಮಾಸ, ಹೊಸಕೋಟೆ

ಮಿದುಳು ಆರೋಗ್ಯ ಕಾರ್ಯಕ್ರಮಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ನೀತಿ ಆಯೋಗ ಹಾಗೂ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿರುವ 'ಕರ್ನಾಟಕ ಮಿದುಳು ಆರೋಗ್ಯ ಕಾರ್ಯಕ್ರಮ'ಕ್ಕೆ ಮಂಗಳವಾರ ಚಾಲನೆ ದೊರೆಯಿತು.

ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಪ್ರಾಯೋಗಿಕವಾಗಿ ಜಾರಿ ಮಾಡಲಾಗುತ್ತಿದೆ. ಮಾನಸಿಕ ರೋಗಗಳ ತಪಾಸಣೆ ಹಾಗೂ ಚಿಕಿತ್ಸೆ ನೀಡುವ ಬಗ್ಗೆ ವೈದ್ಯರಿಗೆ ಈ ಕಾರ್ಯಕ್ರಮದಡಿ ತರಬೇತಿ ನೀಡಲಾಗುತ್ತದೆ. ರೋಗಿಗಳನ್ನು ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲಾಗುತ್ತದೆ.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ಕೋವಿಡ್ ಕಾಣಿಸಿಕೊಂಡ ಬಳಿಕ ಜನರಲ್ಲಿ ಕಾಣಿಸಿಕೊಂಡ ಮಾನಸಿಕ ಸಮಸ್ಯೆಗಳಿಗೆ ನಿಮ್ಹಾನ್ಸ್ ಸಂಸ್ಥೆಯ ನೆರವಿನಿಂದ ಆಪ್ತ ಸಮಾಲೋಚನೆ ಸೇವೆ ನೀಡಲಾಯಿತು. ಇದನ್ನು ಇನ್ನಷ್ಟು ಮುಂದುವರಿಸಲಾಗುತ್ತಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಸುಮಾರು 2 ಲಕ್ಷ ಮಂದಿ ವೈದ್ಯ ಶಿಕ್ಷಣ ಪಡೆಯುತ್ತಿದ್ದಾರೆ. ಇವರನ್ನು ಬಳಸಿಕೊಂಡು ಮಾನಸಿಕ ಅನಾರೋಗ್ಯಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಈ ಪ್ರಾಯೋಗಿಕ ಕಾರ್ಯಕ್ರಮವನ್ನು ಉತ್ತಮವಾಗಿ ಜಾರಿ ಮಾಡಿ, ಸರ್ಕಾರಕ್ಕೆ ವರದಿ ನೀಡಬೇಕು. ನಂತರ ಮುಂದಿನ ಬಜೆಟ್‌ನಲ್ಲಿ ಹೆಚ್ಚು ಅನುದಾನ ಮೀಸಲಿಡಬಹುದು' ಎಂದರು.

ನಿಧನ ವಾರ್ತೆ

ಸ್ವಾತಂತ್ರ್ಯ ಹೋರಾಟಗಾರ ಎಂ.ಆರ್‌.ರಮೇಶ್



ನೆಲಮಂಗಲ: ಪಟ್ಟಣದ ನಿವಾಸಿ, ಸ್ತ್ರೀರೋಗ ತಜ್ಞೆ ಡಾ.ವಾರಿಣಿ ಅವರ ತಂದೆ ಎಂ.ಆರ್. ರಮೇಶ್ (93) ಅವರು ಸೋಮವಾರ ನಿಧನರಾಗಿದ್ದಾರೆ.

ವಯೋ ಸಹಜ ಖಾಯಿಲೆಯಿಂದ ಬಳಲುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಇವರು ತಮ್ಮ ಸ್ವಗ್ರಾಮ ದೊಡ್ಡಬಳ್ಳಾಪುರ ಜಿಲ್ಲೆ ಮೇಳೇಕೋಟೆ ಸರ್ಕಾರಿ ಶಾಲೆಗೆ ತಮ್ಮ 7 ಎಕರೆ ಜಮೀನನ್ನು 1991ರಲ್ಲಿ ದಾನ ಮಾಡಿದ್ದರು. ಸೋಮವಾರ ರಾತ್ರಿ ಅಂತ್ಯ ಸಂಸ್ಕಾರ ನಡೆಯಿತು. ಅಳಿಯ ತಾಲ್ಲೂಕು ನಿವೃತ್ತ ಆಡಳಿತ ವೈದ್ಯಾಧಿಕಾರಿ ವಸಂತಕುಮಾರ್, ಇಬ್ಬರು ಪುತ್ರಿಯರು ಹಾಗೂ ಪುತ್ರ ಇದ್ದಾರೆ.

ಪತ್ರಕರ್ತ ಡಿ.ಎಂ. ಶಂಭು



ಬೆಂಗಳೂರು: ಪತ್ರಕರ್ತ ಡಿ.ಎಂ. ಶಂಭು (76) ಅವರು ತಮ್ಮ ನಿವಾಸದಲ್ಲಿ ಮಂಗಳವಾರ ಸಂಜೆ ನಿಧನರಾದರು.

ಅವರಿಗೆ ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಲೋಕವಾಣಿ, ದೆಹಲಿ ವಾರ್ತೆ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಶಂಭು ಅವರು ಕೆಲಸ ಮಾಡಿದ್ದರು.

IN THE COURT OF THE CITY CIVIL, SESSIONS AND SPECIAL JUDGE AT BENGALURU.

MISC NO. 420/20, 421/20, 422/20, 426/20, 429/20 & 431/20

BETWEEN
The Competent Authority
Assistant Commissioner/
Bengaluru South sub division
Bengaluru. ...Petitioner

AND
M/S TGS Constructions Pvt Ltd
And others ...Respondents

Notice to Respondents No. 1 and 2

1. M/s TGS Construction Pvt Ltd
   Represented by its Managing Director
   Smt. Mandeep Kaur
   No.577/B, II Floor, Outer Ring Road
   Teachers Colony Koramangala
   Near Silk Board, Bengaluru.
2. Smt. Mandeep Kaur, Managing Director
   W/o Sachin Naik
   No. 577/B, II Floor, Outer Ring Road
   Teachers Colony Koramangala
   Near silk Board, Bengaluru.

Whereas, the Petitioner has filed the above petitions under section 5(2) of the KPIDFE Act 2004 against Respondents.

The Respondent No. 1 and 2 are hereby issued show cause notice u/s 12(1) of KPIDFE Act 2004, to appear in court of the Addl City Civil & session Judge (CCH-92) at Bengaluru, in person or by a pleader duly instructed and able to answer all material questions relating to above petitions on 05-02-2022 at 11.00 'O' Clock in the forenoon to answer the petitions.

Take notice that in default of your appearance on the date above mentioned the Petitions will be heard and determined in your absence.

Given under my hand and seal of the court this day 20th January 2022.

Sd/-
Smt. Shantha Mullur
Special Public Prosecutor
City Civil Court
Bengaluru.

By order of the court
Assistant Registrar
City Civil Court
Bengaluru

DIPR/DDU/3007/AKAR/2021-22

IN THE COURT OF THE CITY CIVIL, SESSIONS AND SPECIAL JUDGE AT BENGALURU.

MISC NO. 423/20 and 424/2020

BETWEEN
The Competent Authority
Assistant Commissioner/
Bengaluru South sub division
Bengaluru. ...Petitioner

AND
M/S TGS Constructions Pvt Ltd
And others ...Respondents

Notice to Respondents No. 1 to 3

1. M/s TGS Construction Pvt Ltd
   Represented by its Managing Director
   Smt. Mandeep Kaur
   No.577/B, II Floor, Outer Ring Road
   Teachers Colony Koramangala
   Near Silk Board, Bengaluru.
2. Smt. Mandeep Kaur W/o Sachin Naik
   No.577/B, II Floor, Outer Ring Road
   Teachers Colony Koramangala
   Near Silk Board, Bengaluru.
3. Sri. S. Murali
   S/o Late. Shivalingappa
   No. 13, 3rd Cross,
   Sudhama Nagar, Double Road,
   Bengaluru-560027.

Whereas, the Petitioner has filed the above petitions under section 5(2) of the KPIDFE Act 2004 against Respondents.

The Respondent No. 1 to 3 are hereby issued show cause notice u/s 12(1) of KPIDFE Act 2004, to appear in court of the Addl City Civil & session Judge (CCH-92) at Bengaluru, in person or by a pleader duly instructed and able to answer all material questions relating to above petitions on 05-02-2022 at 11.00 'O' Clock in the forenoon to answer the petitions.

Take notice that in default of your appearance on the date above mentioned the Petitions will be heard and determined in your absence.

Given under my hand and seal of the court this day 20th January 2022.

Sd/-
Smt. Shantha Mullur
Special Public Prosecutor
City Civil Court
Bengaluru.

By order of the court
Assistant Registrar
City Civil Court
Bengaluru

DIPR/DDU/3006/AKAR/2021-22

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ – 560095, ಭಾರತ
ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001
corporateaffairs@teamlease.com, www.teamleasegroup.com

31ನೇ ಡಿಸೆಂಬರ್ 2021ಕ್ಕೆ ಕೊನೆಯಾದ ತ್ರೈಮಾಸಿಕಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಕ್ರೋಡೀಕೃತ		ಏಕಿಕೃತ	
	31.12.2021ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 31.12.2020ಕ್ಕೆ	31.12.2021ಕ್ಕೆ ಕೊನೆಯಾದ 3 ತಿಂಗಳಿಗೆ	ಹಿಂದಿನ ಅವಧಿಯ 3 ತಿಂಗಳಿಗೆ ಕೊನೆಯಾದ 31.12.2020ಕ್ಕೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	176,717.94	128,527.25	153,219.44	118,083.24
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	3,194.77	2,459.16	2,498.56	2,414.63
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	3,024.57	2,312.04	2,491.60	2,193.38
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	3,023.35	2,321.33	2,501.77	2,192.84
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)–ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	63,492.89	55,499.15	63,728.97	55,169.95
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)				
(ಎ) ಮೂಲ (ರೂ.)	17.53	13.38	14.57	12.83
(ಬಿ) ಡೈಲ್ಯೂಟೆಡ್ (ರೂ.)	17.53	13.38	14.57	12.83

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 31ನೇ ಡಿಸೆಂಬರ್, 2021ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಡೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (www.teamleasegroup.com) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 31ನೇ ಡಿಸೆಂಬರ್, 2021ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 25ನೇ ಜನವರಿ, 2022ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ದಿನಾಂಕ: 25ನೇ ಜನವರಿ, 2022
ಸ್ಥಳ: ಬೆಂಗಳೂರು

ಅಶೋಕನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

ನಂ. 1380/ಬಿ, 6ನೇ ಅಡ್ಡರಸ್ತೆ, ಅಶೋಕನಗರ, ಬನಶಂಕರಿ 1ನೇ ಹಂತ, 2ನೇ ಘಟ್ಟ, ಬೆಂಗಳೂರು–560 050. ಫೋನ್: 080–26506123, 26606365, ಮೊಬೈಲ್: 99642 16663

ಅನುಬಂಧ–4
ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ನಿಯಮ–8(1)

ಸ್ವಾಧೀನದ ನೋಟೀಸ್

(ಸ್ಥಿರಾಸ್ತಿ ಸ್ವತ್ತಿಗೆ)

ಕೆಳಸಹಿದಾರರು **ಅಶೋಕನಗರ ಕೋ–ಆಪ್ ಬ್ಯಾಂಕ್ ಲಿ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ **ಡಿಮಾಂಡ್ ನೋಟೀಸನ್ನು** ಕೆಳಕಂಡ ಸಾಲಗಾರರಿಗೆ ತಮ್ಮ ಸಾಲದ ಮೊತ್ತಗಳನ್ನು ಡಿಮಾಂಡ್ ನೋಟೀಸ್‌ನಲ್ಲಿ ಸೂಚಿಸಿರುವಂತೆ ಮುಂದಿನ ಬಡ್ಡಿ, ಖರ್ಚು ವೆಚ್ಚ ಹಾಗೂ ಇತರೆಗಳನ್ನು ಸೇರಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗಾಗಿ ಮರುಪಾವತಿಸತಕ್ಕದ್ದು.

ಸಾಲಗಾರರುಗಳು ಹಣ ಪಾವತಿ ಮಾಡಲು ಅಶಕ್ತರಾಗಿರುವುದರಿಂದ ಸೆಕ್ಯುರಟೈಸೇಷನ್ ಕಾಯ್ದೆಯ ಸೆಕ್ಷನ್ 13(4) ಹಾಗೂ 8ನೇ ನಿಯಮ ಸೆಕ್ಯೂರಿಟಿ ಇನ್‌ಟ್ರಸ್ಟ್ (ಎನ್‌ಫೋರ್ಸ್‌ಮೆಂಟ್)ರಲ್ಲಿ ಹೇಳಿರುವಂತೆ ಕೆಳಗೆ ತಿಳಿಸಿರುವ ದಿನಾಂಕಗಳಂದು ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತುಗಳನ್ನು ಸ್ವಾಧೀನ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.

ಸಾಲಗಾರರುಗಳಿಗೆ ಈ ಮೂಲಕ ಗಮನವನ್ನು ತರಬಯಸುವುದೇನೆಂದರೆ ಕಾಯ್ದೆಯ ಪರಿಚ್ಛೇದ 13(8)ರ ನಿಬಂಧನೆಗಳಿಗನುಸಾರವಾಗಿ ಭದ್ರತಾ ಸ್ವತ್ತುಗಳನ್ನು ಪುನಃ ಪಡೆದುಕೊಳ್ಳಲು ಅವಕಾಶವಿರುತ್ತದೆ.

I) **ಸಾಲಗಾರರ ಹೆಸರು ಮತ್ತು ವಿಳಾಸ** : 1. **ಶ್ರೀ ಕೀರ್ತಿ ಎಂ** ಬಿನ್ ಮಣಿ ಎಸ್, ಸರೋಜ್ ಹ್ಯಾಬಿಟಟ್, ಫ್ಲಾಟ್ ನಂ. 501, 5ನೇ ಮಹಡಿ, ಸರ್ವೆ ನಂ. 56/2, ಶಿರಡಿ ಸಾಯಿ ನಗರ ಮುಖ್ಯರಸ್ತೆ, ಮುನ್ನೇಕೊಳಾಲ, ಮಾರತ್ತಹಳ್ಳಿ, ಬೆಂಗಳೂರು–560 037.

2. **ಶ್ರೀಮತಿ ಪೂರ್ಣಿಮ** .ಕೆ ಕೋಂ ಶ್ರೀ ಕೀರ್ತಿ ಎಂ, ಸರೋಜ್ ಹ್ಯಾಬಿಟಟ್, ಫ್ಲಾಟ್ ನಂ. 501, 5ನೇ ಮಹಡಿ, ಸರ್ವೆ ನಂ. 56/2, ಶಿರಡಿ ಸಾಯಿ ನಗರ ಮುಖ್ಯರಸ್ತೆ, ಮುನ್ನೇಕೊಳಾಲ, ಮಾರತ್ತಹಳ್ಳಿ, ಬೆಂಗಳೂರು–560 037.

3. **ಶ್ರೀ ಮಣಿಕಂದನ್ ಎಸ್**. ಬಿನ್ ಶಿವಕಾಶಿ ಜಿ, ಸರೋಜ್ ರೀಜೆನ್ಸಿ, ಫ್ಲಾಟ್ ನಂ. ಜಿ5, ಸೈಟ್ ನಂ. 3, ಮುನ್ನೇಕೊಳಾಲ, ಮಾರತ್ತಹಳ್ಳಿ, ಬೆಂಗಳೂರು–560 037.

ಡಿಮಾಂಡ್ ನೋಟೀಸ್ ನೀಡಿದ ದಿನಾಂಕ: 11–11–2021 **ಸ್ವಾಧೀನ ಸೂಚನೆ ದಿನಾಂಕ**: 14–01–2022

ಡಿಮಾಂಡ್ ನೋಟೀಸಿನ ಪ್ರಕಾರ ಒಟ್ಟು ಬಾಕಿ ಮೊಬಲಗು **ರೂ. 69,08,553.00/– (ರೂ. ಅರವತ್ತೊಂಬತ್ತು ಲಕ್ಷದ ಎಂಟು ಸಾವಿರದ ಐದು ನೂರ ಐವತ್ತ ಮೂರು ಮಾತ್ರ**)ಗಳನ್ನು ದಿನಾಂಕ 11–11–2021ರಿಂದ ಅನ್ವಯವಾಗುವ ಬಡ್ಡಿ ಮತ್ತು ಇತರೆ ವೆಚ್ಚಗಳು.

ಸ್ಥಿರಾಸ್ತಿ ಸ್ವತ್ತಿನ ವಿವರ: ಬೆಂಗಳೂರು, ಮಾರತ್ತಹಳ್ಳಿ, ಬಿಇಟಿಕ್ಯೂ, ವರ್ತೂರು ಹೋಬಳಿ, ಮುನ್ನೇಕೊಳಲು ಗ್ರಾಮ, ಶಿರಡಿ ಸಾಯಿ ಬಾಬಾ ನಗರ ಮುಖ್ಯರಸ್ತೆಯಲ್ಲಿರುವ ಸರ್ವೆ ನಂ. 56/2ರಲ್ಲಿರುವ ಸ್ಥಿರಾಸ್ತಿ ಸ್ವತ್ತು ಅಪಾರ್ಟ್‌ಮೆಂಟ್ "ಸರೋಜ್ ಹ್ಯಾಬಿಟಟ್" ಫ್ಲಾಟ್ ನಂ. 501, 5ನೇ ಮಹಡಿ, ಬಿಬಿಎಂಪಿ ಖಾತಾ ನಂ. 2394/56/2, ವಾರ್ಡ್ ನಂ. 149, ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಸ್ವತ್ತಾಗಿದ್ದು, ಅಳತೆ 1610 ಚದರ ಅಡಿಗಳು ಎಲ್ಲಾ ಮೂಲ ಭೂತ ಸೌಕರ್ಯಗಳನ್ನೊಳಗೊಂಡಿದ್ದು ಮತ್ತು ಒಂದು ಕವರ್ಡ್ ಕಾರ್ ಪಾರ್ಕಿಂಗ್‌ನೊಂದಿಗೆ ಹಾಗೂ ಇದಕ್ಕೆ ಚೆಕ್ಕುಬಂದಿ– ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ : 40 ಅಡಿಗಳ ರಸ್ತೆ, ಉತ್ತರಕ್ಕೆ : ಸರ್ವೆ ನಂ. 56ರ ಉಳಿದ ಭಾಗ, ದಕ್ಷಿಣಕ್ಕೆ : ಸರ್ವೆ ನಂ. 60ರ ಸ್ವತ್ತು.

II) **ಸಾಲಗಾರರ ಹೆಸರು ಮತ್ತು ವಿಳಾಸ**: 1. **ಶ್ರೀ ಬಾಲಕೃಷ್ಣ ಹೆಬ್ಬಾರ್ ಬಿ.ಎಸ್**. ಬಿನ್ ಲೇಟ್ ಸೀತಾರಾಮ ಹೆಬ್ಬಾರ್, ನೆಲಮಹಡಿ, ನಂ. 28, ಪೋಸ್ಟ್ ಆಫೀಸ್ ರಸ್ತೆ, 6ನೇ ಬ್ಲಾಕ್, ಸರ್ ಎಂ.ವಿ. ಲೇಔಟ್, ಉಳ್ಳಾಲ, ಬೆಂಗಳೂರು–560056.

2. **ಶ್ರೀ ಸನತ್ ಕುಮಾರ್** ಬಿನ್ ಬಾಲಕೃಷ್ಣ ಹೆಬ್ಬಾರ್, ನೆಲಮಹಡಿ, ನಂ. 28, ಪೋಸ್ಟ್ ಆಫೀಸ್ ರಸ್ತೆ, 6ನೇ ಬ್ಲಾಕ್, ಸರ್ ಎಂ.ವಿ. ಲೇಔಟ್, ಉಳ್ಳಾಲ, ಬೆಂಗಳೂರು–560056.

3. **ಶ್ರೀಮತಿ ಅಶ್ವಿನಿ ಕೆ**, ನೆಲಮಹಡಿ, ನಂ. 28, ಪೋಸ್ಟ್ ಆಫೀಸ್ ರಸ್ತೆ, 6ನೇ ಬ್ಲಾಕ್, ಸರ್ ಎಂ.ವಿ. ಲೇಔಟ್, ಉಳ್ಳಾಲ, ಬೆಂಗಳೂರು–560056.

ಡಿಮಾಂಡ್ ನೋಟೀಸ್ ನೀಡಿದ ದಿನಾಂಕ: 25–10–2021 **ಸ್ವಾಧೀನ ಸೂಚನೆ ದಿನಾಂಕ**: 14–01–2022

ಡಿಮಾಂಡ್ ನೋಟೀಸಿನ ಪ್ರಕಾರ ಒಟ್ಟು ಬಾಕಿ ಮೊಬಲಗು **ರೂ. 1,30,41,594.00/– (ರೂ. ಒಂದು ಕೋಟಿ ಮೂವತ್ತು ಲಕ್ಷದ ನಲವತ್ತೊಂದು ಸಾವಿರದ ಐದು ನೂರ ತೊಂಬತ್ತನಾಲ್ಕು ಮಾತ್ರ**)ಗಳನ್ನು ದಿನಾಂಕ 30–10–2021ರಿಂದ ಅನ್ವಯವಾಗುವ ಬಡ್ಡಿ ಮತ್ತು ಇತರೆ ವೆಚ್ಚಗಳು.

ಸ್ಥಿರಾಸ್ತಿ ಸ್ವತ್ತಿನ ವಿವರ: ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ನ್ಯಾನಪ್ಪನಹಳ್ಳಿ ಗ್ರಾಮದಲ್ಲಿರುವ ಸ್ಥಿರಾಸ್ತಿ ಸ್ವತ್ತು ಮನೆ ನಂ. 88, ಗ್ರಾಮಠಾಣ ಖಾತಾ ನಂ. 107ಹೆಚ್, ಬೊಮ್ಮನಹಳ್ಳಿ ಸಿಎಂಸಿ ಖಾತಾ ನಂ. 201/6/1/88, ಪರಿವರ್ತಿತ ಸರ್ವೆ ನಂ. 6/1, ಪ್ರಸ್ತುತ ಬಿಬಿಎಂಪಿ ಖಾತಾ ನಂ. 204/203/6/1/88 ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಸ್ವತ್ತಾಗಿದ್ದು, 29 ಚದರಗಳ ಎಸಿ ಶೀಟ್ ಛಾವಣಿಯುಳ್ಳ ಕಟ್ಟಡದ ಅಳತೆ ಪೂರ್ವ–ಪಶ್ಚಿಮ 40 ಅಡಿಗಳು ಮತ್ತು ಉತ್ತರ ದಕ್ಷಿಣ (69.0+76.0)/2, ಒಟ್ಟು ಅಳತೆ 2900 ಚದರ ಅಡಿಗಳ ಕಟ್ಟಡ ಸಹಿತವಾದ ಸ್ವತ್ತು ಎಲ್ಲಾ ಮೂಲ ಭೂತ ಸೌಕರ್ಯಗಳನ್ನೊಳಗೊಂಡಿದ್ದು ಹಾಗೂ ಇದಕ್ಕೆ ಚೆಕ್ಕುಬಂದಿ– ಪೂರ್ವಕ್ಕೆ : ಸ್ವತ್ತು ನಂ. 89, ಪಶ್ಚಿಮಕ್ಕೆ : ಸ್ವತ್ತು ನಂ. 87, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಖಾಸಗಿ ಸ್ವತ್ತು.

ಸ್ಥಳ: ಬೆಂಗಳೂರು
ದಿನಾಂಕ: 14–01–2022

ಸಹಿ/– ಅಧಿಕೃತ ಅಧಿಕಾರಿ
ಅಶೋಕನಗರ ಕೋ–ಆಪ್ ಬ್ಯಾಂಕ್ ಲಿ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 3985 6500, 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಡಿಸೆಂಬರ್ 31, 2021ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳಿಗೆ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸದಿರುವ ಆರ್ಥಿಕ ಪಲಿತಾಂಶಗಳ ವಿವರಣೆ

(ಐಎನ್‌ಆರ್ ದಶಲಕ್ಷಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಡಿಸೆಂಬರ್ 31, 2021ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2021ಕ್ಕೆ ಕೊನೆಗೊಂಡ 9 ತಿಂಗಳುಗಳಿಗೆ	ಡಿಸೆಂಬರ್ 31, 2020ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2021ಕ್ಕೆ ಕೊನೆಗೊಂಡ ತ್ರೈಮಾಸಿಕ	ಡಿಸೆಂಬರ್ 31, 2021ಕ್ಕೆ ಕೊನೆಗೊಂಡ 9 ತಿಂಗಳುಗಳಿಗೆ	ಡಿಸೆಂಬರ್ 31, 2020ಕ್ಕೆ ಕೊನೆಗೊಂಡ ತ್ರೈಮಾಸಿಕ
		ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	88,545	230,644	82,260	89,172	232,945	84,103
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	3,923	8,604	3,041	4,038	8,901	3,541
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	3,923	8,245	3,041	4,038	8,453	3,743
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	2,911	6,336	2,299	2,953	6,320	2,803
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ ಅವಧಿಯ [ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	2,993	6,418	2,299	3,033	6,390	2,812
6.	ಈಕ್ವಿಟಿ ಷೇರು ಬಂಡವಾಳ	1,453	1,453	1,453	1,453	1,453	1,453
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ						
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 2/–) [ಸೂಚನೆ (ಸಿ) ಅನ್ನು ನೋಡಿ]						
	1. ಮೂಲ :	4.01	8.72	3.16	4.22	9.12	4.05
	2. ದುರ್ಬಲೀಕೃತ :	4.01	8.72	3.16	4.22	9.12	4.05

ಸೂಚನೆಗಳು:

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಆವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಅಸಾಧಾರಣ ಮತ್ತು/ಅಥವಾ ಅಸಾಮಾನ್ಯ ಐಟಂಗಳನ್ನು, ಕಂಪನಿಗಳ (ಭಾರತೀಯ ಅಕೌಂಟಿಂಗ್ ಸ್ಟಾಂಡರ್ಡ್ಸ್) ನಿಯಮಗಳು, 2015 ಕಂಪನಿ ಕಾಯಿದೆ 2013 ಮತ್ತು ನೀತಿಗಳ ವಿಭಾಗ 133 ಅಡಿಯಲ್ಲಿ ಶಿಫಾರಸು ಅನುಗುಣವಾಗಿ ಲಾಭ ಹೇಳಿಕೆ ಮತ್ತು ನಷ್ಟದಲ್ಲಿ ಸರಿಹೊಂದಿಸಲ್ಪಡುತ್ತದೆ.

ಸಿ) ಫಲಿತಾಂಶಗಳ ಕ್ರೋಢೀಕೃತ ಸ್ಟೇಟ್‌ಮೆಂಟ್ ಅಡಿಯಲ್ಲಿ ಪ್ರಸ್ತುತಪಡಿಸಲಾದ ಎಲ್ಲಾ ಅವಧಿಗಳಲ್ಲಿ ಸರಾಸರಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳನ್ನು ಲೆಕ್ಕಾಚಾರ ಮಾಡುವಾಗ, ಕಂಪನಿಯು ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪೆನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ಯ ಮತ್ತು ಅವರ ಪರವಾಗಿ
ಸಹಿ/–
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಜನವರಿ 25, 2022

ಕೃಷಿ ಅನ್ವೇಷಕನಿಗೆ ಒಲಿದ ಪದ್ಮಶ್ರೀ

ಪ್ರಜಾವಾಣಿ ವಾರ್ತೆ

ಧಾರವಾಡ: ಸಾಂಪ್ರದಾಯಿಕ ಕೃಷಿಗೆ ಆಧುನಿಕ ಸ್ಪರ್ಶದ ಮೂಲಕ ಹೊಸ ಸಾಧ್ಯತೆಯನ್ನು ಹುಟ್ಟು ಹಾಕಿದವರು ಅಣ್ಣಿಗೇರಿಯ ಅಬ್ದುಲ್ ಖಾದರ್ ನಡಕಟ್ಟ.

ನಾಲ್ಕು ದಶಕಗಳ ಹಿಂದೆ ಆಧುನಿಕ ಕೂರಿಗೆ ಅವಿಷ್ಕಾರ ಮಾಡಿದ ಅಬ್ದುಲ್ ಖಾದರ್ ಅವರು 'ನಡಕಟ್ಟಿನ' ಎಂಬ ಹೆಸರಿನ ಮೂಲಕ ಉತ್ತರ ಕರ್ನಾಟಕದ ಮನೆಮಾತಾಗಿದ್ದಾರೆ.

ಪಿತ್ರಾರ್ಜಿತವಾಗಿ 60 ಎಕರೆ ಜಮೀನನ್ನು ಇವರಿಗೆ ಸಿಕ್ಕಿದ್ದರೂ, ತಮ್ಮ ಅನ್ವೇಷಣೆಗಾಗಿ 40 ಎಕರೆ ಜಮೀನನ್ನು ಕಳೆದುಕೊಂಡರು. ಸಾಕಷ್ಟು ಸಾಲ ಮಾಡಿಕೊಂಡಿದ್ದರೂ ಛಲ ಬಿಡದೆ ಆಧುನಿಕ ಕೂರಿಗೆಯನ್ನು ಇವರು ಸಿದ್ಧ ಪಡಿಸಿದರು. 2004ರಿಂದ ಸುಮಾರು 10ಸಾವಿರಕ್ಕೂ ಹೆಚ್ಚು ಕೂರಿಗೆಗಳನ್ನು ಇವರು ಸಿದ್ಧಪಡಿಸಿ ಮಾರಾಟ ಮಾಡಿದ್ದಾರೆ. ಕೂರಿಗೆಯೊಂದಿಗೆ ರೋಟೋವೆಟರ್, ಗೊಬ್ಬರ ಹಾಕುವ, ಬೀಜ ಬಿತ್ತುವ, ಎಡೆ ಹೊಡೆಯುವ ಯಂತ್ರ, ಔಷಧ ಸಿಂಪಡಿಸುವ ಯಂತ್ರವನ್ನು ಇವರು ಹೊಸ ಮಾದರಿಯಲ್ಲಿ ಅಭಿವೃದ್ಧಿಪಡಿಸಿದ್ದಾರೆ.

ತಮ್ಮ ವಿಶ್ವಶಾಂತಿ ಕೃಷಿ ಸಂಶೋಧನಾ ಕೇಂದ್ರದಲ್ಲಿ 150ಕ್ಕೂ ಹೆಚ್ಚು ಜನಕ್ಕೆ ಉದ್ಯೋಗ ಕಲ್ಪಿಸಿದ್ದಾರೆ. ತಮ್ಮ ಕೃಷಿ ಆವಿಷ್ಕಾರಕ್ಕೆ ಪೇಟೆಂಟ್ ಕೂಡಾ ಪಡೆದಿರುವ ಅಬ್ದುಲ್ ಖಾದರ್ ಅವರಿಗೆ ಕೃಷಿ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಕೃಷಿ ಅನ್ವೇಷಕ್ ಪ್ರಶಸ್ತಿಗಳೂ ಅವರಿಗೆ ಲಭಿಸಿವೆ.

ಗಮಕ ಕಲಾವಿದ ಎಚ್.ಆರ್.ಕೇಶವಮೂರ್ತಿ

ಶಿವಮೊಗ್ಗ: ಎಚ್.ಆರ್.ಕೇಶವಮೂರ್ತಿ ಅವರದು ಶಿವಮೊಗ್ಗ ಸಮೀಪದ ಮತ್ತೂರು ಹೊಸಹಳ್ಳಿ. ರಾಮಸ್ವಾಮಿ ಶಾಸ್ತ್ರಿ–ಅಕ್ಕಿಲಕ್ಷ್ಮೀದೇವಮ್ಮ ದಂಪತಿ ಪುತ್ರ, 1934ರಲ್ಲಿ ಜನಿಸಿದ್ದ ಅವರು ಬಾಲ್ಯದಿಂದಲೇ ಗಮಕ ಕಲೆ ಕರಗತ ಮಾಡಿಕೊಂಡಿದ್ದರು.

ತಂದೆ, ತಾಯಿ ರಾಗವಾಗಿ ಹಾಡುತ್ತಿದ್ದ ಪುರಾಣಗಳಿಂದ ಉತ್ತೇಜಿತರಾದ ಅವರು 16ನೇ ವಯಸ್ಸಿನಲ್ಲೇ ಗ್ರಾಮದ ವೆಂಕಟೇಶಯ್ಯ ಅವರ ಬಳಿ ಗಮಕ ವಾಚನ ಅಧ್ಯಯನ ಆರಂಭಿಸಿದ್ದರು. ರಾಮಾಯಣ, ಮಹಾಭಾರತ, ಕನ್ನಡ ಹಾಗೂ ಸಂಸ್ಕೃತದ ಕಾವ್ಯಗಳನ್ನು ಹಲವು ರಾಗಗಳಲ್ಲಿ ವಾಚನ ಮಾಡುವುದನ್ನು ರೂಢಿಸಿಕೊಂಡರು. 100ಕ್ಕೂ ಹೆಚ್ಚು ವಿಭಿನ್ನ ರಾಗಗಳಲ್ಲಿ ವಾಚನ ಮಾಡುವ ಮೂಲಕ 'ಶತರಾಗಿ' ಎಂಬ ಬಿರುದಿಗೂ ಪಾತ್ರರಾಗಿದ್ದಾರೆ.

ರಾಜ್ಯ, ದೇಶದ ಹಲವೆಡೆ ನಡೆದ ಕಾರ್ಯಕ್ರಮಗಳಲ್ಲಿ ಗಮಕ ವಾಚನದ ಮೂಲಕ ಗಮನ ಸೆಳೆದಿರುವ ಅವರ ಸಾಧನೆಗೆ 'ಕುಮಾರವ್ಯಾಸ ಪ್ರಶಸ್ತಿ', 'ರಾಜ್ಯೋತ್ಸವ' ಸೇರಿ ಹಲವು ಪ್ರಶಸ್ತಿಗಳು ಸಂದಿವೆ. ಪ್ರಸ್ತುತ ಹೊಸಳ್ಳಿಯಲ್ಲಿ ನೆಲೆಸಿದ್ದಾರೆ.

ಸಂಶೋಧಕ ಎಸ್.ಅಯ್ಯಪ್ಪನ್

ಬೆಂಗಳೂರು: ಕೃಷಿ ಕ್ಷೇತ್ರದಲ್ಲಿ ಸಂಶೋಧನೆಯಲ್ಲಿ ಸಕ್ರಿಯರಾಗಿದ್ದುಕೊಂಡೇ, ವಿವಿಧ ಸಂಸ್ಥೆಗಳನ್ನು ಕಟ್ಟಿಬೆಳೆಸಿದ ಎಸ್. ಅಯ್ಯಪ್ಪನ್ ಅವರು ಈ ಬಾರಿ ಪದ್ಮಶ್ರೀ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಈಗ ಅವರು ಇಂಫಾಲದ ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯದ (ಸಿಎಯು) ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅಯ್ಯಪ್ಪನ್ ಅವರು 1955 ಡಿಸೆಂಬರ್ 10ರಂದು ಯಳಂದೂರಿನ ಅಲಕೆರೆ ಗ್ರಾಮದಲ್ಲಿ ಜನಿಸಿದರು. ಮಂಗಳೂರಿನಲ್ಲಿ ಪದವಿ (ಬಿ.ಎಫ್.ಎಸ್‌ಸಿ–1975ರಲ್ಲಿ) ಹಾಗೂ ಸ್ನಾತಕೋತ್ತರ ಪದವಿ (ಎಂ.ಎಫ್.ಎಸ್‌ಸಿ–1977ರಲ್ಲಿ) ವ್ಯಾಸಂಗ ಮಾಡಿದ್ದ ಅವರು 1998ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಪೂರ್ಣಗೊಳಿಸಿದ್ದರು.

ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ ಆ್ಯಂಡ್ ಎಜುಕೇಶನ್‌ನ (ಡಿಎಆರ್‌ಇ) ಕಾರ್ಯದರ್ಶಿಯಾಗಿ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ (ಐಸಿಎಆರ್) ಪ್ರಧಾನ ನಿರ್ದೇಶಕರಾಗಿ, ರಾಷ್ಟ್ರೀಯ ಕೃಷಿ ವಿಜ್ಞಾನ ಅಕಾಡೆಮಿಯ ಅಧ್ಯಕ್ಷರಾಗಿ ಅವರು ಕರ್ತವ್ಯ ನಿರ್ವಹಿಸಿದ್ದರು.

ಕೃಷಿ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಅವರು ಸೇವೆ ಸಲ್ಲಿಸಿರುವ ಅವರು ಹಲವು ಸಮಿತಿಗಳ ಅಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ. ಅವರಿಗೆ ಹಲವು ಪುರಸ್ಕಾರಗಳೂ ಒಲಿದಿವೆ.

ಸಿದ್ಧಲಿಂಗಯ್ಯಗೆ ಮರಣೋತ್ತರ 'ಪದ್ಮಶ್ರೀ ಪ್ರಶಸ್ತಿ'

ಬೆಂಗಳೂರು: ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದ ಡಾ. ಸಿದ್ಧಲಿಂಗಯ್ಯ, 2021ರ ಜೂನ್ ತಿಂಗಳಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದರು. 'ಪದ್ಮಶ್ರೀ ಪ್ರಶಸ್ತಿ'ಯನ್ನು ಮರಣೋತ್ತರವಾಗಿ ಅವರಿಗೆ ಘೋಷಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಸಿದ್ದಲಿಂಗಯ್ಯ, ವಿಧಾನಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿದವರು. ಅವರ 'ಹೊಲೆ ಮಾದಿಗರ ಹಾಡು' ಕವನ ಸಂಕಲನವು ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಸ್ಥಾನಗಳಿಸಿರುವ ಕೃತಿಯಾಗಿದೆ. ಅವರ ಆತ್ಮಕಥೆ 'ಊರು ಕೇರಿ'ಯು ಎರಡು ಭಾಗದಲ್ಲಿ ಪ್ರಕಟಗೊಂಡಿದೆ. ಇಂಗ್ಲಿಷ್ ಹಾಗೂ ತಮಿಳು ಭಾಷೆಗೆ ಅನುವಾದಗೊಂಡಿದ್ದು, ಇಂಗ್ಲಿಷ್ ಅನುವಾದವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ.

'ಸಾವಿರಾರು ನದಿಗಳು', 'ಕಪ್ಪುಕಾಡಿನ ಹಾಡು', 'ಮೆರವಣಿಗೆ', 'ನನ್ನ ಜನಗಳು' ಮತ್ತು ಇತರ ಕವಿತೆಗಳು', 'ಆಯ್ದ ಕವನಗಳು', 'ಅಲ್ಲೆಕುಂತವರು' ಮುಂತಾದ ಕವನ ಸಂಕಲನಗಳು ಪ್ರಕಟಗೊಂಡಿವೆ.

'ಪಂಚಮ', 'ನೆಲಸಮ', 'ಏಕಲವ್ಯ' ಪ್ರಮುಖ ನಾಟಕಗಳಾಗಿವೆ. 'ರಸಘಳಿಗೆಗಳು', 'ಎಡಬಲ', 'ಹಕ್ಕಿನೋಟ', 'ಜನಸಂಸ್ಕೃತಿ', 'ಉರಿಕಂಡಾಯ' ಮುಂತಾದ ಲೇಖನ ಸಂಗ್ರಹಗಳು, 'ಸದನದಲ್ಲಿ ಸಿದ್ದಲಿಂಗಯ್ಯ ಭಾಗ 1 ಮತ್ತು 2' ಸೇರಿದಂತೆ ವಿವಿಧ ಕೃತಿಗಳು ಪ್ರಕಟಗೊಂಡಿವೆ. ಪುಟ್ಟಣ್ಣ ಕಣಗಾಲರು ನಿರ್ದೇಶಿಸಿದ 'ಧರಣಿಮಂಡಲ ಮಧ್ಯದೊಳಗೆ' ಚಿತ್ರಕ್ಕೆ ಬರೆದ ಗೀತೆಗೆ ರಾಜ್ಯಪ್ರಶಸ್ತಿ ಸಂದಿದೆ.

ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಸೇರಿದಂತೆ ಮುಂತಾದ ಗೌರವಗಳು ಅವರಿಗೆ ಸಂದಿವೆ.

ಕರಾವಳಿಯ ಭಗೀರಥ ಮಹಾಲಿಂಗ ನಾಯ್ಕ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಅಡ್ಯನಡ್ಕ ಸಮೀಪದ ಅಮೈ ಮಹಾಲಿಂಗ ನಾಯ್ಕ (76) ಅವರು ಈ ಭಾಗದಲ್ಲಿ 'ಕರಾವಳಿಯ ಭಗೀರಥ' ಎಂದೇ ಗುರುತಿಸಿಕೊಂಡವರು.

ಕೃಷಿ ಕೂಲಿ ಆಳಾಗಿ ದುಡಿಯುತ್ತಿದ್ದ ನಾಯ್ಕ ಅವರು, ಕೆಲವು ದಶಕಗಳ ಹಿಂದೆ, ಭೂಮಾಲೀಕ ಅಮೈ ಮಹಾಬಲ ಭಟ್ಟರಿಂದ ದೇಣಿಗೆಯ ರೂಪದಲ್ಲಿ ಎರಡು ಎಕರೆ ಭೂಮಿ ಪಡೆದಿದ್ದರು. ಅಲ್ಲಿ ಕೃಷಿ ನಡೆಸಬೇಕೆಂಬ ಬಯಕೆ ವಿಪರೀತ ಇದ್ದರೂ ನೀರಿನದ್ದೇ ಸಮಸ್ಯೆಯಾಗಿತ್ತು. ಅದಕ್ಕೆ ಅವರು ಕಂಡುಕೊಂಡ ದಾರಿ ಗುಡ್ಡಕ್ಕೆ ಸುರಂಗ ಕೊರೆಯುವುದು. ದಿನವಿಡೀ ಕೂಲಿ ಕೆಲಸ, ಸಂಜೆ ಮನೆಗೆ ಬಂದು ರಾತ್ರಿಯವರೆಗೂ ಏಕಾಂಗಿಯಾಗಿ ಸುರಂಗ ಕೊರೆಯುವ ಕಾಯಕ. ಮೊದಲ ಆರು ಸುರಂಗಗಳಲ್ಲಿ ನೀರು ಲಭಿಸಲಿಲ್ಲ, ಧೃತಿಗೆಡದೆ ಏಳನೇ ಸುರಂಗ ಕೊರೆದರು. ಅದರಲ್ಲಿ ನೀರು ಉಕ್ಕಿಬಂತು.

ಹೀಗೆ ಹರಿದುಬಂದ ನೀರಿಗೆ ಕಟ್ಟೆ ಕಟ್ಟಿ, ಆ ನೀರಿನಿಂದಲೇ ಈಗ 300ಕ್ಕೂ ಹೆಚ್ಚು ಅಡಿಕೆ ಗಿಡ, 75ರಷ್ಟು ತೆಂಗು ಹಾಗೂ ಇತರ ಅನೇಕ ಉಪ ಬೆಳೆಗಳನ್ನು ಬೆಳೆದು ಸ್ವಾವಲಂಬಿ ಕೃಷಿಕ ಎನಿಸಿಕೊಂಡಿದ್ದಾರೆ. ಈಗಾಗಲೇ ಹತ್ತಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ನಾಯ್ಕ ಅವರ ಮುಡಿಗೆ ಈಗ ಪದ್ಮ ಪ್ರಶಸ್ತಿಯ ಗರಿ ಏರಿದೆ.

'ಕಾಂಗ್ರೆಸ್‌ನ ಹಲವರು ಬಿಜೆಪಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಪಕ್ಷದಿಂದ ಯಾರೂ ಕಾಂಗ್ರೆಸ್‌ಗೆ ಹೋಗುವುದಿಲ್ಲ. ಕಾಂಗ್ರೆಸ್‌ನಿಂದಲೇ ಕೆಲವರು ನಮ್ಮ ಪಕ್ಷಕ್ಕೆ ಬರಲು ಸಿದ್ಧರಾಗಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.


ನಳಿನ್ ಕುಮಾರ್

ಬಿಬಿಎಂಪಿ ಚುನಾವಣೆಯ ಪೂರ್ವಭಾವಿ ತಯಾರಿ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆ ಮಂಗಳವಾರ ಚರ್ಚೆ ನಡೆಸಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಸಂಪುಟ ವಿಸ್ತರಣೆಯಾಗದೇ ಇದ್ದರೆ ಕೆಲಸ ಸಚಿವರು, ಶಾಸಕರು ಕಾಂಗ್ರೆಸ್‌ಗೆ ಹೋಗಲಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದರು. ಕಾಂಗ್ರೆಸ್‌ಗೆ ಕೆಲವರು ಬರಲಿರುವುದು ಹೌದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದರು.

ಈ ಮಾತುಗಳಿಗೆ ಪ್ರತಿಕ್ರಿಯಿಸಿದ ನಳಿನ್, 'ಇಡಿ ದೇಶದಲ್ಲೇ ಕಾಂಗ್ರೆಸ್ ಪಕ್ಷಕ್ಕೆ ಭವಿಷ್ಯವಿಲ್ಲ. ಅಧಿಕಾರಕ್ಕೆ ಬರುವ ಹಗಲುಗನಸು ಕಾಣುತ್ತಿದ್ದಾರೆ. ಹೀಗಾಗಿ ಜನರ ಗಮನ ಬೇರೆಡೆ ಸೆಳೆಯಲು ಕುತಂತ್ರ ರಾಜಕಾರಣಕ್ಕೆ ಕೈಹಾಕಿದ್ದಾರೆ. ಪಕ್ಷಕ್ಕೆ ವಲಸೆ ಬಂದವರು ಸೇರಿ ಯಾವುದೇ ಶಾಸಕರು ಕಾಂಗ್ರೆಸ್‌ಗೆ ಹೋಗುವುದಿಲ್ಲ' ಎಂದರು.

ವಿಸ್ತರಣೆ ವರಿಷ್ಠರಿಗೆ ಬಿಟ್ಟಿದ್ದು: 'ಸಚಿವ ಸಂಪುಟ ವಿಸ್ತರಣೆಯ ವಿಷಯ ವರಿಷ್ಠರಿಗೆ ಬಿಟ್ಟಿದ್ದು. ಯಾವಾಗ ಮಾಡಬೇಕು ಎಂಬುದನ್ನು ಪಕ್ಷದ ವರಿಷ್ಠರೇ ತೀರ್ಮಾನಿಸುತ್ತಾರೆ. ವಿಸ್ತರಣೆ ಮಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಜತೆಗೂ ವರಿಷ್ಠರು ಚರ್ಚಿಸುತ್ತಾರೆ. ನಿಗಮ–ಮಂಡಳಿಗಳಿಗೆ ನೇಮಕಕ್ಕೆ ಪಟ್ಟಿ ಮಾಡಿದ್ದೇವೆ. ಅದನ್ನು ಒಂದು ವಾರದೊಳಗೆ ಮುಖ್ಯಮಂತ್ರಿಯವರಿಗೆ ನೀಡುತ್ತೇವೆ' ಎಂದರು.

ರಾಜ್ಯದಲ್ಲಿ ನಾಯಕತ್ವದ ಬದಲಾವಣೆ ಇಲ್ಲ. ಬೊಮ್ಮಾಯಿ ಅವರು ಅವಧಿಯನ್ನು ಪೂರ್ಣಗೊಳಿಸಲಿದ್ದಾರೆ. ಪಕ್ಷದ ಅಧ್ಯಕ್ಷ ಸ್ಥಾನದ ಅವಧಿ ಮೂರು ವರ್ಷಗಳು, ಅದು ಮುಗಿದ ತಕ್ಷಣ ಚುನಾವಣೆ ಮೂಲಕ ಹೊಸ ಅಧ್ಯಕ್ಷರ ನೇಮಕ ಮಾಡುವುದು ಪಕ್ಷದ ನಿಯಮ. ಅಲ್ಲಿಯವರೆಗೆ ಯಾವುದೇ ಬದಲಾವಣೆ ಇಲ್ಲ ಎಂದೂ ನಳಿನ್ ಸ್ಪಷ್ಟಪಡಿಸಿದರು.

ಬೂತ್ ಸಮಿತಿ ಗಟ್ಟಿ: ಮತಗಟ್ಟೆ ಹಂತದಲ್ಲಿ ಪಕ್ಷ ಬಲಪಡಿಸುವ ಕೆಲಸ ನಡೆದಿದ್ದು, ಅದು ಗಟ್ಟಿಯಾಗಿದೆ. ಇವತ್ತಿನಿಂದಲೇ ಬಿಬಿಎಂಪಿ ಚುನಾವಣೆಯನ್ನು ಎದುರಿಸಲು ಪಕ್ಷ ಸಜ್ಜಾಗಿದೆ. ಮುಖ್ಯಮಂತ್ರಿಯವರು ಮತ್ತು ಜನಪ್ರತಿನಿಧಿಗಳ ಜತೆ ಹಲವು ಸುತ್ತಿನ ಮಾತುಕತೆ ನಡೆದಿದೆ ಎಂದು ನಳಿನ್ ಕುಮಾರ್ ತಿಳಿಸಿದರು.

ಬಿಬಿಎಂಪಿ ಅಲ್ಲದೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಎದುರಿಸಲೂ ಸಿದ್ಧತೆ ನಡೆದಿದೆ. ವಿಸ್ತಾರಕ್ ಯೋಜನೆ ಮೂಲಕ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡುವ ಕಾರ್ಯಕ್ಕೂ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಕಾಂಗ್ರೆಸ್ ನಾಯಕರಿಗೆ ಅಭದ್ರತೆ: ಮುಖ್ಯಮಂತ್ರಿ ಬೊಮ್ಮಾಯಿ

'ಕಾಂಗ್ರೆಸ್ ನಾಯಕರಿಗೆ ಅಭದ್ರತೆ ಕಾಡುತ್ತಿದೆ ಎನ್ನುವುದು ಅವರಿಬ್ಬರ ಹೇಳಿಕೆಗಳಿಗಿಂತ ಗೊತ್ತಾಗುತ್ತಿದೆ. ಅದರ ಪರಿಣಾಮ ಇಬ್ಬರೂ ಹೇಳಿಕೆಗಳನ್ನು ಕೊಡುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಸಚಿವರು, ಶಾಸಕರು ಕಾಂಗ್ರೆಸ್‌ಗೆ ಬರಲಿದ್ದಾರೆ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ,ಬಿ ಜೆಪಿಯಿಂದ ಯಾರೂ ಹೋಗುವ ಪ್ರಶ್ನೆಯೇ ಇಲ್ಲ' ಎಂದರು.

'ರಾಜಕೀಯ ಬೆಳವಣಿಗೆಗಳ ಬಗ್ಗೆ ವ್ಯಾಖ್ಯಾನಗಳನ್ನು ನಾನು ಈಗ ಮಾಡುವುದಿಲ್ಲ. ಆದರೆ, ಕೆಲವೇ ದಿನ ಕಾಯಿರಿ. ಬಿಜೆಪಿ ಪರವಾಗಿ ಯಾವ ರೀತಿ ಬಲವರ್ಧನೆ ಆಗುತ್ತದೆ ಎಂದು ನೀವೇ ನೋಡಿ' ಎಂದರು.

'ಶಿಸ್ತು ಉಲ್ಲಂಘಿಸಿದರೆ ಕ್ರಮ'

ಪಕ್ಷದಲ್ಲಿ ಎಲ್ಲರೂ ಶಿಸ್ತು ಪಾಲಿಸಬೇಕು. ಮುಖ್ಯಮಂತ್ರಿ, ಪಕ್ಷದ ಅಧ್ಯಕ್ಷರು, ಜನಪ್ರತಿನಿಧಿಗಳು ಎಲ್ಲರಿಗೂ ಒಂದೇ ಶಿಸ್ತು. ಯಾರೇ ಆದರೂ ಶಿಸ್ತು ಉಲ್ಲಂಘಿಸಿದರೆ ಸಹಿಸಲು ಸಾಧ್ಯವಿಲ್ಲ ಎಂದು ನಳಿನ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

'ಯಾವುದೇ ಶಾಸಕರು ಸರ್ಕಾರ ಮತ್ತು ಸಂಪುಟ ವಿಸ್ತರಣೆ ಬಗ್ಗೆ ಬಹಿರಂಗ ಹೇಳಿಕೆಗಳನ್ನು ನೀಡಬಾರದು. ಏನೇ ಹೇಳುವುದಿದ್ದರೂ ಪಕ್ಷದ ವೇದಿಕೆಯಲ್ಲೇ ಚರ್ಚಿಸಬೇಕು. ಬಹಿರಂಗ ಹೇಳಿಕೆ ಕೊಡುವವರನ್ನು ಕರೆಸಿ ಮಾತನಾಡುತ್ತೇನೆ. ಅದಕ್ಕೂ ಬಾಗದಿದ್ದರೆ ನೋಟಿಸ್ ನೀಡಿ ರಾಷ್ಟ್ರೀಯ ಶಿಸ್ತು ಸಮಿತಿಯ ಗಮನಕ್ಕೆ ತರಬೇಕಾಗುತ್ತದೆ. ಕೆಲವು ಶಾಸಕರಿಗೆ ಈಗಾಗಲೇ ಸ್ಪಷ್ಟೀಕರಣ ಕೇಳಿದ್ದು ಅವರು ಸ್ಪಷ್ಟೀಕರಣ ಕೊಟ್ಟಿದ್ದಾರೆ' ಎಂದು ಅವರು ಹೇಳಿದರು.

ಉಸ್ತುವಾರಿ ಬದಲು: ಸಚಿವರ ಬೇಸರ

ಒಂದನೇ ಪುಟದಿಂದ

'ಬೇರೆ ಜಿಲ್ಲೆ ಉಸ್ತುವಾರಿ ನೀಡುವುದಾಗಿ ಮುಖ್ಯಮಂತ್ರಿಯವರು ಹೇಳಿದ್ದರು. ಬೇರೆ ಜಿಲ್ಲೆಗೆ ಹೋಗಿ ಸಂಘಟನೆ ಮಾಡುವಷ್ಟು ಸಾಮರ್ಥ್ಯ ಇಲ್ಲ ಎಂಬುದನ್ನು ಹೇಳಿದ್ದೆ. ಹಾಗಾಗಿ ನೀಡದೇ ಇರಬಹುದು. ತೀರ್ಮಾನ ಅಚ್ಚರಿ ಉಂಟು ಮಾಡಿಲ್ಲ' ಎಂದು ಅವರು ತಿಳಿಸಿದರು.

ವಿಜಯನಗರ ಜಿಲ್ಲೆ ಉಸ್ತುವಾರಿ ಕೈತಪ್ಪಿರುವುದರಿಂದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಬೇಸರಿಸಿಕೊಂಡಿದ್ದಾರೆ. 'ವಿಜಯನಗರ ಜಿಲ್ಲೆ ಮಾಡಲೆಂದೇ ಹೋರಾಟ ಮಾಡಿದ್ದೆ. ಈಗ ಜಿಲ್ಲೆಯ ಉಸ್ತುವಾರಿ ನೀಡದೇ ಇರುವುದು ನೋವಿನ ಸಂಗತಿ' ಎಂದು ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ಇದೇ ವೇಳೆ ವಿಜಯನಗರ ಉಸ್ತುವಾರಿ ಹೊತ್ತಿರುವ ಆಹಾರ ಸಚಿವ ಉಮೇಶ ಕತ್ತಿ, 'ವಿಜಯನಗರ ಜಿಲ್ಲೆ ಉಸ್ತುವಾರಿ ನೀಡಿರುವ ಬಗ್ಗೆ ಬೇಸರವಿಲ್ಲ. ಅದೇನೂ ಪಾಕಿಸ್ತಾನದಲ್ಲಿ ಇಲ್ಲವಲ್ಲ. ಎಲ್ಲಿದ್ರೂ ಕೆಲಸ ಮಾಡ್ತೇವೆ ಬಿಡ್ರಿ' ಎಂದು ಪ್ರತಿಕ್ರಿಯಿಸಿದ್ದಾರೆ.

ಗ್ರಾಮಾಂತರವೇ ಇರಬೇಕಿತ್ತು: 'ಬೆಂಗಳೂರು ಗ್ರಾಮಾಂತರ ಜಿಲ್ಲೆ ಉಸ್ತುವಾರಿ ಕೊಟ್ಟಿದ್ದರೆ ಒಳ್ಳೆಯದಿತ್ತು. ಮುಂದಿನ ಚುನಾವಣೆಗೆ ಹೊಸಕೋಟೆಯಿಂದಲೇ ಸ್ಪರ್ಧಿಸುತ್ತೇನೆ. ಹೀಗಾಗಿ ಗ್ರಾಮಾಂತರ ಉಸ್ತುವಾರಿ ಕೇಳಿದ್ದೆ. ಪಕ್ಷದ ಹಿತ ದೃಷ್ಟಿಯಿಂದ ಬದಲಾವಣೆ ಮಾಡಿದ್ದಾರೆ. ಒಪ್ಪಿಕೊಂಡಿದ್ದೇನೆ' ಎಂದು ಸಚಿವ ಎಂ.ಟಿ.ಬಿ.ನಾಗರಾಜು ನೋವು ತೋಡಿಕೊಂಡಿದ್ದಾರೆ.

'ಚಿಕ್ಕಬಳ್ಳಾಪುರ ಉಸ್ತುವಾರಿ ಕೊಟ್ಟಿದ್ದಾರೆ. ಒಪ್ಪಿಕೊಂಡಿದ್ದೇನೆ. ಬದಲಾವಣೆ ಮಾಡುತ್ತಾರೆ ಎಂಬ ನಿರೀಕ್ಷೆ ಇರಲಿಲ್ಲ' ಎಂದೂ ಹೇಳಿದ್ದಾರೆ.

ನನ್ನ ಮೇಲೆ ಪಕ್ಷಕ್ಕೆ ವಿಶ್ವಾಸ: 'ಮುಖ್ಯಮಂತ್ರಿ ಮತ್ತು ಪಕ್ಷದ ವರಿಷ್ಠರು ನನ್ನ ಮೇಲೆ ವಿಶ್ವಾಸ ಇಟ್ಟು ಹಾಸನದ ಜತೆಗೆ ಮಂಡ್ಯ ಜಿಲ್ಲೆಯ ಉಸ್ತುವಾರಿ ನೀಡಿದ್ದಾರೆ. ಕಳೆದ ಒಂದೂ ಮುಕ್ಕಾಲು ವರ್ಷ ಹಾಸನ ಉಸ್ತುವಾರಿ ಸಚಿವನಾಗಿ ಕೆಲಸ ಮಾಡಿದ್ದೇನೆ. ನನ್ನ ಕೆಲಸವನ್ನು ಪಕ್ಷ ಗಮನಿಸಿದೆ. ಮಂಡ್ಯದಲ್ಲೂ ಉಸ್ತುವಾರಿಯನ್ನು ಚೆನ್ನಾಗಿ ನಿಭಾಯಿಸುತ್ತೇನೆ' ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಪ್ರತಿಕ್ರಿಯಿಸಿದ್ದಾರೆ.

ಪಲ್ಲಕ್ಕಿ ಹೊರುವುದಷ್ಟೇ ಕೆಲಸ: ಈಶ್ವರಪ್ಪ

ಜಿಲ್ಲಾ ಉಸ್ತುವಾರಿ ಬದಲಾವಣೆ ಬಗ್ಗೆ ಅನಗತ್ಯ ಚರ್ಚೆಗಳು ನಡೆಯುತ್ತಿವೆ. ದೇವರ ಪಲ್ಲಕ್ಕಿ ಹೊರುವವನಿಗೆ ಎಡಗಡೆ ಆದರೆ ಏನು, ಬಲಗಡೆ ಆದರೇನು. ದೇವರ ಕೆಲಸ ಅಂದರೆ ರಾಜ್ಯದ ಆಡಳಿತ ಅಷ್ಟೇ. ಜನರಿಗಾಗಿ ಸೇವೆ ಮಾಡುವವರಿಗೆ ಈ ಜಿಲ್ಲೆ ಆ ಜಿಲ್ಲೆ ಎಂಬ ಪ್ರಶ್ನೆ ಬರುವುದಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಕೆ.ಎಸ್.ಈಶ್ವರಪ್ಪ ಹೇಳಿದ್ದಾರೆ.

ಮೂಟೆ ಹೊರುವವರಿಗೆ ಎಲ್ಲಾದರೂ ಒಂದೇ: ಸಚಿವ ಸೋಮಣ್ಣ

'ವರಿಷ್ಠರು ಏನೋ ಚಿಂತನೆ ಮಾಡಿ ಉಸ್ತುವಾರಿ ಜವಾಬ್ದಾರಿ ನೀಡಿದ್ದಾರೆ. ಮೂಟೆ ಹೊರುವವರಿಗೆ ಎಲ್ಲಾದರೂ ಒಂದೇ. ನಾವೆಲ್ಲ ಹಿರಿಯ ಸಚಿವರಿದ್ದರೂ ಮುಖ್ಯಮಂತ್ರಿ ಬೊಮ್ಮಾಯಿ ನಮ್ಮಷ್ಟೇ ಹಿರಿಯರಿದ್ದಾರೆ, ಬುದ್ಧಿವಂತರಿದ್ದಾರೆ' ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

'ನಾನು ಬೆಂಗಳೂರು ಉಸ್ತುವಾರಿ ಕೇಳಿದ್ದೆ. ಅದನ್ನು ಮುಖ್ಯಮಂತ್ರಿ ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ. ಅದು ಅವರ ಬಳಿಯೇ ಇರುವುದು ಸೂಕ್ತ. ಉಸ್ತುವಾರಿ ಹಂಚಿಕೆ ಬಗ್ಗೆ ಯಾವ ಅಸಮಾಧಾನವೂ ಇಲ್ಲ. ರಾಷ್ಟ್ರೀಯ ನಾಯಕರು ಹೇಳಿದಂತೆ ಮುಖ್ಯಮಂತ್ರಿ ನಿರ್ಧಾರ ತೆಗೆದುಕೊಂಡಿದ್ದಾರೆ' ಎಂದರು.

ಕೆಪಿಸಿಸಿ ಪ್ರಚಾರ ಸಮಿತಿ ಎಂ.ಬಿ. ಪಾಟೀಲ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಪ್ರಚಾರ ಸಮಿತಿ ಅಧ್ಯಕ್ಷರಾಗಿ ಶಾಸಕ ಎಂ.ಬಿ. ಪಾಟೀಲ ಅವರನ್ನು ನೇಮಿಸಲಾಗಿದೆ. ರಾಜ್ಯ ವಿಧಾನಸಭಾ ಚುನಾವಣೆಗೆ ಒಂದು ವರ್ಷ ಮೂರು ತಿಂಗಳು ಬಾಕಿ ಇರುವಂತೆ ಕಾಂಗ್ರೆಸ್ ಹೈಕಮಾಂಡ್ ಈ ನಿರ್ಧಾರ ತೆಗೆದುಕೊಂಡಿದೆ.

ಎಂ.ಬಿ. ಪಾಟೀಲ ಅವರನ್ನು ಪ್ರಚಾರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಬೇಕೆಂಬ ಪ್ರಸ್ತಾವವನ್ನು ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅಂಗೀಕರಿಸಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ವಿಜಯಪುರದ ಬಬಲೇಶ್ವರ ಕ್ಷೇತ್ರದಿಂದ 2008, 2013, 2018ರಲ್ಲಿ ಸತತ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಎಂ.ಬಿ ಪಾಟೀಲ ಅವರು ಈ ಹಿಂದೆ ಸಿದ್ದರಾಮಯ್ಯ ಸಚಿವ ಸಂಪುಟದಲ್ಲಿ ಜಲಸಂಪನ್ಮೂಲ ಸಚಿವರಾಗಿ ಕೆಲಸ ಮಾಡಿದ್ದರು. ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಗೃಹ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.


ಎಂ.ಬಿ. ಪಾಟೀಲ

ಎಂ.ಬಿ ಪಾಟೀಲ ಲಿಂಗಾಯತ ಸಮುದಾಯದವರು. ಕೆಪಿಸಿಸಿ ಅಧ್ಯಕ್ಷರಾಗಿ ಒಕ್ಕಲಿಗ ಸಮುದಾಯದ ಡಿ.ಕೆ. ಶಿವಕುಮಾರ್ ಇದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಈಶ್ವರ್ ಖಂಡ್ರೆ, ಸತೀಶ ಜಾರಕಿಹೊಳಿ, ಸಲೀಂ ಅಹ್ಮದ್, ರಾಮಲಿಂಗಾ ರೆಡ್ಡಿ, ಆರ್. ಧ್ರುವನಾರಾಯಣ ಇದ್ದಾರೆ. ಮುಂದಿನ ಚುನಾವಣೆಯಲ್ಲಿ ಮತ ಬ್ಯಾಂಕ್, ಜಾತಿ ಲೆಕ್ಕಾಚಾರದ ಮೇಲೆ ಕಣ್ಣಿಟ್ಟು ಎಂ.ಬಿ ಪಾಟೀಲ ಅವರಿಗೆ ಪ್ರಚಾರ ಸಮಿತಿ ನೇತೃತ್ವವನ್ನು ಕಾಂಗ್ರೆಸ್ ನೀಡಿದೆ ಎಂದು ಹೇಳಲಾಗುತ್ತಿದೆ.

'ಅಧಿಕಾರಕ್ಕೆ ತರಲು ಯತ್ನಿಸುವೆ': ವಿಜಯಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 150 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಗುರಿ ಇದ್ದು, ಒಂದು ತಂಡವಾಗಿ ಸಂಘಟಿತ ಹೋರಾಟ ನಡೆಸುವ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರಲು ಪ್ರಯತ್ನಿಸಲಾಗುವುದು' ಎಂದು ಹೇಳಿದರು.

ಗಣರಾಜ್ಯೋತ್ಸವ: ಇಂದು ಸಂಜೆ ವೈವಿಧ್ಯಮಯ 'ನೃತ್ಯ ಭಾರತಿ'

ಬೆಂಗಳೂರು: ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷದ ಗಣರಾಜ್ಯೋತ್ಸವ ಪ್ರಯುಕ್ತ ಬುಧವಾರ ಸಂಜೆ ನಾಡಿನಾದ್ಯಂತದ ಪ್ರಮುಖ ನೃತ್ಯ ಗುರುಗಳು ಸೇರಿ 'ನೃತ್ಯ ಭಾರತಿ' ಎಂಬ ವೈವಿಧ್ಯಮಯ ನೃತ್ಯಗಳ ಕಾರ್ಯಕ್ರಮವನ್ನು ಅರ್ಪಿಸಲಿದ್ದಾರೆ.

ರಂಗಕರ್ಮಿ, ಸಂಘಟಕ ಶ್ರೀನಿವಾಸ ಜಿ.ಕಪ್ಪಣ್ಣ ಅವರ ಸಂಘಟಿಸಿರುವ, ಸಹನಾ ಬೆಳೂರಕರ್ ನಿರೂಪಣೆಯ ಈ ಕಾರ್ಯಕ್ರಮವು ಸಂಜೆ 6.30ರಿಂದ ಪ್ರಜಾವಾಣಿಯ ಫೇಸ್‌ಬುಕ್ ಪುಟದಲ್ಲಿ (fb.com/prajavani.net) ಪ್ರೀಮಿಯರ್ ಪ್ರದರ್ಶನವಾಗಲಿದೆ.



ಮೈಸೂರಿನ ಕೃಪಾ ಫಡ್ಕೆ ತಂಡದವರಿಂದ ಭರತ ನಾಟ್ಯದ 'ಪುಷ್ಪಾಂಜಲಿ' ಹಾಗೂ ಅಮೆರಿಕಾದ ಲೂಯಿವಿಲೆಯ ಅಖಿಲಾ ಅಯ್ಯರ್ ತಂಡವು ತಮಿಳುನಾಡಿನ ಕುಂಭಕೋಣಂ ಕೋಲಾಟಂ ಪ್ರದರ್ಶಿಸಲಿದೆ. ಬೆಂಗಳೂರಿನ ಶುಭಾ ಧನಂಜಯ ತಂಡದಿಂದ ಕಥಕ್, ಕಲಬುರಗಿಯ ಶುಭಾಂಗಿ ಸುಧೀಂದ್ರ ತಂಡದಿಂದ ಮಹಾರಾಷ್ಟ್ರದ ಗೊಂದಾಲ್ ನೃತ್ಯ, ಬೆಂಗಳೂರಿನ ವೀಣಾಮೂರ್ತಿ ವಿಜಯ್ ತಂಡದಿಂದ ಕೂಚಿಪುಡಿ ನೃತ್ಯ, ಬೆಂಗಳೂರಿನ ಸ್ನೇಹಾ ಕಪ್ಪಣ್ಣ ಅವರ ಭ್ರಮರಿ ನೃತ್ಯ ರೆಪರ್ಟರಿ ವತಿಯಿಂದ ಪಟದ ಕುಣಿತ, ತುಮಕೂರಿನ ಬಾಲಾ ವಿಶ್ವನಾಥ್ ತಂಡದಿಂದ ಭರತನಾಟ್ಯಕ್ಕೆ ವಚನವನ್ನು ಅಳವಡಿಸಿದ 'ವಚನಾಂಜಲಿ', ಬೆಂಗಳೂರಿನ ವೀಣಾ ಭಟ್ ತಂಡದಿಂದ ಅಸ್ಸಾಂನ ಬಿಹು ನೃತ್ಯ, ರಾಧಿಕಾ ಮಕರಂ ಅವರ ತಂಡದಿಂದ ಒಡಿಸ್ಸೀ ನೃತ್ಯ, ಶಿವಮೊಗ್ಗದ ಸಹನಾ ಚೇತನ್ ತಂಡದಿಂದ 'ಶಿವ ಸುಂದರ ಭಾರತದ ಪುಣ್ಯ ನೆಲ' ನೃತ್ಯ ಹಾಗೂ ಬೆಂಗಳೂರಿನ ಲಿಂಗಣ್ಣ ಅವರ ನೇತೃತ್ವದ ಕರ್ನಾಟಕ ಜಾನಪದ ಬೀಸು ಕಂಸಾಳೆ ಸಂಘದಿಂದ ಬೀಸು ಕಂಸಾಳೆ ನೃತ್ಯವು ಪ್ರದರ್ಶನಗೊಳ್ಳಲಿವೆ.

ರಾಜ್ಯದ ಐವರಿಗೆ 'ಪದ್ಮಶ್ರೀ' ಪ್ರಶಸ್ತಿ

ಒಂದನೇ ಪುಟದಿಂದ

ಇತ್ತೀಚೆಗಷ್ಟೇ ಸೇನಾ ಹೆಲಿಕಾಪ್ಟರ್ ಅಪಘಾತದಲ್ಲಿ ಹುತಾತ್ಮರಾದ ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಹಾಗೂ ಉತ್ತರ ಪ್ರದೇಶದ ಗೋರಖ್‌ಪುರದ ರಾಧೇಶ್ಯಾಮ್ ಖೆಮ್ಕಾ ಅವರನ್ನು 'ಪದ್ಮವಿಭೂಷಣ' (ಮರಣೋತ್ತರ)ಕ್ಕೆ ಆಯ್ಕೆ ಮಾಡಲಾಗಿದೆ. ಕಾಂಗ್ರೆಸ್ ಮುಖಂಡ, ಜಮ್ಮು ಮತ್ತು ಕಾಶ್ಮೀರದ ಗುಲಾಂ ನಬಿ ಆಜಾದ್, ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ, ಕಮ್ಯೂನಿಸ್ಟ್ ನಾಯಕ ಬುದ್ಧದೇವ ಭಟ್ಟಾಚಾರ್ಯ ಅವರಿಗೆ 'ಪದ್ಮಭೂಷಣ' ದೊರೆತಿದೆ. ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದ ಐತಿಹಾಸಿಕ ಸಾಧನೆ ಮಾಡಿದ್ದ ನೀರಜ್ ಚೋಪ್ರಾ ಅವರು 'ಪದ್ಮಶ್ರೀ' ಪುರಸ್ಕೃತರಾಗಿದ್ದಾರೆ. ಪ್ರಶಸ್ತಿಗೆ ಆಯ್ಕೆ ಆದವರಲ್ಲಿ 34 ಜನ ಮಹಿಳೆಯರಿದ್ದರೆ, ವಿದೇಶ ಮೂಲ ಹಾಗೂ ಭಾರತ ಮೂಲದ 10 ಮಂದಿ ಅನಿವಾಸಿಗಳಿದ್ದಾರೆ. ಗೂಗಲ್ ಮುಖ್ಯಸ್ಥ ಸುಂದರ್ ಪಿಚ್ಚೈ, ಮೈಕ್ರೋಸಾಫ್ಟ್ ಕಂಪೆನಿಯ ಸಿಇಒ ಸತ್ಯನಾರಾಯಣ ನಾದೆಲ್ಲಾ ಅವರು 'ಪದ್ಮಭೂಷಣ' ಗೌರವ ಪಡೆದ ಪ್ರಮುಖ ಅನಿವಾಸಿ ಭಾರತೀಯರು. ಕನ್ನಡದ ಜನಪ್ರಿಯ ಚಲನಚಿತ್ರಗಳ ಗೀತೆಗಳಿಗೆ ಕಂಠ ಒದಗಿಸಿರುವ ಬಾಲಿವುಡ್ ಗಾಯಕ ಸೋನು ನಿಗಮ್ 'ಪದ್ಮಶ್ರೀ' ಒಲಿದವರಲ್ಲಿ ಪ್ರಮುಖರಾಗಿದ್ದಾರೆ. ವಿಧಾನಸಭೆ ಚುನಾವಣೆಗೆ ಅಣಿಯಾಗಿರುವ ಉತ್ತರ ಪ್ರದೇಶದ 13, ಉತ್ತರಾಖಂಡದ ನಾಲ್ವರು, ಪಂಜಾಬ್‌ನ ನಾಲ್ವರು, ಮಣಿಪುರದ ಮೂವರು ಹಾಗೂ ಗೋವಾದ ಇಬ್ಬರನ್ನು ಪ್ರಶಸ್ತಿಗೆ ಪರಿಗಣಿಸಿರುವುದು ವಿಶೇಷ. ರಾಷ್ಟ್ರಪತಿ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ.

'ಪ್ರಶಸ್ತಿ ತಿರಸ್ಕರಿಸುತ್ತೇನೆ': 'ಪದ್ಮ ಭೂಷಣ ಪ್ರಶಸ್ತಿಗೆ ಆಯ್ಕೆ ಮಾಡಿದ್ದರೆ, ಅದನ್ನು ನಾನು ತಿರಸ್ಕರಿಸುತ್ತೇನೆ' ಎಂದು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಅವರು ಹೇಳಿದ್ದಾರೆ.

ಪದ್ಮ ಪ್ರಶಸ್ತಿಗೆ ತಮ್ಮನ್ನು ಆಯ್ಕೆ ಮಾಡಲಾಗಿದೆ ಎಂಬ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದು ಹೇಳಿದ್ದಾರೆ.

ಲಿಂಗ ಸಮಾನತೆಯಿಂದ ಸೇನೆಯು ಇನ್ನಷ್ಟು ಬಲವಾಗಲಿದೆ: ಕೋವಿಂದ್

ನವದೆಹಲಿ (ಪಿಟಿಐ): 'ನಮ್ಮ ಹೆಣ್ಣುಮಕ್ಕಳು ಗಾಜಿನ ಮನೆಯಿಂದ ಹೊರ ಬಂದಿದ್ದಾರೆ. ಸೇನೆಗೆ ಮಹಿಳಾ ಅಧಿಕಾರಿಗಳು ಸೇರಿದ್ದಾರೆ. ಲಿಂಗ ಸಮಾನತೆಯಿಂದ ಸೇನೆಯು ಇನ್ನಷ್ಟು ಬಲವಾಗಲಿದೆ. ಸೈನಿಕ ಶಾಲೆ, ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ಪ್ರತಿಭಾನ್ವಿತರು ರೂಪುತಳೆಯುತ್ತಿದ್ದಾರೆ' ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿದ್ದಾರೆ.

ಗಣರಾಜ್ಯೋತ್ಸವ ಮುನ್ನಾದಿನವಾದ ಮಂಗಳವಾರ ದೇಶವನ್ನು ಉದ್ದೇಶಿಸಿ ಮಾಡಿದ ಅವರು, 'ಪ್ರಜಾಪ್ರಭುತ್ವ, ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ದೇಶವನ್ನು ಸದೃಢಗೊಳಿಸಿದೆ. ಮೂಲಭೂತ ಹಕ್ಕುಗಳನ್ನು ಸಂಭ್ರಮಿಸಲು ಸಂವಿಧಾನದಲ್ಲಿ ತಿಳಿಸಿದ ಮೂಲಭೂತ ಕರ್ತವ್ಯಗಳು ಪೂರಕ ವಾತಾವರಣ ಸೃಷ್ಟಿಸಿದೆ' ಎಂದು ಪ್ರತಿಪಾದಿಸಿದರು.

'ಕೋವಿಡ್ ರೂಪದ ಸವಾಲನ್ನು ದೇಶ ದೃಢವಾಗಿ ಎದುರಿಸಿದೆ. ಈಗ ದೃಢ ಮತ್ತು ಸೂಕ್ಷ್ಮತೆಯ ಭಾರತ ರೂಪುತಳೆಯುತ್ತಿದೆ. 73ನೇ ಗಣರಾಜ್ಯೋತ್ಸವದಲ್ಲಿ ಜನರು 'ಭಾರತೀಯಕರಣ'ವನ್ನು ಸಂಭ್ರಮಿಸಬೇಕು' ಎಂದೂ ಕರೆ ನೀಡಿದರು.

'ಭಾರತದ ಪ್ರಜಾಪ್ರಭುತ್ವದ ವೈವಿಧ್ಯ ಮತ್ತು ಅನುರಣತೆಗೆ ವಿಶ್ವವ್ಯಾಪಿ ಶ್ಲಾಘನೆಯಿದೆ. ಏಕತೆ ಮತ್ತು ನಾವೆಲ್ಲರೂ ಒಂದು ಎಂಬ ಸ್ಫೂರ್ತಿಯಿಂದಲೇ ಪ್ರತಿವರ್ಷ ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆ. ಈ ವರ್ಷ ಕೋವಿಡ್‌ನಿಂದಾಗಿ ಆ ಸಂಭ್ರಮವು ಮುಸುಕಾಗಿರಬಹುದು, ಆದರೆ ಉತ್ಸಾಹವು ಕುಗ್ಗಿಲ್ಲ' ಎಂದು ಹೇಳಿದರು.


ರಾಮನಾಥ ಕೋವಿಂದ್

ಜನಸಂಖ್ಯೆ ಕಾರಣದಿಂದಾಗಿ ಕೋವಿಡ್ ನಿರ್ವಹಣೆಯು ಹೆಚ್ಚು ಸಂಕೀರ್ಣವಾಗಿತ್ತು. ಇಂತಹ ಸಂಕಷ್ಟ ಸ್ಥಿತಿಯಲ್ಲೂ ನಾವು ಸ್ಥಿರತೆ ಕಾಯ್ದುಕೊಂಡೆವು. ವೈದ್ಯಕೀಯ ಕ್ಷೇತ್ರದವರು ಅವಿರತ ದುಡಿದರು. ನಾಯಕತ್ವ, ನೀತಿ, ನಿರೂಪಕರು, ಆಡಳಿತಗಾರರು, ಸಕಾಲದಲ್ಲಿ ಮಧ್ಯಪ್ರವೇಶಿಸಿ ನಿರ್ಧಾರ ಕೈಗೊಂಡರು. ಆರ್ಥಿಕತೆಯ ದೃಷ್ಟಿಯಿಂದ ಇದು ಸವಾಲಿನದಾಗಿತ್ತು. ಆದರೆ, ಈ ಹಣಕಾಸು ವರ್ಷದಲ್ಲಿ ಗಣನೀಯ ಪ್ರಮಾಣದಲ್ಲಿ ಚೇತರಿಕೆ ಕಂಡಿದೆ ಎಂದರು.

ಕೃಷಿ ಮತ್ತು ಉತ್ಪಾದಕ ವಲಯದಲ್ಲಿನ ಪ್ರಗತಿಯಿಂದಾಗಿ ಆರ್ಥಿಕತೆಯ ಸಾಧನೆ ಸಾಧ್ಯವಾಗಿದೆ. ಕೃಷಿಕರು ಮುಖ್ಯವಾಗಿ ಯುವಕೃಷಿಕರು ಸಹಜ ಕೃಷಿ ಪದ್ಧತಿ ಅಳವಡಿಸಿಕೊಳ್ಳುತ್ತಿದ್ದಾರೆ. ಇದು, ಸಂತಸದ ಬೆಳವಣಿಗೆ ಎಂದರು.

ನಿಧನ ವಾರ್ತೆ

ಮುಳಿಯಾಲ ಭೀಮ ಭಟ್




ಉಡುಪಿ: ಯಕ್ಷಗಾನ ಕಲಾವಿದ ದೇವಿ ಭಟ್ರು ಎಂದೇ ಖ್ಯಾತಿ ಪಡೆದಿದ್ದ ಮುಳಿಯಾಲ ಭೀಮ ಭಟ್ (85) ಮಂಗಳವಾರ ಕಾಂತಾವರದಲ್ಲಿ ನಿಧನರಾದರು.

ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ. ಸಕ್ರಿಯ ಯಕ್ಷಗಾನ ರಂಗದಿಂದ ನಿವೃತ್ತರಾದ ಬಳಿಕ ಕಾಂತಾವರ ದೇವಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದ ಅವರು, ಕೆಲವು ತಿಂಗಳುಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಶ್ರೀದೇವಿ ಮಹಾತ್ಮೆ ಯಕ್ಷಗಾನ ಪ್ರಸಂಗದಲ್ಲಿ ದೇವಿಯ ಪಾತ್ರಕ್ಕೆ ಜೀವ ತುಂಬಿದ್ದ ಭೀಮ ಭಟ್ಟರನ್ನು ಅಭಿಮಾನಿಗಳು ದೇವಿ ಭಟ್ರು ಎಂದೇ ಕರೆಯುತ್ತಿದ್ದರು.

ದಿ.ಕುರಿಯ ವಿಠಲ ಶಾಸ್ತ್ರಿಗಳ ಗರಡಿಯಲ್ಲಿ ಪಳಗಿದ್ದ ಭೀಮ ಭಟ್ಟರು ಧರ್ಮಸ್ಥಳ, ಕೂಡ್ಲು, ಕುಂಡಾವು, ಕಟೀಲು ಹಾಗೂ ಸುಂಕದಕಟ್ಟೆ ಮೇಳಗಳಲ್ಲಿ ನಾಲ್ಕು ದಶಕಗಳ ಕಾಲ ಕಲಾಸೇವೆ ಮಾಡಿದ್ದಾರೆ.

ಸ್ತ್ರೀವೇಷಗಳಲ್ಲದೆ ಪುರುಷ ಪಾತ್ರಗಳಿಗೂ ಜೀವ ತುಂಬಿದ್ದರು. ಮಳೆಗಾಲದಲ್ಲಿ ಯಕ್ಷಗಾನ ತಂಡ ಕಟ್ಟಿಕೊಂಡು ರಾಜ್ಯ ಹಾಗೂ ದೇಶದ ವಿವಿಧೆಡೆ ಯಕ್ಷಗಾನ ಪ್ರದರ್ಶನಗಳನ್ನು ನೀಡಿದ್ದರು.





ಕನ್ನಡದ ಪದಲೋಕದಲ್ಲಿ ‘ವರ್ಡಲ್ಲ’


ಕೃಷ್ಣ ಭಟ್



ಕೆಲವೇ ತಿಂಗಳ ಹಿಂದೆ ಇಂಗ್ಲಿಷಿನಲ್ಲಿ ಬಿಡುಗಡೆಯಾಗಿದ್ದ ‘ವರ್ಡ್ಲ್’ ಎಂಬ ಪದಬಂಧದ ರೀತಿಯ ವೆಬ್‌ಸೈಟ್ ವ್ಯಾಪಕ ಜನಪ್ರಿಯವಾಗುತ್ತಿದೆ. ಶಬ್ದಗಳ ಜೊತೆ ಆಟವಾಡುವ ಮೇಲ್ನೋಟಕ್ಕೆ ಅತ್ಯಂತ ಸರಳವಾಗಿ ಕಂಡರೂ, ಕ್ಲಿಷ್ಟವಾದ ಪದಗಳನ್ನು ಹುಡುಕುವ ಅನಿವಾರ್ಯತೆ ಹುಟ್ಟಿಸುವ ವರ್ಡ್ಲ್ ಜನರಿಗೆ ಮೆಚ್ಚುಗೆಯಾಗುತ್ತಿದೆ. ಸೋಷಿಯಲ್ ಮೀಡಿಯಾಗಳಲ್ಲಂತೂ ವರ್ಡ್ಲ್‌ನಲ್ಲಿನ ತಮ್ಮ ಸಾಧನೆಯನ್ನು ಜನರು ಪೋಸ್ಟ್ ಮಾಡಿಕೊಳ್ಳುತ್ತಿರುತ್ತಾರೆ.

ಇಂಗ್ಲಿಷಿನಲ್ಲಿನ ಈ ವರ್ಡ್ಲ್ ಕನ್ನಡದಲ್ಲೂ ಸಿಗುವಂತಾಗಬೇಕು ಎಂದು ಶ್ರಮಿಸಿದವರು ಅಮೋಘ ಉಡುಪ. ಇದಕ್ಕೆ ‘ವರ್ಡಲ್ಲ’ ಎಂದು ಹೆಸರಿಟ್ಟಿದ್ದಾರೆ. Wordalla.onlineನಲ್ಲಿ ಕನ್ನಡದ ವರ್ಡ್ಲ್ ಲಭ್ಯವಿದೆ. ಜೋಷ್ ವಾರ್ಡ್ಲ್ ಪ್ರೋಗ್ರಾಮ್ ಮಾಡಿದ್ದನ್ನೇ ಗಿಟ್‌ಹಬ್ ಎಂಬ ಓಪನ್ ಸೋರ್ಸ್ ಪ್ಲಾಟ್‌ಫಾರ್ಮ್‌ನಿಂದ ತೆಗೆದುಕೊಂಡು ಅದನ್ನೇ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಕನ್ನಡದಲ್ಲಿ ಪ್ರಕಟಿಸಿದರು. ‘ಕನ್ನಡ ಕೀಬೋರ್ಡ್, ಕನ್ನಡ ಅಕ್ಷರ/ಕಾಗುಣಿತ ಸರಿ ಇದೆಯೇ ಎಂದು ಪರೀಕ್ಷಿಸುವುದು ಮತ್ತು ಪದವೊಂದು ನಿಘಂಟಿನಲ್ಲಿ ಇದೆಯೇ ಎಂದು ಪರೀಕ್ಷಿಸುವ ಕೋಡ್ ಅಳವಡಿಸಿದೆ’ ಎಂದು ಅಮೋಘ ಹೇಳುತ್ತಾರೆ.

ಕನ್ನಡದ ವರ್ಡ್ಲ್ ಮಾಡಬೇಕು ಎನಿಸಿದಾಗ ಇವರು ಬೇರೆ ಭಾಷೆಗಳಲ್ಲಿ ಇರುವ ವರ್ಡ್ಲ್ ಅನ್ನೂ ಗಮನಿಸಿದ್ದಾರೆ. ತಮಿಳಿನಲ್ಲಿ ಮಾಡಿರುವ ವರ್ಡ್ಲ್‌ನಲ್ಲಿ ಇರುವ ಕೊರತೆಯನ್ನು ಇವರು ಕನ್ನಡದಲ್ಲಿ ನೀಗಿಸುವ ಪ್ರಯತ್ನ ಮಾಡಿದ್ದಾರೆ. ವ್ಯಂಜನ, ಸ್ವರ ಮತ್ತು ಒತ್ತಕ್ಷರಗಳನ್ನೂ ಬರೆಯುವ ಅವಕಾಶ ಕನ್ನಡದಲ್ಲಿ ಅಗತ್ಯವಿರುವುದನ್ನು ಗಮನಿಸಿ ತಂದಿದ್ದಾರೆ.



‘ಅಲರ್’ ಎಂಬ ಕನ್ನಡ ಶಬ್ದಕೋಶದಲ್ಲಿರುವ ಕನ್ನಡ ಪದಗಳನ್ನಷ್ಟೇ ಇದು ಸದ್ಯಕ್ಕೆ ಪದ ಎಂದು ಗುರುತಿಸುತ್ತದೆ.

ಇಂಗ್ಲಿಷಿನಲ್ಲಿ ಜೋಷ್ ವಾರ್ಡ್ಲ್ ತನ್ನ ಪತ್ನಿ ಪಲಕ್ ಷಾಗಾಗಿ ಈ ವರ್ಡ್ಲ್ ರಚಿಸಿದರು. ಇದಕ್ಕೆ ಯಾವುದೇ ಆ್ಯಪ್ ಇಲ್ಲ. ಕೇವಲ ಕ್ರೋಮ್ ಬ್ರೌಸರ್‌ನಲ್ಲಿ ಸರಿಯಾಗಿ ಕೆಲಸ ಮಾಡುತ್ತದೆ. ಸಫಾರಿ ಬ್ರೌಸರ್‌ನಲ್ಲಿ ಕೆಲಸ ಮಾಡುವುದಿಲ್ಲ. ದಿನಕ್ಕೆ ಒಂದೇ ಪದವನ್ನು ಕೊಟ್ಟಿರುತ್ತಾರೆ. ವಾರ್ಡ್ಲ್ ಪ್ರಕಾರ, ವ್ಯಕ್ತಿಯೊಬ್ಬ ಕೇವಲ 15 ನಿಮಿಷಗಳನ್ನು ಮಾತ್ರ ಇದಕ್ಕೆ ವೆಚ್ಚ ಮಾಡಬೇಕು. ಅದಕ್ಕಿಂತ ಹೆಚ್ಚು ಸಮಯವನ್ನು ಆತ ಇದರಲ್ಲಿ ವೆಚ್ಚ ಮಾಡಬಾರದು ಎಂಬ ಕಾರಣಕ್ಕೇ ಹೀಗೆ ಸೀಮಿತ ಮಾಡಿದ್ದೇವೆ. ವ್ಯಕ್ತಿಯೊಬ್ಬನ ಇಡೀ ದಿನವನ್ನು ತಿಂದುಹಾಕುವ ಗೇಮ್ ಮಾಡುವುದು ನಮ್ಮ ಉದ್ದೇಶವಲ್ಲ ಎಂದು ಜೋಷ್ ವಾರ್ಡ್ಲ್ ಹೇಳುತ್ತಾರೆ.

ಏನಿದು ವರ್ಡಲ್ಲ?

ದಿನಕ್ಕೆ ಒಂದು ಶಬ್ದವನ್ನು ಕೊಡಲಾಗಿರುತ್ತದೆ. ಆ ಶಬ್ದವನ್ನು ಊಹಿಸುವುದೇ ಆಟ. ಎಂಟು ಪ್ರಯತ್ನದಲ್ಲಿ ಶಬ್ದವನ್ನು ಊಹಿಸಬೇಕು. ಐದು ಅಕ್ಷರಗಳ ಪದಗಳಿಗೆ ಮಾತ್ರ ಅವಕಾಶ. ಈಗ ನಾಲ್ಕು ಪದಗಳ ಆಯ್ಕೆಯನ್ನೂ ನೀಡಿದ್ದಾರೆ. ಇದರಲ್ಲಿ ಪ್ರತಿ ಬಣ್ಣವೂ ಒಂದೊಂದು ಸುಳಿವು ನೀಡುತ್ತದೆ. ಸರಿಯಾದ ಮನೆಯಲ್ಲಿ, ಸರಿಯಾದ ಒತ್ತು ಮತ್ತು ಕಾಗುಣಿತ ಸರಿ ಇದ್ದಲ್ಲಿ ಹಸಿರು ಬಣ್ಣದಲ್ಲಿ ಅಕ್ಷರವನ್ನು ಸೂಚಿಸುತ್ತದೆ. ಒಂದು ವೇಳೆ ಸರಿಯಾದ ಮನೆಯಲ್ಲಿ ವ್ಯಂಜನ ಸರಿ ಇದ್ದು, ಒತ್ತು ಅಥವಾ ಕಾಗುಣಿತ ತಪ್ಪಾಗಿದ್ದರೆ, ನೀಲಿಬಣ್ಣದಲ್ಲಿ ಅಕ್ಷರವನ್ನು ತೋರಿಸುತ್ತದೆ. ತಪ್ಪಾದ ಮನೆಯಲ್ಲಿ ಅಕ್ಷರವಿದ್ದು, ವ್ಯಂಜನ ಸರಿ ಇದ್ದರೆ ಅದನ್ನು ಹಳದಿಬಣ್ಣದಲ್ಲಿ ತೋರಿಸುತ್ತದೆ. ಹೀಗೆ ಕನ್ನಡಕ್ಕೇ ವಿಶಿಷ್ಟವಾದ ಹಲವು ಸುಳಿವುಗಳನ್ನು ಇದರಲ್ಲಿ ಸೇರಿಸಲಾಗಿದೆ.

ಇಂಗ್ಲಿಷಿನಲ್ಲಿ ಸುಳಿವುಗಳನ್ನು ನೀಡುವ ಪ್ರಕ್ರಿಯೆ ತುಂಬಾ ಸುಲಭವಾಗಿದೆ. ಅದರಲ್ಲಿ ಮೂರೇ ಸುಳಿವುಗಳು ಇರುತ್ತವೆ. ದಿನದ ಪದದಲ್ಲಿ ಅಕ್ಷರ ಇದ್ದು, ಅದು ಸರಿಯಾದ ಸ್ಥಾನದಲ್ಲಿದ್ದರೆ, ಆಗ ಅದನ್ನು ಹಸಿರುಬಣ್ಣದಲ್ಲಿ ಸೂಚಿಸಲಾಗುತ್ತದೆ. ದಿನದ ಪದದಲ್ಲಿ ಅಕ್ಷರ ಇದ್ದು, ಸರಿಯಾದ ಸ್ಥಾನದಲ್ಲಿ ಇಲ್ಲದಿದ್ದರೆ, ಅದನ್ನು ಹಳದಿಬಣ್ಣದಲ್ಲಿ ತೋರಿಸಲಾಗುತ್ತದೆ. ಯಾವ ಅಕ್ಷರವೂ ದಿನದ ಪದದಲ್ಲಿ ಇಲ್ಲದಿದ್ದರೆ ಅದನ್ನು ಬೂದು ಬಣ್ಣದಲ್ಲಿ ತೋರಿಸಲಾಗುತ್ತದೆ. ಆದರೆ, ಕನ್ನಡದಲ್ಲಿ ಅಕ್ಷರಗಳಿಗೆ ಒತ್ತು, ವ್ಯಂಜನ, ಸ್ವರಗಳೆಲ್ಲ ಸೇರುವುದರಿಂದ ಊಹಿಸುವುದನ್ನು ಇನ್ನಷ್ಟು ಸುಲಭ ಮಾಡುವುದಕ್ಕಾಗಿ ಸುಳಿವುಗಳನ್ನು ಹೆಚ್ಚು ಮಾಡಿದ್ದಾರೆ. ಇದಕ್ಕೆ ಅಮೋಘ ತುಂಬಾ ಶ್ರಮ ವಹಿಸಿರುವುದು ಮೇಲ್ನೋಟಕ್ಕೇ ಕಂಡುಬರುತ್ತದೆ.

ಅಮೆರಿಕದಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಮಾಸ್ಟರ್ಸ್ ಓದುತ್ತಿರುವ ಬೆಂಗಳೂರಿನ ಅಮೋಘ ಉಡುಪ ಚಳಿಗಾಲದ ರಜೆ ಹೊತ್ತಲ್ಲಿ ಇಂಥದ್ದೊಂದು ಪ್ರಯೋಗ ಮಾಡಿದ್ದಾರೆ. ಇವರ ಪ್ರಯತ್ನ ನಿಜಕ್ಕೂ ಶ್ಲಾಘನಾರ್ಹ.

ಯಕ್ಷಗಾನಕ್ಕೊಂದು ಆ್ಯಪ್

ರವಿ ಮಡೋಡಿ

ಯಕ್ಷಗಾನಕ್ಕೊಂದು ಮೊಬೈಲ್ ಆ್ಯಪ್. ಅಯ್ಯೋ! ಯಕ್ಷಗಾನಕ್ಕೂ ಮೊಬೈಲ್ ಆ್ಯಪ್‌ಗೂ ಏನು ಸಂಬಂಧ ಎಂದು ಭಾವಿಸಬಹುದು. ಹೌದು, ಈಗ ಈ ಆ್ಯಪ್ ಕರ್ನಾಟಕದ ಕಲೆಯಾದ ಯಕ್ಷಗಾನದ ಪ್ರಸಂಗಗಳನ್ನು ಸಹೃದಯರಿಗೆ ಒದಗಿಸುತ್ತಿದೆ. ಹಾಗಾಗಿ ಇನ್ನು ಮುಂದೆ ಯಕ್ಷಗಾನಪ್ರೇಮಿಗಳು ಪ್ರಸಂಗಕ್ಕಾಗಿ ಅಲೆದಾಡಬೇಕಿಲ್ಲ. ಯಕ್ಷಗಾನ ಆಸಕ್ತರು, ಕವಿಗಳು, ಕಲಾವಿದರು ತಮ್ಮ ಮೊಬೈಲ್/ಕಂಪ್ಯೂಟರ್‌ನಲ್ಲಿ ತಮಗೆ ಬೇಕಾದ ಪ್ರಸಂಗಗಳನ್ನು ಆ್ಯಪ್‌ನ ಮೂಲಕವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಂತಹದೊಂದು ತಾಂತ್ರಿಕತೆಯು ಯಕ್ಷಗಾನದಂತಹ ಶಾಸ್ತ್ರೀಯ ಕಲೆಯ ಬೆಳವಣಿಗೆಯಲ್ಲಿ ಬಳಕೆಯಾಗುತ್ತಿರುವುದು ಶ್ಲಾಘನೀಯ. ಯಕ್ಷವಾಹಿನಿಯ ಸಂಸ್ಥೆಯು ಪ್ರಸಂಗ ಪ್ರತಿ ಸಂಗ್ರಹಕ್ಕೆ ಆ್ಯಪ್‌ವೊಂದನ್ನು ಅಭಿವೃದ್ಧಿ ಮಾಡಿದೆ. ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಹಾಗೂ ಹವ್ಯಾಸಿ ಕಲಾವಿದರೂ ಆದ ಲಕ್ಷ್ಮೀನಾರಾಯಣ ಭಟ್ (ಲನಾ) ಅವರು ಈ ಆ್ಯಪನ್ನು ಅಭಿವೃದ್ಧಿಪಡಿಸಿದ್ದಾರೆ. ಈಗಾಗಲೇ 5000ಕ್ಕೂ ಹೆಚ್ಚಿನ ಬಳಕೆದಾರರು ಇದನ್ನು ಬಳಸುತ್ತಿದ್ದಾರೆ. ಪ್ರತಿನಿತ್ಯ 100ಕ್ಕೂ ಹೆಚ್ಚು ಪ್ರಸಂಗಗಳು ಇದರಿಂದ ಡೌನ್‌ಲೋಡ್ ಆಗುತ್ತಿದೆ. ಸದ್ಯ ಈ ಆ್ಯಪ್‌ನಲ್ಲಿ 1500 ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳು ಲಭ್ಯ.

ಬೆಂಗಳೂರಿನ ‘ಯಕ್ಷವಾಹಿನಿ ಸಂಸ್ಥೆ’ಯು ಯಕ್ಷಗಾನ ಡಿಜಿಟಲೀಕರಣದ ಭಾಗವಾಗಿ ‘ಪ್ರಸಂಗಪ್ರತಿ ಸಂಗ್ರಹ ಯೋಜನೆ’ಯೊಂದನ್ನು 2019ರಲ್ಲಿ ಕೈಗೊಂಡಿತು. ಸಾಂಘಿಕ ನೆಲೆಗಟ್ಟಿನಲ್ಲಿ ಈ ಯೋಜನೆಯು ನಡೆಯುತ್ತಿದ್ದು ಸ್ವಯಂಸೇವಕರ ಸಹಕಾರದೊಂದಿಗೆ ಪ್ರಸಂಗಪ್ರತಿಗಳನ್ನು ಉಚಿತವಾಗಿ ಲಭ್ಯವಾಗುವಂತೆ ಮಾಡುತ್ತಿದೆ. ಈಗಾಗಲೇ 1500ಕ್ಕೂ ಹೆಚ್ಚಿನ ಪ್ರತಿಗಳನ್ನು ಸಂಗ್ರಹಿಸಲಾಗಿದ್ದು, ಇನ್ನೂ ಹೆಚ್ಚಿನ ಪ್ರತಿಗಳನ್ನು ಸಂಗ್ರಹಕ್ಕೆ ಸೇರಿಸುವತ್ತ ತಂಡ ಕಾರ್ಯೋನ್ಮುಖವಾಗಿದೆ. ದುರ್ಲಭವಿರುವ, ಸದ್ಯ ಎಲ್ಲೋ ಕೆಲವೇ ಕೆಲವರ ಬಳಿಯಲ್ಲಿರುವ ಅಮೂಲ್ಯ ಪ್ರತಿಗಳನ್ನು ಯಕ್ಷಸಾಹಿತ್ಯಲೋಕದಲ್ಲಿ ಶಾಶ್ವತವಾಗಿರಿಸುವುದಲ್ಲದೇ, ಮುಂದಿನ ತಲೆಮಾರಿಗೆ ಯಕ್ಷಸಾಹಿತ್ಯವನ್ನು ದಾಟಿಸುವಲ್ಲಿ ಈ ಕಾರ್ಯ ಪ್ರಮುಖವಾದದ್ದು. ನಶಿಸುತ್ತಿರುವ ಪ್ರಸಂಗಗಳನ್ನು ಸಂರಕ್ಷಿಸಲು ವಾರಾಂತ್ಯಗಳಲ್ಲಿ ಸ್ಕ್ಯಾನಿಂಗ್ ಕಮ್ಮಟಗಳನ್ನು ನಡೆಸಿ ಈ ಮೂಲಕ ಪ್ರತಿಗಳನ್ನು ಸೇರಿಸುವ ಕಾಯಕದಲ್ಲಿ ತೊಡಗಿದೆ.

- ಆಂಡ್ರಾಯ್ಡ್ ಬಳಕೆದಾರರು ಪ್ಲೇಸ್ಟೋರ್‌ನಿಂದ ಡೌನ್‌ಲೋಡ್ ಮಾಡಬಹುದು. Playstore:Prasanga Prathi Sangraha
- ಕಂಪ್ಯೂಟರ್/IOS/ವೆಬ್ ಬಳಕೆದಾರರು, ಪಿಡಬ್ಲ್ಯುಎ ಆವೃತ್ತಿಯನ್ನೂ ಉಪಯೋಗಿಸಬಹುದು http://prasangaprathiapp.yakshavahini.com/

ಗ್ರಾಮ ಒನ್: ಗ್ರಾಮಗಳಿಗೂ ತಂತ್ರಜ್ಞಾನ

ಅವಿನಾಶ್ ಬಿ.

ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಸುಲಭವಾಗಿ ಪಡೆಯುವಲ್ಲಿ ಅನುಕೂಲ ಮಾಡಿಕೊಡುವ ‘ಬೆಂಗಳೂರು ಒನ್’, ‘ಕರ್ನಾಟಕ ಒನ್’ ಹೆಸರಿನ ಕೇಂದ್ರಗಳಂತೆಯೇ, ರಾಜ್ಯದಲ್ಲಿ ‘ಗ್ರಾಮ ಒನ್’ ಹೆಸರಿನ ಕೇಂದ್ರಗಳು ಕರ್ನಾಟಕದ 12 ಜಿಲ್ಲೆಗಳಿಗೆ ವಿಸ್ತರಣೆಯಾಗುತ್ತಿದೆ. ಇಂದಿನಿಂದ (ಜ.26) ಬೀದರ್, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಹಾವೇರಿ, ವಿಜಯಪುರ, ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿಕ್ಕಮಗಳೂರು, ಉಡುಪಿ ಮತ್ತು ಕೊಡಗು ಜಿಲ್ಲೆಗಳ ವಿವಿಧೆಡೆಗಳಲ್ಲಿ ಈ ಕೇಂದ್ರಗಳು ಕಾರ್ಯಾಚರಿಸಲಿವೆ.

ಏನು ಪ್ರಯೋಜನ?

ಕಂದಾಯ ಇಲಾಖೆ, ಆಹಾರ, ಕಾರ್ಮಿಕ ಇಲಾಖೆ, ವೈದ್ಯಕೀಯ ಮುಂತಾದ ಸರ್ಕಾರದ ಹಲವಾರು ಇಲಾಖೆಗಳ 100ಕ್ಕೂ ಅಧಿಕ ಸೇವೆಗಳನ್ನು ಪಡೆಯುವುದಕ್ಕಾಗಿ ಜನರು ತಾಲ್ಲೂಕು ಕಚೇರಿ ಅಥವಾ ಜಿಲ್ಲಾ ಪಂಚಾಯತ್ ಕಚೇರಿಗಳಿಗೆ ಅಲೆಯುವುದು ತಪ್ಪುತ್ತದೆ. ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ ಮತ್ತು ಅಧಿಕಾರಿಗಳು ಸತಾಯಿಸುತ್ತಾರೆ, ಸರದಿ ಸಾಲಿನಲ್ಲಿ ನಿಲ್ಲಬೇಕು ಎಂಬೆಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ಈ ಗ್ರಾಮ ಒನ್ ಕೇಂದ್ರಗಳು ಒದಗಿಸುತ್ತವೆ. ತಂತ್ರಜ್ಞಾನ ಆಧಾರಿತ ಈ ಸೌಕರ್ಯದಿಂದಾಗಿ ಹಣ ಮತ್ತು ಶ್ರಮದ ಉಳಿತಾಯ.

ಯಾವೆಲ್ಲ ಸೇವೆಗಳು?

ಇದು ಸರ್ಕಾರದ ಇ-ಆಡಳಿತ ವಿಭಾಗದ ಕೊಡುಗೆ. ಅಂತರ್ಜಾಲದ ಸಹಾಯದಿಂದ ಎಲೆಕ್ಟ್ರಾನಿಕ್ ರೂಪದಲ್ಲಿ ಪಡೆಯಬಹುದಾದ ಸೇವೆಗಳು ಈ ‘ಏಕ ಗವಾಕ್ಷಿ’ ಸೌಕರ್ಯದಿಂದ ದೊರೆಯುತ್ತದೆ. ನಿರಂತರ ಇಂಟರ್ನೆಟ್ ಹಾಗೂ ವಿದ್ಯುತ್ ಸಂಪರ್ಕ ಲಭ್ಯವಿರುವ ಗ್ರಾಮ ಒನ್ ಕೇಂದ್ರಗಳಿಗೆ ಭೇಟಿ ನೀಡಿ, ಕನಿಷ್ಠ ಅರ್ಜಿ ಶುಲ್ಕ ಪಾವತಿಸಿ, ನಮಗೆ ಬೇಕಾದ ಗ್ರಾಮ ಮಟ್ಟದ ಸರ್ಕಾರಿ ಸೇವೆಗಳನ್ನು ಪಡೆಯಬಹುದು.

ಉದಾಹರಣೆಗೆ, ನಮ್ಮದೇ ಜಮೀನಿನ ದಾಖಲೆ ಪಡೆಯಬೇಕಿದ್ದರೆ, ಕಂದಾಯ ಇಲಾಖೆಗೆ ತೀರುವೆ (ತೆರಿಗೆ) ಪಾವತಿಸಬೇಕಿದ್ದರೆ, ಪಿಂಚಣಿಗೆ, ಮಾಸಾಶನಕ್ಕೆ ಅರ್ಜಿ ಹಾಕಬೇಕಿದ್ದರೆ, ಸರ್ಕಾರದಿಂದ ಸಹಾಯಧನ ಪಡೆಯಬೇಕಿದ್ದರೆ, ಶಿಕ್ಷಣ ಇಲಾಖೆಯಿಂದ ಮರು ಮೌಲ್ಯಮಾಪನ ಇತ್ಯಾದಿಗೆ, ಈ ಕೇಂದ್ರಗಳಲ್ಲೇ ಅರ್ಜಿ ತುಂಬಿದರಾಯಿತು. ಅದೇ ರೀತಿ, ಆರ್‌ಟಿಐಗೆ ಅರ್ಜಿ, ಆಧಾರ್ ಕಾರ್ಡ್‌ನಲ್ಲೇನಾದರೂ ಬದಲಾವಣೆಯಾಗಬೇಕಿದ್ದರೆ, ‘ಸೇವಾ ಸಿಂಧು’ ಮೂಲಕ ಲಭ್ಯವಾಗುವ 750ಕ್ಕೂ ಅಧಿಕ ಸೇವೆಗಳು, ಸಾರಿಗೆ ಇಲಾಖೆ, ಆಧಾರ್, ಮುದ್ರಾಂಕ, ಸಕಾಲ ಮುಂತಾದ ಸೇವೆಗಳು ಇಲ್ಲಿ ಲಭ್ಯ. ವಿದ್ಯುತ್, ನೀರಿನ ಬಿಲ್ ಪಾವತಿ, ಚಾಲನೆಯ ಕಲಿಕಾ ಪರವಾನಗಿ, ನಾಡಕಚೇರಿ ಸೇವೆಗಳು ಇಲ್ಲಿಯೇ ಲಭ್ಯ. ಅಂದರೆ, ಖುದ್ದಾಗಿ ಅಧಿಕಾರಿಗಳೇ ಬಂದು ಪರಿಶೀಲನೆ ನಡೆಸಬೇಕಾಗಿರುವ ಸೇವೆಗಳನ್ನು ಹೊರತುಪಡಿಸಿ, ಕಾಗದಪತ್ರದಲ್ಲಿ ನಡೆಯಬಹುದಾದ ಬಹುತೇಕ ಎಲ್ಲ ಅರ್ಜಿಗಳು ಗ್ರಾಮ ಒನ್ ಮೂಲಕವೇ ವಿಲೇವಾರಿಯಾಗುತ್ತವೆ.

ಹೇಗೆ?

ಈ ಗ್ರಾಮ ಒನ್ ಕೇಂದ್ರಗಳಿಗೆ ಹೋಗಿ, ನಿರ್ದಿಷ್ಟ ಸೇವೆಗೆ ಅರ್ಜಿ ಸಲ್ಲಿಸಬಹುದು. ಅಲ್ಲಿರುವ ತರಬೇತಾದ ಸಿಬ್ಬಂದಿಗಳು ನೆರವಾಗುತ್ತಾರೆ. ಈ ಕೇಂದ್ರಗಳು ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸುತ್ತವೆ. ಅಂತರ್ಜಾಲದ ಮೂಲಕ ವಿವಿಧ ಇಲಾಖೆಗಳನ್ನು ಸಂಪರ್ಕಿಸಿ, ಆಯಾ ಇಲಾಖೆಗಳ ಸೇವೆಗಳನ್ನು ಪಡೆಯಬಹುದು. ಅರ್ಜಿ ಸಲ್ಲಿಸಿದ ಬಳಿಕ ಅದರ ಸ್ಥಿತಿಗತಿ ಬಗ್ಗೆ ಮೊಬೈಲ್ ಸಂದೇಶದ ಮೂಲಕ ಮಾಹಿತಿ ದೊರೆಯುತ್ತದೆ. ಮತ್ತು ಸರ್ಕಾರದಿಂದ ಲಭ್ಯವಾಗುವ ಪ್ರಮಾಣಪತ್ರ, ಆಸ್ತಿಯ ಹಕ್ಕುಪತ್ರದ ಪ್ರತಿಗಳು ಮುಂತಾದವನ್ನು ಇದೇ ಕೇಂದ್ರಕ್ಕೆ ಭೇಟಿ ನೀಡಿ ಪಡೆದುಕೊಳ್ಳಬಹುದಾಗಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ಅಧ್ಯಾಯ 2: ತ್ರಿಭುಜಗಳು

ಗಣಿತ

ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು

ಸಮರೂಪ ಆಕೃತಿಗಳು: ಬಾಹುಗಳ ಸಂಖ್ಯೆ ಒಂದೇ ಇರುವ ಎರಡು ಬಹುಭುಜಾಕೃತಿಗಳು ಸಮರೂಪಿಗಳಾಗಬೇಕಾದರೆ i) ಅವುಗಳ ಅನುರೂಪ ಕೋನಗಳು ಸಮವಾಗಿರಬೇಕು ಮತ್ತು ii) ಅವುಗಳ ಅನುರೂಪ ಬಾಹುಗಳ ಅನುಪಾತ ಸಮವಾಗಿರಬೇಕು. (ಅಥವಾ ಸಮಾನುಪಾತದಲ್ಲಿರಬೇಕು).



A' ಶೃಂಗಕ್ಕೆ ಅನುರೂಪ ಶೃಂಗ A, B' ಶೃಂಗಕ್ಕೆ ಅನುರೂಪವಾದ ಶೃಂಗ B, C' ಶೃಂಗಕ್ಕೆ ಅನುರೂಪ ಶೃಂಗ C ಮತ್ತು D' ಶೃಂಗಕ್ಕೆ ಅನುರೂಪವಾದ ಶೃಂಗ D ಎಂದು ನೀವು ಇಲ್ಲಿ ಗಮನಿಸಬಹುದು. ಸಾಂಕೇತಿಕವಾಗಿ ಈ ಅನುರೂಪತೆಯನ್ನು

$A' \leftrightarrow A$, $B' \leftrightarrow B$, $C' \leftrightarrow C$ ಮತ್ತು $D' \leftrightarrow D'$ ಎಂದು ಸೂಚಿಸುತ್ತೇವೆ.

ತ್ರಿಭುಜಗಳ ಸಮರೂಪತೆ : ಎರಡು ತ್ರಿಭುಜಗಳು ಸಮರೂಪವಾಗಬೇಕಾದರೆ:
i) ಅವುಗಳ ಅನುರೂಪ ಕೋನಗಳು ಸಮವಾಗಿರಬೇಕು ಮತ್ತು
ii) ಅವುಗಳ ಅನುರೂಪ ಬಾಹುಗಳ ಅನುಪಾತ ಸಮ (ಸಮಾನುಪಾತ) ವಾಗಿರಬೇಕು.

ಪ್ರಮೇಯ 2.1: ತ್ರಿಭುಜದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾಂತರವಾಗಿ ಎಳೆದ ಸರಳ ರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ.

ಪ್ರಮೇಯ 2.2: ತ್ರಿಭುಜದ ಯಾವುದಾದರೂ ಎರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುವ ರೇಖೆಯು ಅದರ ಮೂರನೇ ಬಾಹುವಿಗೆ ಸಮನಾಂತರವಾಗಿರುತ್ತದೆ.

ಸಂಕೇತ ‘ ~ ’ **ಸಮರೂಪ** ಎಂಬುದನ್ನು ಸೂಚಿಸುತ್ತದೆ.

ಪ್ರಮೇಯ 2.3: (AAA ನಿರ್ಧಾರಕ ಗುಣ) ಎರಡು ತ್ರಿಭುಜಗಳಲ್ಲಿ ಅನುರೂಪ ಕೋನಗಳು ಸಮವಾದರೆ ಅವುಗಳ ಅನುರೂಪ ಬಾಹುಗಳ ಅನುಪಾತಗಳು ಸಮ (ಅಥವಾ ಸಮಾನುಪಾತದಲ್ಲಿರುತ್ತದೆ). ಆದ್ದರಿಂದ ಆ ತ್ರಿಭುಜಗಳು ಸಮರೂಪವಾಗಿರುತ್ತವೆ

ಪ್ರಮೇಯ 2.4: (S.S.S ನಿರ್ಧಾರಕ ಗುಣ) ಎರಡು ತ್ರಿಭುಜಗಳಲ್ಲಿ ಒಂದು ತ್ರಿಭುಜದ ಮೂರು ಬಾಹುಗಳು ಮತ್ತೊಂದು ತ್ರಿಭುಜದ ಮೂರು ಬಾಹುಗಳೊಡನೆ ಸಮಾನುಪಾತ ಹೊಂದಿದ್ದರೆ (ಅಂದರೆ ಅನುಪಾತ ಒಂದೇ ಆದರೆ) ಅವುಗಳ ಅನುರೂಪ ಕೋನಗಳು ಸಮನಾಗಿರುತ್ತವೆ ಮತ್ತು ಅದರಿಂದಾಗಿ ಆ ಎರಡು ತ್ರಿಭುಜಗಳು ಸಮರೂಪಿಗಳಾಗಿರುತ್ತವೆ.

ಪ್ರಮೇಯ 2.5: (S.A.S ನಿರ್ಧಾರಕ ಗುಣ) ತ್ರಿಭುಜದ ಒಂದು ಕೋನವು ಮತ್ತೊಂದು ತ್ರಿಭುಜದ ಒಂದು ಕೋನಕ್ಕೆ ಸಮವಾಗಿದ್ದು ಆ ಕೋನಗಳು ಉಂಟುಮಾಡಿರುವ ಬಾಹುಗಳು ಸಮಾನುಪಾತದಲ್ಲಿದ್ದರೆ, ಆ ಎರಡು ತ್ರಿಭುಜಗಳು ಸಮರೂಪಿಗಳಾಗಿರುತ್ತವೆ.

ಪ್ರಮೇಯ 2.6: ಎರಡು ಸಮರೂಪ ತ್ರಿಭುಜಗಳ ವಿಸ್ತೀರ್ಣಗಳ ಅನುಪಾತವು ಅವುಗಳ ಅನುರೂಪ ಬಾಹುಗಳ ವರ್ಗಗಳ ಅನುಪಾತಕ್ಕೆ ಸಮನಾಗಿರುತ್ತದೆ.

ಪ್ರಮೇಯ 2.7: ಒಂದು ಲಂಬಕೋನ ತ್ರಿಭುಜದಲ್ಲಿ ಲಂಬಕೋನ ಶೃಂಗದಿಂದ ವಿಕರ್ಣಕ್ಕೆ ಎಳೆದ ಲಂಬವು ವಿಭಾಗಿಸುವ ಎರಡು ತ್ರಿಭುಜಗಳು ಪರಸ್ಪರ ಸಮರೂಪ ಅಲ್ಲದೆ ಅವುಗಳು ದತ್ತ ತ್ರಿಭುಜಕ್ಕೆ ಸಮರೂಪವಾಗಿರುತ್ತದೆ.

ಪ್ರಮೇಯ 2.8: (ಪೈಥಾಗೊರಸ್ ಪ್ರಮೇಯ) ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ಮೇಲಿನ ವರ್ಗಗಳ ಮೊತ್ತಕ್ಕೆ ಸಮ.

ಪ್ರಮೇಯ 2.9: ಒಂದು ತ್ರಿಭುಜದಲ್ಲಿ ಅತ್ಯಂತ ದೊಡ್ಡ ಬಾಹುವಿನ ಮೇಲಿನ ವರ್ಗವು ಉಳಿದೆರಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮನಾದರೆ ಆ ಎರಡು ಬಾಹುಗಳ ನಡುವೆ ಲಂಬಕೋನ ಏರ್ಪಡುತ್ತದೆ.

1. 10ಮೀ ಎತ್ತರದ ನೇರವಾದ ಕಂಬವು ನೆಲದ ಮೇಲೆ 4ಮೀ ಉದ್ದದ ನೆರಳನ್ನು ಉಂಟುಮಾಡುತ್ತದೆ. ಅದೇ ಸಮಯದಲ್ಲಿ 50ಮೀ ಎತ್ತರದ ಕಟ್ಟಡವು ಉಂಟುಮಾಡುವ ನೆರಳಿನ ಉದ್ದವು

ಎ. 20ಮೀ ಬಿ. 10ಮೀ ಸಿ. 25ಮೀ ಡಿ. 30ಮೀ

ಉತ್ತರ: ಎ. 20ಮೀ

2. ΔABC ಯಲ್ಲಿ $AB = 6\sqrt{3}cm$, $AC = 12cm$ ಮತ್ತು $BC = 6cm$ ಆದರೆ B ಯು


ಎ. 120^0 ಬಿ. 60^0 ಸಿ. 90^0 ಡಿ. 45^0

ಉತ್ತರ: ಸಿ. 90^0

3. $DB = 3CD$ ಆಗುವಂತೆ ΔABCಯಲ್ಲಿ A ನಿಂದ BC ಗೆ ಎಳೆದ ಲಂಬವು BC ಯನ್ನು D ನಲ್ಲಿ ಛೇದಿಸುತ್ತದೆ (ಚಿತ್ರವನ್ನು ನೋಡಿ) $2AB^2 = 2AC^2 + BC^2$ ಎಂದು ಸಾಧಿಸಿ.

ಪರಿಹಾರ: ΔABC ಯಲ್ಲಿ, $AD \perp BC$ ಮತ್ತು $DB = 3CD$

ADB ಮತ್ತು ADC ಲಂಬಕೋನ ತ್ರಿಭುಜಗಳಲ್ಲಿ,



$AB^2 = AD^2 + BD^2$ ...(i)

$AC^2 = AD^2 + DC^2$ ...(ii)

(ii) ರಿಂದ (i) ನ್ನು ಕಳೆದಾಗ,

$AB^2 - AC^2 = DB^2 - DC^2$

$AB^2 - AC^2 = 9CD^2 - CD^2$ $[\therefore BD = 3CD]$

$AB^2 - AC^2 = 8 \times \left(\frac{BC}{4}\right)^2$ $[\because BC = DB + CD = 3CD + CD = 4CD]$

$\therefore AB^2 - AC^2 = \frac{BC^2}{2}$

$\Rightarrow 2(AB^2 - AC^2) = BC^2$

$\Rightarrow 2AB^2 - 2AC^2 = BC^2$

$\therefore 2AB^2 = 2AC^2 + BC^2$.

ಶ್ರೀನಿವಾಸ ಡಿ. ಶೆಟ್ಟಿ
ಶಿಕ್ಷಣ ಸಂಯೋಜಕರು ಬಿಇಒ ಕಚೇರಿ, ಅರಕಲಗೂಡು

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿಯ ಆಂಗ್ಲಮಾಧ್ಯಮದ ‘ಟ್ರೈಆ್ಯಂಗಲ್’ ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3IBnQvA

ಮಾತೃಕೆಗಳು

ಗಣಿತ

ಪಿಯುಸಿ

ಹಿಂದಿನ ಸಂಚಿಕೆಯಿಂದ...

4) $A = \begin{bmatrix} 5 \\ 4 \\ 3 \end{bmatrix}, B = \begin{bmatrix} 3 \\ -1 \\ 2 \end{bmatrix}$; ಆದರೆ $AB^T \neq A^T B$ ಎಂದು ತೋರಿಸಿ

ಪರಿಹಾರ: ದತ್ತ $A = \begin{bmatrix} 5 \\ 4 \\ 3 \end{bmatrix}$ and $B = \begin{bmatrix} 3 \\ -1 \\ 2 \end{bmatrix}$

$\therefore B^T = [3 \quad -1 \quad 2]$

$\Rightarrow AB^T = \begin{bmatrix} 5 \\ 4 \\ 3 \end{bmatrix} [3 \quad -1 \quad 2] \downarrow$

$= \begin{bmatrix} 15 & -5 & 10 \\ 12 & -4 & 8 \\ 9 & -3 & 6 \end{bmatrix}$

ಮತ್ತು $A^T = [5 \quad 4 \quad 3]$

$\Rightarrow A^T B = [5 \quad 4 \quad 3] \begin{bmatrix} 3 \\ -1 \\ 2 \end{bmatrix} \downarrow$

$= [15 - 4 + 6] = [17]$

ಹೀಗಾಗಿ $AB^T \neq A^T B$

5) $A = \begin{bmatrix} 5 & -3 \\ -1 & 2 \end{bmatrix}$ and $B = \begin{bmatrix} -2 & -1 \\ 4 & 7 \end{bmatrix}$; ಆದರೆ $AB \neq BA$ ಎಂದು ತೋರಿಸಿ

ಪರಿಹಾರ:-

ದತ್ತ $A = \begin{bmatrix} 5 & -3 \\ -1 & 2 \end{bmatrix}$ & $B = \begin{bmatrix} -2 & -1 \\ 4 & 7 \end{bmatrix}$

$\therefore AB = \begin{bmatrix} 5 & -3 \\ -1 & 2 \end{bmatrix} \times \begin{bmatrix} -2 & -1 \\ 4 & 7 \end{bmatrix}$

$AB = \begin{bmatrix} -10-12 & -5-21 \\ 2+8 & 1+14 \end{bmatrix} = \begin{bmatrix} -22 & -26 \\ 10 & 15 \end{bmatrix}$

$BA = \begin{bmatrix} -2 & -1 \\ 4 & 7 \end{bmatrix} \times \begin{bmatrix} 5 & -3 \\ -1 & 2 \end{bmatrix}$

$BA = \begin{bmatrix} -10+1 & 6-2 \\ 20-7 & -12+14 \end{bmatrix} = \begin{bmatrix} -9 & 4 \\ 13 & 2 \end{bmatrix}$

$\begin{bmatrix} -22 & -26 \\ 10 & 15 \end{bmatrix} \neq \begin{bmatrix} -9 & 4 \\ 13 & 2 \end{bmatrix}$

$\therefore AB \neq BA$

6. $A = \begin{bmatrix} 0 & c & -b \\ -c & 0 & a \\ b & -a & 0 \end{bmatrix}$ & $B = \begin{bmatrix} a^2 & ab & ac \\ ab & b^2 & bc \\ ac & bc & c^2 \end{bmatrix}$; ಆದರೆ AB ಶೂನ್ಯ ಮಾತೃಕೆ ಎಂದು ತೋರಿಸಿ

ಪರಿಹಾರ:- $AB = \begin{bmatrix} 0 & c & -b \\ -c & 0 & a \\ b & -a & 0 \end{bmatrix} \times \begin{bmatrix} a^2 & ab & ac \\ ab & b^2 & bc \\ ac & bc & c^2 \end{bmatrix}$

$\Rightarrow \begin{bmatrix} 0+abc-abc & 0+b^2c-b^2c & 0+bc^2-bc^2 \\ -a^2c+0+a^2c & -abc+0+abc & -ac^2+0+ac^2 \\ a^2b-a^2b+0 & -ab^2-ab^2+0 & abc-abc+0 \end{bmatrix}$

$\Rightarrow \begin{bmatrix} 0 & 0 & 0 \\ 0 & 0 & 0 \\ 0 & 0 & 0 \end{bmatrix} \Rightarrow$ zero matrix

AB ಶೂನ್ಯ ಮಾತೃಕೆಯಾಗಿದೆ.

7) $A = \begin{bmatrix} 3 & 1 \\ 2 & 5 \end{bmatrix}$ ಆದರೆ $A^2 - 8A + 13I = 0$ ಎಂದು ತೋರಿಸಿ

ಪರಿಹಾರ:- $A = \begin{bmatrix} 3 & 1 \\ 2 & 5 \end{bmatrix}$ ದತ್ತ

$A^2 = A \times A = \begin{bmatrix} 3 & 1 \\ 2 & 5 \end{bmatrix} \begin{bmatrix} 3 & 1 \\ 2 & 5 \end{bmatrix}$

$= \begin{bmatrix} 9+2 & 3+5 \\ 6+10 & 2+25 \end{bmatrix} = \begin{bmatrix} 11 & 8 \\ 16 & 27 \end{bmatrix}$

$8A = 8 \begin{bmatrix} 3 & 1 \\ 2 & 5 \end{bmatrix} = \begin{bmatrix} 24 & 8 \\ 16 & 40 \end{bmatrix}$

$13I = 13 \begin{bmatrix} 1 & 0 \\ 0 & 1 \end{bmatrix} = \begin{bmatrix} 13 & 0 \\ 0 & 13 \end{bmatrix}$

$\therefore A^2 - 8A + 13I$

$= \begin{bmatrix} 11 & 8 \\ 16 & 27 \end{bmatrix} - \begin{bmatrix} 24 & 8 \\ 16 & 40 \end{bmatrix} + \begin{bmatrix} 13 & 0 \\ 0 & 13 \end{bmatrix}$

$= \begin{bmatrix} 11-24+13 & 8-8+0 \\ 16-16+0 & 27-40+13 \end{bmatrix} = \begin{bmatrix} 0 & 0 \\ 0 & 0 \end{bmatrix}$

Hence $A^2 - 8A + 13I = 0$

8) $A = \begin{bmatrix} \sqrt{3} & 1 & -1 \\ 2 & 3 & 0 \end{bmatrix}$ & $B = \begin{bmatrix} 2 & \sqrt{5} & 1 \\ -2 & 3 & \frac{1}{2} \end{bmatrix}$ ಆದರೆ A + B ಕಂಡುಹಿಡಿಯಿರಿ

ಪರಿಹಾರ: A ಮತ್ತು B ಗಳ ದರ್ಜೆಯ 2×3, ಒಂದೇ ಆದ್ದರಿಂದ, A + B ಯನ್ನು ಕಂಡುಹಿಡಿಯಬಹುದು ಹಾಗೂ ಅದು ಕೆಳಗಿನಂತಿರುತ್ತದೆ

$A+B = \begin{bmatrix} 2+\sqrt{3} & 1+\sqrt{5} & 1-1 \\ 2-2 & 3+3 & 0+\frac{1}{2} \end{bmatrix} = \begin{bmatrix} 2+\sqrt{3} & 1+\sqrt{5} & 0 \\ 0 & 6 & \frac{1}{2} \end{bmatrix}$

9) $A = \begin{bmatrix} 1 & 2 & 3 \\ 2 & 3 & 1 \end{bmatrix}$ & $B = \begin{bmatrix} 3 & -1 & 3 \\ -1 & 0 & 2 \end{bmatrix}$ ಆದರೆ (2A – B)ಯನ್ನು ಕಂಡುಹಿಡಿಯಿರಿ

ಪರಿಹಾರ:-

$2A - B = 2\begin{bmatrix} 1 & 2 & 3 \\ 2 & 3 & 1 \end{bmatrix} - \begin{bmatrix} 3 & -1 & 3 \\ -1 & 0 & 2 \end{bmatrix}$

$= \begin{bmatrix} 2 & 4 & 6 \\ 4 & 6 & 2 \end{bmatrix} + \begin{bmatrix} -3 & 1 & -3 \\ 1 & 0 & -2 \end{bmatrix}$

$= \begin{bmatrix} 2-3 & 4+1 & 6-3 \\ 4+1 & 6+0 & 2-2 \end{bmatrix} = \begin{bmatrix} -1 & 5 & 3 \\ 5 & 6 & 0 \end{bmatrix}$

(ಮುಂದುವರಿಯುವುದು......)


ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಗಣಿತಶಾಸ್ತ್ರದ ‘ಡಿಟರ್ಮಿನೆಂಟ್ಸ್’ ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3rRnLx4

ಗಣರಾಜ್ಯೋತ್ಸವ: ದೂರದರ್ಶನದಲ್ಲಿ ಬೆಳಿಗ್ಗೆ 9.15ರಿಂದ ನೇರಪ್ರಸಾರ

ರಾಜಪಥದಲ್ಲಿ ಬಿಗಿ ಭದ್ರತೆ

ಪ್ರಜಾವಾಣಿ ವಾರ್ತೆ



73ನೇ ಗಣರಾಜ್ಯೋತ್ಸವದ ಮುನ್ನಾ ದಿನವಾದ ಮಂಗಳವಾರ ವಿಧಾನಸೌಧವು ವಿದ್ಯುದ್ದೀಪಗಳಿಂದ ಝಗಮಗಿಸುತ್ತಿತ್ತು ಪ್ರಜಾವಾಣಿ ಚಿತ್ರ/ ಅನೂಪ್ ರಾಘ್ ಟಿ.

ನವದೆಹಲಿ: ಬುಧವಾರ ಬೆಳಿಗ್ಗೆ ರಾಜಪಥದಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಕಾರ್ಯಕ್ರಮ ಹಾಗೂ ಪಥ ಸಂಚಲನಕ್ಕೆ ಸಕಲ ಸಿದ್ಧತೆಗಳು ನಡೆದಿದ್ದು, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ.

ಪಥ ಸಂಚಲನ, ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳ ಮೆರವಣಿಗೆ ಹಾಗೂ ನೃತ್ಯ ವೈಭವವನ್ನು ಒಳಗೊಂಡ ಮೂರು ಗಂಟೆಗೂ ಅಧಿಕ ಅವಧಿಯ ಕಾರ್ಯಕ್ರಮವನ್ನು ಸೆರೆ ಹಿಡಿದು ದೂರದರ್ಶನದಲ್ಲಿ ನೇರ ಪ್ರಸಾರ ಮಾಡಲು ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್ ಹಿಂಭಾಗದಲ್ಲಿರುವ ರಾಷ್ಟ್ರೀಯ ಯುದ್ಧ ಸ್ಮಾರಕದವರೆಗೆ ಅಂದಾಜು 2 ಕಿಲೋಮೀಟರ್ ವ್ಯಾಪ್ತಿಯಲ್ಲಿ ಅತ್ಯಾಧುನಿಕ ಮಾದರಿಯ ಒಟ್ಟು 59 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

ಚಿತ್ರೀಕರಣ ಕಾರ್ಯಕ್ಕಾಗಿ 160ಕ್ಕೂ ಅಧಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಈ 59 ಕ್ಯಾಮೆರಾಗಳ ಪೈಕಿ 33 ಕ್ಯಾಮೆರಾಗಳನ್ನು ರಾಜಪಥದಲ್ಲಿ ಅಳವಡಿಸಲಾಗಿದ್ದರೆ, ರಾಷ್ಟ್ರೀಯ ಯುದ್ಧ ಸ್ಮಾರಕದ ಬಳಿ 16 ಹಾಗೂ ಇಂಡಿಯಾ ಗೇಟ್, ರಾಷ್ಟ್ರೀಯ ಕ್ರೀಡಾಂಗಣ ಹಾಗೂ ರಾಷ್ಟ್ರಪತಿ ಭವನದ ಬಳಿ 10 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆ ಅಂಗವಾಗಿ ಭಾರತೀಯ ವಾಯುಪಡೆಯು ರಾಜಪಥದಲ್ಲಿ 75 ವಿಶಿಷ್ಟ ವಿಮಾನಗಳ ಹಾರಾಟ ವ್ಯವಸ್ಥೆಯನ್ನೂ ಮಾಡುತ್ತಿದ್ದು, ಈ ವೈಮಾನಿಕ ಪ್ರದರ್ಶನದ ನೇರ ಪ್ರಸಾರಕ್ಕಾಗಿ ವಾಯುಪಡೆಯ ಸಹಯೋಗದಲ್ಲೇ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಕ್ರಮದ ವಿಹಂಗಮ ನೋಟವನ್ನು (360 ಡಿಗ್ರಿ) ಸೆರೆ ಹಿಡಿಯಲೆಂದೇ ಎರಡು ಅತ್ಯಾಧುನಿಕ ಕ್ಯಾಮೆರಾಗಳನ್ನು ಬಳಸಲಾಗುತ್ತಿದೆ. ಈ ಪೈಕಿ ಒಂದನ್ನು ರಾಜಪಥದಲ್ಲಿ, ಇನ್ನೊಂದನ್ನು ಇಂಡಿಯಾ ಗೇಟ್‌ನ ಮೇಲ್ಭಾಗದಲ್ಲಿ ಅಳವಡಿಸಲಾಗಿದೆ.

ರಾಷ್ಟ್ರೀಯ ಯುದ್ಧ ಸ್ಮಾರಕ ಮತ್ತು ಇಂಡಿಯಾ ಗೇಟ್ ಬಳಿಯ ದೃಶ್ಯಾವಳಿಗಳನ್ನು ಸೆರೆ ಹಿಡಿಯಲು 120 ಅಡಿ ಎತ್ತರದ ಹೈಡ್ರಾಲಿಕ್ ಕ್ರೇನ್‌ನಲ್ಲಿ ಕ್ಯಾಮೆರಾ ಅಳವಡಿಸಲಾಗಿದೆ. ಅಲ್ಲದೆ, ವಿಶೇಷ ರಿಮೋಟ್ ನಿಯಂತ್ರಿತ ಕ್ಯಾಮೆರಾಗಳನ್ನು ರಾಷ್ಟ್ರಪತಿ ಭವನದ ಆವರಣ ಹಾಗೂ ರಾಜಪಥದಲ್ಲಿ ಅಳವಡಿಸಲಾಗಿದೆ.

ಮುಖ್ಯಾಂಶಗಳು

- ದೆಹಲಿಯಲ್ಲಿ ಬಿಗಿ ಭದ್ರತಾ ವ್ಯವಸ್ಥೆ
- ಪಥ ಸಂಚಲನ, ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳ ಮೆರವಣಿಗೆ

ಇಬ್ಬರು ಶಸ್ತ್ರಾಸ್ತ್ರ ಪೂರೈಕೆದಾರರ ಬಂಧನ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವಕ್ಕೆ ಸಿದ್ಧತೆ ನಡೆದಿರುವ ಬೆನ್ನಲ್ಲೇ ಶಸ್ತ್ರಾಸ್ತ್ರ ಕಳ್ಳಸಾಗಣೆಯಲ್ಲಿ ತೊಡಗಿದ್ದ ಆರೋಪದಲ್ಲಿ ದೆಹಲಿ ಪೊಲೀಸರ ವಿಶೇಷ ದಳ ಇಬ್ಬರು ಆರೋಪಿಗಳನ್ನು ಬಂಧಿಸಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಬಂಧಿತರನ್ನು ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಜಿಲ್ಲೆಯ ನಿವಾಸಿ ರವಿ ಖಾನ್ (40) ಮತ್ತು ಮಧ್ಯ ಪ್ರದೇಶದ ಧಾರ್ ಜಿಲ್ಲೆಯ ನಿವಾಸಿ ರಾಹುಲ್ ಸಿಂಗ್ ಛಬ್ಡಾ (23) ಎಂದು ಗುರುತಿಸಲಾಗಿದೆ.

ಕೋವಿಡ್: ದೃಢ ಪ್ರಮಾಣ 6 ಜಿಲ್ಲೆಗಳಲ್ಲಿ ಅಧಿಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದೊಂದು ವಾರದಿಂದ ಬೆಂಗಳೂರಿನ ಜೊತೆಗೆ ಅನ್ಯ ಜಿಲ್ಲೆಗಳಲ್ಲಿಯೂ ಅಧಿಕ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಆರು ಜಿಲ್ಲೆಗಳಲ್ಲಿ ಸೋಂಕು ದೃಢ ಪ್ರಮಾಣ ರಾಜ್ಯದ ಸರಾಸರಿಗಿಂತ ಹೆಚ್ಚಿದೆ.

ರಾಜ್ಯದಲ್ಲಿ ವರದಿಯಾದ 7 ದಿನಗಳ ಪ್ರಕರಣಗಳನ್ನು ಆಧರಿಸಿ ಕೋವಿಡ್ ವಾರ್ ರೂಮ್ ವಿಶ್ಲೇಷಣೆ ಮಾಡಿದೆ. ಈ ಅವಧಿಯಲ್ಲಿ ರಾಜ್ಯದ ದೈನಂದಿನ ಸರಾಸರಿ ಶೇ 22.65 ರಷ್ಟಿದೆ. ಮೈಸೂರಿನಲ್ಲಿ ಗರಿಷ್ಠ (ಶೇ 37.92) ಪ್ರಮಾಣದಲ್ಲಿ ಸೋಂಕು ದೃಢಪಟ್ಟಿದ್ದರೆ, ಬಾಗಲಕೋಟೆಯಲ್ಲಿ (ಶೇ 5.31) ಕನಿಷ್ಠ ಪ್ರಮಾಣದಲ್ಲಿ ಸೋಂಕು ಖಚಿತಪಟ್ಟಿದೆ.

ರಾಜ್ಯದಲ್ಲಿ ಜನವರಿ ಮೊದಲ ವಾರದಿಂದ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. 12 ಜಿಲ್ಲೆಗಳಲ್ಲಿ ದೃಢ ಪ್ರಮಾಣ ಶೇ 20ಕ್ಕಿಂತ ಅಧಿಕವಿದೆ.

ತುಮಕೂರು (ಶೇ 33.57), ಮಂಡ್ಯ (ಶೇ 31.53), ಹಾಸನ (ಶೇ 30.36) ಬೆಂಗಳೂರು ನಗರ (ಶೇ 25.81) ಹಾಗೂ ಬಳ್ಳಾರಿಯಲ್ಲಿ (ಶೇ 23.42) ಹೆಚ್ಚಿನ ಪ್ರಮಾಣದಲ್ಲಿ ಸೋಂಕು ದೃಢಪಡುತ್ತಿದೆ. ಹಾವೇರಿ (ಶೇ 6.58), ಯಾದಗಿರಿ (ಶೇ 6.65), ವಿಜಯಪುರ (ಶೇ 9.27) ಹಾಗೂ ದಕ್ಷಿಣ ಕನ್ನಡ (ಶೇ 9.76) ಜಿಲ್ಲೆಯಲ್ಲಿ ದೃಢ ಪ್ರಮಾಣ ಕಡಿಮೆಯಿದೆ. ರಾಜ್ಯದಲ್ಲಿ ಈ ತಿಂಗಳ ಮೊದಲ ವಾರ ಹೊಸ ಪ್ರಕರಣಗಳ ಸಂಖ್ಯೆ 5 ಸಾವಿರದ ಗಡಿಯ ಆಸುಪಾಸಿನಲ್ಲಿತ್ತು. ಸೋಂಕು ದೃಢ ಪ್ರಮಾಣ ಶೇ 5ರೊಳಗಿತ್ತು. ಈಗ ನಿತ್ಯದ ಪ್ರಕರಣಗಳ ಸಂಖ್ಯೆ 50 ಸಾವಿರದವರೆಗೂ ಏರಿಕೆ ಕಂಡಿದೆ. ದೃಢ ಪ್ರಮಾಣವೂ ಶೇ 30ರ ಗಡಿ ದಾಟಿದೆ.

ದೇಶದಲ್ಲಿ 2.55 ಲಕ್ಷ ಹೊಸ ಪ್ರಕರಣ ಪತ್ತೆ

ನವದೆಹಲಿ: ದೇಶದಲ್ಲಿ ಸತತ ಐದು ದಿನಗಳ ಕಾಲ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ 3 ಲಕ್ಷದ ಗಡಿ ದಾಟಿತ್ತು. ಆದರೆ, ಮಂಗಳವಾರ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಕಂಡು ಬಂದಿದೆ.

ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 2,55,874 ಹೊಸ ಪ್ರಕರಣಗಳು ವರದಿಯಾಗಿದ್ದು, ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 3,97,99,202ಕ್ಕೆ ಏರಿದಂತಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.


614 ಜನರು ಮೃತಪಟ್ಟಿದ್ದು, ಕೋವಿಡ್‌ನಿಂದಾಗಿ ಮೃತಪಟ್ಟವರ ಸಂಖ್ಯೆ 4,90,462ಕ್ಕೆ ಏರಿದಂತಾ ಗಿದೆ. ದೇಶದಲ್ಲಿನ ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲೂ ಇಳಿಕೆ ಕಂಡು ಬಂದಿದ್ದು, ಸದ್ಯ 22,36,842 ಪ್ರಕರಣಗಳಿವೆ. ಇವು ಒಟ್ಟು ಪ್ರಕರಣ ಗಳ ಶೇ 5.62ರಷ್ಟು ಎಂದೂ ಸಚಿವಾಲಯ ತಿಳಿಸಿದೆ.

38 ವಿದ್ಯಾರ್ಥಿಗಳಿಗೆ ಕೋವಿಡ್ ದೃಢ

ಮದ್ದೂರು (ಮಂಡ್ಯ): ತಾಲ್ಲೂಕಿನ ಕೆ.ಹೊನ್ನಲಗೆರೆಯ ಸರ್ಕಾರಿ ಜೂನಿಯರ್ ಕಾಲೇಜಿನ ಪ್ರೌಢಶಾಲಾ ವಿಭಾಗದ 38 ವಿದ್ಯಾರ್ಥಿಗಳಿಗೆ ಮಂಗಳವಾರ ಕೋವಿಡ್ ದೃಢಪಟ್ಟಿದೆ. ಕೋವಿಡ್ ಲಕ್ಷಣಗಳು ಕಾಣಿಸಿಕೊಂಡಿದ್ದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಗಿತ್ತು.

ಕಳವಿಗೆ ಹೋಗದಂತೆ ತಡೆದ ತಂದೆಯನ್ನು ಕೊಂದ ಮಗ

ಪ್ರಜಾವಾಣಿ ವಾರ್ತೆ



ಗುಡ್ಲು ಮಲ್ಲಯ್ಯ



ಲೋಕೇಶ

ನಾಯಕನಹಟ್ಟಿ (ಚಿತ್ರದುರ್ಗ): ಕಳವು ಮಾಡಲು ಹೋಗುತ್ತಿದ್ದ ಮಗನನ್ನು ತಡೆಯಲು ಮುಂದಾದ ತಂದೆಯನ್ನು ಒದ್ದು ಕೊಲೆ ಮಾಡಿದ ಪ್ರಕರಣ ನಾಯಕನಹಟ್ಟಿ ಹೋಬಳಿಯ ಮಲ್ಲೂರಹಳ್ಳಿ ಭರಮಸಾಗರ ಕಪಿಲೆಯಲ್ಲಿ ಸೋಮವಾರ ಮಧ್ಯೆ ರಾತ್ರಿ ನಡೆದಿದೆ.

ಗುಡ್ಲು ಮಲ್ಲಯ್ಯ (70) ಹತ್ಯೆಗೀಡಾದವರು. ಮಗ ಲೋಕೇಶ (28) ಕೃತ್ಯವೆಸಗಿದ ಆರೋಪಿ.

ಲೋಕೇಶ ಹಲವು ದಿನಗಳಿಂದ ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಈ ಬಗ್ಗೆ ನಾಯಕನಹಟ್ಟಿ, ತಳಕು ಪೊಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾಗಿದ್ದವು. ಇದರಿಂದ ಇಡೀ ಕುಟುಂಬ ತಲೆತಗ್ಗಿಸುವ ಸನ್ನಿವೇಶ ಎದು ರಾಗಿತ್ತು. 'ಕಳವು ಮಾಡಬೇಡ ಎಂದು ಕುಟುಂಬದ ಎಲ್ಲ ಸದಸ್ಯರು ಹಲವು ಬಾರಿ ಬುದ್ಧಿವಾದ ಹೇಳಿದರೂ ಲೋಕೇಶ ಕೃತ್ಯವೆಸಗುವುದನ್ನು ಬಿಟ್ಟಿರಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ರಾತ್ರಿ ಇದೇ ವಿಷಯಕ್ಕೆ ತಂದೆ ಮತ್ತು ಮಗನ ಮಧ್ಯೆ ಮಾತಿನ ಚಕಮಕಿ ನಡೆದಿದೆ. ಹಗ್ಗದಿಂದ ಮಗನ ಕೈಕಾಲುಗಳನ್ನು ಕಟ್ಟಿಹಾಕಿದರೆ ಎಲ್ಲಿಯೂ ಹೋಗುವುದಿಲ್ಲ ಎಂದು ತಿಳಿದ ಮಲ್ಲಯ್ಯ ಹಗ್ಗ ಹಿಡಿದು ಕೈಕಾಲು ಕಟ್ಟಲು ಮುಂದಾದರು. ಈ ವೇಳೆ ಲೋಕೇಶನು ಕಾಲಿನಿಂದ ಜೋರಾಗಿ ಗುಡ್ಲುಮಲ್ಲಯ್ಯನ ಹೊಟ್ಟೆಗೆ ಒದ್ದಿದ್ದಾನೆ. ಒದ್ದ ರಭಸಕ್ಕೆ ಹಿಂದಕ್ಕೆ ಬಿದ್ದು ಗುಡ್ಲುಮಲ್ಲಯ್ಯ ಸ್ಥಳದಲ್ಲಿ ಮೃತಪಟ್ಟರು. ಇದರಿಂದ ಗಾಬರಿಗೊಂಡ ಮನೆಯ ಇತರೆ ಸದಸ್ಯರು ಲೋಕೇಶನನ್ನು ಹಿಡಿದು ಮರಕ್ಕೆ ಕಟ್ಟಿಹಾಕಿ ಮಂಗಳವಾರ ಬೆಳಿಗ್ಗೆ ನಾಯಕನಹಟ್ಟಿ ಪೊಲೀಸರಿಗೆ ಮಾಹಿತಿ ನೀಡಿದರು.

ಅಪಘಾತ: 7 ವೈದ್ಯ ವಿದ್ಯಾರ್ಥಿಗಳ ಸಾವು

ಮುಂಬೈ: ಮಹಾರಾಷ್ಟ್ರದ ವಾರ್ಧಾ ಜಿಲ್ಲೆಯ ಸೆಲ್ಸುರಾ ಎಂಬಲ್ಲಿ ಸೇತುವೆಯಿಂದ ಎಸ್‌ಯುವಿಯೊಂದು ಬಿದ್ದ ಪರಿಣಾಮ ಮಂಗಳವಾರ ಏಳು ಜನ ವೈದ್ಯಕೀಯ ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ.

ವಿಷ್ಕರ್ ರಹಾಂಗಡಾಲೆ ಹಾಗೂ ಉತ್ತರ ಪ್ರದೇಶದವರಾದ ನೀರಜ್ ಚೌಹಾಣ್, ಪ್ರತ್ಯುಷ್ ಸಿಂಗ್, ಶುಭಂ ಜೈಸ್ವಾಲ್, ಬಿಹಾರ ಮೂಲದ ವಿವೇಕ್ ನಂದನ್ ಮತ್ತು ಪವನ್ ಶಕ್ತಿ ಹಾಗೂ ಒಡಿಶಾದ ನಿತೀಶ್‌ಕುಮಾರ್ ಸಿಂಗ್ ಮೃತಪಟ್ಟವರು. ವಿಷ್ಕರ್, ತಿರೋಡಾ ಕ್ಷೇತ್ರದ ಬಿಜೆಪಿ ಶಾಸಕ ವಿಜಯ್ ರಹಾಂಗಡಾಲೆ ಅವರ ಪುತ್ರ.

'ಮೃತರೆಲ್ಲರೂ ವಾರ್ಧಾದ ಜವಾಹರಲಾಲ್ ನೆಹರೂ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು' ಎಂದು ಎಸ್.ಪಿ ಪ್ರಶಾಂತ್ ಹೋಳ್ಕರ್ ತಿಳಿಸಿದ್ದಾರೆ.



ಸುಭಾಷಿತ

ಒಳ್ಳೆಯದಕ್ಕಾಗಿ ಹೋರಾಟ ಮಾಡಿದಾಗ ಮಾತ್ರ ಮನುಷ್ಯನು ಮಹಾದೇವನಾಗಲು ಸಾಧ್ಯ.

-ಅಮಿಶ್ ತ್ರಿಪಾಠಿ

ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಸ್ಥಗಿತ ರೈತರನ್ನು ಸಂಕಷ್ಟಕ್ಕೆ ದೂಡುವ ನಿರ್ಧಾರ

ಕಳೆದ ವರ್ಷದ ಮುಂಗಾರು ಹಾಗೂ ನಂತರದ ದಿನಗಳಲ್ಲಿ ಚೆನ್ನಾಗಿ ಸುರಿದ ಮಳೆ ಕೃಷಿ ಬದುಕನ್ನು ಚಿಗುರಿಸಿತ್ತು. ಆದರೆ, ಹಿಂಗಾರಿನಲ್ಲಿ ಬಿಡದೇ ಕಾಡಿದ ಅತಿವೃಷ್ಟಿಯಿಂದ ಜಮೀನಿನಲ್ಲಿದ್ದ ಬಹುಪಾಲು ಫಸಲು ಕಣಜ ಸೇರದೆ ನೀರುಪಾಲಾಗಿದ್ದು ಸುಳ್ಳಲ್ಲ. ಇಂಥ ವೈರುಧ್ಯಗಳ ನಡುವೆಯೂ ರಾಜ್ಯದಲ್ಲಿ ಸುಮಾರು ನಾಲ್ಕೂವರೆ ಲಕ್ಷ ಟನ್‌ಗಳಷ್ಟು ರಾಗಿ ಫಸಲು ಬರುವ ಅಂದಾಜು ಮಾಡಲಾಗಿತ್ತು. ಇಳುವರಿ ಹೆಚ್ಚಾಗುತ್ತಿದ್ದಂತೆ ಮಾರುಕಟ್ಟೆಯಲ್ಲಿ ರಾಗಿಯ ದರ ಕುಸಿಯಿತು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ಜನವರಿ 1ರಿಂದ ರಾಗಿ ಖರೀದಿ ಪ್ರಕ್ರಿಯೆ ಆರಂಭಿಸಿದವು. ಕ್ವಿಂಟಲ್ ರಾಗಿಗೆ ₹ 3,377 ದರ ನಿಗದಿಪಡಿಸಿ, ಒಂದು ಎಕರೆಗೆ 10 ಕ್ವಿಂಟಲ್‌ನಂತೆ, ಪ್ರತೀ ರೈತನಿಂದ ಗರಿಷ್ಠ 20 ಕ್ವಿಂಟಲ್ ಖರೀದಿಸುವುದಾಗಿ ರಾಜ್ಯ ಸರ್ಕಾರ ಪ್ರಕಟಿಸಿತು. ರಾಗಿ ಬೆಳೆದವರಿಗೆ ನೋಂದಣಿ ಮಾಡಿಸಿಕೊಳ್ಳುವಂತೆಯೂ ಸೂಚಿಸಿತ್ತು. ನೋಂದಣಿ ಸೇರಿ ಎಲ್ಲ ಪ್ರಕ್ರಿಯೆಗಳು ಸರಾಗವಾಗಿ ಸಾಗುತ್ತಿರುವಾಗಲೇ, ಬೆಂಬಲ ಬೆಲೆಯಡಿ ರಾಗಿ ಖರೀದಿಸುವ ಪ್ರಮಾಣವನ್ನು ಈ ವರ್ಷ 2.10 ಲಕ್ಷ ಟನ್‌ಗೆ ಸೀಮಿತಗೊಳಿಸಲು ಸರ್ಕಾರ ನಿರ್ಧರಿಸಿದೆ. ಆ ಮಿತಿ ತಲುಪಿದ್ದರಿಂದ ಸದ್ಯ ರಾಗಿ ಖರೀದಿಯ ನೋಂದಣಿ ಪ್ರಕ್ರಿಯೆ ಸ್ಥಗಿತಗೊಂಡಿದೆ. ಈವರೆಗೆ ನೋಂದಣಿ ಮಾಡಿಸಿದವರಿಂದ ಮಾತ್ರ ರಾಗಿ ಖರೀದಿಸುವುದಾಗಿ ಅಧಿಕಾರಿಗಳು ಹೇಳುತ್ತಿರುವ ಕುರಿತು ಮಾಧ್ಯಮಗಳಲ್ಲಿ ವರದಿಯಾಗಿದೆ. ಸಂಕಷ್ಟದಲ್ಲಿರುವ ರೈತರ ನೆರವಿಗೆ ಬರಬೇಕಿದ್ದ ಸರ್ಕಾರ, ಇಂತಹ ನಿಲುವು ತಾಳಿರುವುದು ಆಶ್ಚರ್ಯ ಉಂಟುಮಾಡಿದೆ. ರಾಗಿ ಬೆಳೆದವರು ಇದರಿಂದಾಗಿ ತೀವ್ರ ಆಘಾತ ಅನುಭವಿಸುತ್ತಿದ್ದಾರೆ. ಈ ಹಿಂದೆ ರಾಗಿ ಖರೀದಿ ಮೇಲೆ ಇಂತಹ ಮಿತಿ ವಿಧಿಸಿರಲಿಲ್ಲ. ಆಹಾರ ಭದ್ರತೆಯ ದೃಷ್ಟಿಯಿಂದ ರಾಗಿ, ಭತ್ತದಂತಹ ಆಹಾರ ಧಾನ್ಯಗಳನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವಾಗ ನಿರ್ಬಂಧ ವಿಧಿಸುವುದು ತರವಲ್ಲ ಎನ್ನುವುದು ಈ ಕ್ಷೇತ್ರದ ತಜ್ಞರ ಅಭಿಪ್ರಾಯ. ಬೆಂಬಲ ಬೆಲೆಯಲ್ಲಿ ರಾಗಿಯನ್ನು ಖರೀದಿಸದೇ ಹೋದರೆ ರೈತರು ತಾವು ಬೆಳೆದ ಫಸಲನ್ನು ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುವ ಅನಿವಾರ್ಯ ಸೃಷ್ಟಿಯಾಗುತ್ತದೆ. ಅಪರೂಪಕ್ಕೆ ಉತ್ತಮ ಫಸಲು ಕಂಡಿರುವ ರೈತರು, ಕಡಿಮೆ ಬೆಲೆಗೆ ರಾಗಿ ಮಾರಿದರೆ, ಬೆಳೆದ ಖರ್ಚೂ ಹುಟ್ಟುವುದಿಲ್ಲ.



> ರಾಗಿ ಖರೀದಿಗೆ ವಿಧಿಸಿರುವ ಮಿತಿಯಿಂದ ಆಗಿರುವ ಅನನುಕೂಲಗಳನ್ನು ಕೇಂದ್ರಕ್ಕೆ ರಾಜ್ಯ ಸರ್ಕಾರ ಮನವರಿಕೆ ಮಾಡಿಕೊಡಬೇಕು. ಈ ಮಿತಿಯನ್ನು ತೆರವುಗೊಳಿಸಲು ಕೇಂದ್ರದ ಮೇಲೆ ಒತ್ತಡ ಹೇರಬೇಕು

ರಾಗಿ ಹೆಚ್ಚಾಗಿ ಬೆಳೆಯುವ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ತುಮಕೂರು, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಚಾಮರಾಜನಗರ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಫಸಲು ತಕ್ಕಮಟ್ಟಿಗೆ ಉತ್ತಮವಾಗಿದೆ. ಲಾಕ್‌ಡೌನ್ ಮತ್ತಿತರ ಕಾರಣಗಳಿಂದಾಗಿ ನಗರ ಬಿಟ್ಟು ಹಳ್ಳಿ ಸೇರಿರುವ ಅನೇಕ ಯುವಕರು ಕೃಷಿಯತ್ತ ಒಲವು ತೋರಿದ್ದು ರಾಗಿ ಉತ್ಪಾದನೆ ಹೆಚ್ಚಲು ಕಾರಣವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಬೆಂಬಲ ಬೆಲೆಯಡಿ ರಾಗಿ ಖರೀದಿ ಮೇಲೆ ಮಿತಿ ವಿಧಿಸುವಂತಹ ಕ್ರಮಕ್ಕೆ ಸರ್ಕಾರ ಮುಂದಾಗಬಾರದಿತ್ತು. ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಬೆಂಬಲಕ್ಕೆ ನಿಲ್ಲಬೇಕಾಗಿತ್ತು. ಸಾಲ ಮಾಡಿ, ಹವಾಮಾನ ವೈಪರೀತ್ಯ ಎದುರಿಸುತ್ತಾ, ಪರಿಶ್ರಮದೊಂದಿಗೆ ಬೆಳೆ ಬೆಳೆದಿರುವ ರೈತರ ನೆರವಿಗೆ ಧಾವಿಸುವುದು ಸರ್ಕಾರದ ಆದ್ಯ ಕರ್ತವ್ಯ.

ರಾಗಿ ಖರೀದಿಗೆ ವಿಧಿಸಿರುವ ಮಿತಿಯನ್ನು ತಕ್ಷಣ ತೆರವುಗೊಳಿಸಲು ರಾಜ್ಯ ಸರ್ಕಾರ ಎಲ್ಲ ರೀತಿಯಲ್ಲೂ ಪ್ರಯತ್ನಿಸಬೇಕು. ಇದರಿಂದ ಆಗಿರುವ ಅನನುಕೂಲಗಳನ್ನು ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕು. ರೈತರ ಆದಾಯ ದ್ವಿಗುಣ ಮಾಡುವುದಾಗಿ ಹೇಳುವ ಕೇಂದ್ರ ಸರ್ಕಾರ, ಕೃಷಿಕರ ಕನಿಷ್ಠ ವರಮಾನಕ್ಕೂ ಸಂಚಕಾರ ತರುವಂತಹ ಇಂತಹ ಅಪಕ್ವ ನಿರ್ಧಾರಗಳನ್ನು ಮಾಡಬಾರದು. ಸಂಕಷ್ಟದಲ್ಲಿರುವ ರೈತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಸಕಾರಾತ್ಮಕವಾಗಿ ಸ್ಪಂದಿಸಬೇಕು. ಸ್ಥಗಿತಗೊಳಿಸಿರುವ ನೋಂದಣಿ ಪ್ರಕ್ರಿಯೆಯನ್ನು ಮತ್ತೆ ಆರಂಭಿಸಬೇಕು. ರಾಜ್ಯ ಸರ್ಕಾರ ಕೂಡ, ಅಗತ್ಯಬಿದ್ದರೆ ಸರ್ವಪಕ್ಷಗಳ ನಿಯೋಗದೊಂದಿಗೆ ದೆಹಲಿಗೆ ತೆರಳಿ ಕೇಂದ್ರದ ಮೇಲೆ ಒತ್ತಡ ಹೇರಬೇಕು. ಒಂದೊಮ್ಮೆ ರಾಜ್ಯ ಸರ್ಕಾರ ಈಗ ರಾಗಿ ಬೆಳೆಗಾರರ ನೆರವಿಗೆ ಧಾವಿಸದಿದ್ದರೆ, ಈಗಾಗಲೇ 'ರಾಗಿ ಕೃಷಿ ನಷ್ಟದ ಬಾಬತ್ತು' ಎನ್ನುತ್ತಾ, ಈ ಕೃಷಿಯಿಂದ ಅನೇಕರು ದೂರ ಉಳಿದಿದ್ದು, ಅವರ ಸಂಖ್ಯೆ ಮತ್ತಷ್ಟು ಹೆಚ್ಚಬಹುದು. ಖರ್ಚು ವೆಚ್ಚ-ಮಾರುಕಟ್ಟೆಯ ಕಾರಣಕ್ಕಾಗಿ ರಾಗಿಯ ಹೊಲ, ಭತ್ತದ ಗದ್ದೆಗಳೆಲ್ಲ ಅಡಿಕೆ ತೋಟಗಳಾಗುತ್ತಿವೆ. ಇದು ಭವಿಷ್ಯದಲ್ಲಿ ಆಹಾರ ಭದ್ರತೆಗೆ ಧಕ್ಕೆ ಉಂಟುಮಾಡುವುದರ ಜೊತೆಗೆ, ಜಲಕ್ಷಾಮಕ್ಕೂ ಕಾರಣವಾಗುವ ಸಾಧ್ಯತೆ ಇದೆ. ಹೀಗಾಗಿ ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು, ರಾಗಿ ಬೆಳೆಗಾರರ ನೆರವಿಗೆ ಧಾವಿಸಬೇಕು.

ದಿನದ ಟ್ವೀಟ್



ಬಲಪಡಿಸೋಣ

ನಮ್ಮ ಸಂವಿಧಾನ, ನಮ್ಮ ಸಂಸ್ಥೆಗಳು, ಪ್ರಜಾಪ್ರಭುತ್ವದ ನಮ್ಮ ಸಂಪ್ರದಾಯಗಳು ಮತ್ತು ಬಹುತ್ವದ ಚಿಂತನೆಗೆ ಪೂರಕವಾದ ನಮ್ಮ ಸಹಿಷ್ಣುತೆಯು ನಮ್ಮ ಗಣರಾಜ್ಯದ ಆಧಾರಸ್ತಂಭಗಳು. ಇವುಗಳನ್ನು ಬಲಪಡಿಸುವ ಸಂಕಲ್ಪ ಮಾಡೋಣ. ಕ್ಷಣಿಕ ರಾಜಕೀಯ ಲಾಭಕ್ಕಾಗಿ ನಿರ್ಮಿಸಲಾಗುತ್ತಿರುವ 'ಸಂಕುಚಿತ ಆಂತರಿಕ ಗೋಡೆಗಳನ್ನು' ಒಡೆದುಹಾಕೋಣ. ಗಣರಾಜ್ಯೋತ್ಸವದ ಶುಭಾಶಯಗಳು

ಅನಿಲ್ ಸ್ವರೂಪ್, ಲೇಖಕ, ನಿವೃತ್ತ ಐಎಎಸ್ ಅಧಿಕಾರಿ

ಕಿಡಿನುಡಿ

ಮತದಾನ ಮಾಡುವಾಗ ಭಾವನೆಗಳಿಗೆ ಶರಣಾಗದೆ ನಮ್ಮ ಬುದ್ಧಿಯನ್ನು ಬಳಸೋಣ. ನೀವು ಮಂಗಗಳನ್ನು ಆರಿಸುವುದಾದರೆ, ಸರ್ಕಸ್ ಅನ್ನು ನಿರೀಕ್ಷಿಸಿ. #NationalVotersDay



ರಘೂ ಖಾನ್, ಶಿಕ್ಷಣ ತಜ್ಞ, ವಕೀಲ

25 ವರ್ಷಗಳ ಹಿಂದೆ

ಭಾನುವಾರ, 26-1-1997

• **ಹೊಸ ಪಕ್ಷ: ಹೆಗಡೆ ಇನ್ನೂ ಮೀನ-ಮೇಷ**

ಬೆಂಗಳೂರು, ಜ. 25– ಹಿರಿಯ ರಾಜಕಾರಣಿ ರಾಮಕೃಷ್ಣ ಹೆಗಡೆ ಅವರು ಈಗ ಹೊಸದಾಗಿ ಸ್ಥಾಪಿಸಿರುವ ರಾಷ್ಟ್ರೀಯ ನವ ನಿರ್ಮಾಣ ವೇದಿಕೆ ಮೂಲಕ ತಮ್ಮ ಜನಪ್ರಿಯತೆ ಬಗ್ಗೆ 'ರಾಜಕೀಯ' ಪ್ರಯೋಗ ನಡೆಸುತ್ತಿರುವಂತಿದೆ.

ಎಚ್.ಡಿ.ದೇವೇಗೌಡರು ಪ್ರಧಾನಿಯಾದ ನಂತರ ಹೆಗಡೆಯವರನ್ನು ಜನತಾದಳದಿಂದ ಉಚ್ಚಾಟಿಸಲಾಯಿತು. ಇದಕ್ಕೆ ಬಹಳಷ್ಟು ಮಂದಿ ಬೇಸರ ಹಾಗೂ ಅನುಕಂಪ ವ್ಯಕ್ತಪಡಿಸಿದ್ದರು. ಇಂಥ ಅವಕಾಶ ಉಪಯೋಗಿಸಿಕೊಂಡು ಹೆಗಡೆಯವರು ಹೊಸ ರಾಜಕೀಯ ಪಕ್ಷ ಕಟ್ಟಿ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಆಡಳಿತ ಜನತಾದಳಕ್ಕೆ ವಿಶೇಷವಾಗಿ ದೇವೇಗೌಡರಿಗೆ ಕಿರಿಕಿರಿ ಉಂಟು ಮಾಡುತ್ತಾರೆಂಬ ನಿರೀಕ್ಷೆಯಿತ್ತು. ಆದರೆ, ಯಾವಾಗಲೂ ವಿಭಿನ್ನ ರೀತಿಯಲ್ಲಿ ನಡೆದುಕೊಳ್ಳುವ ಜಾಯಮಾನದ ಹೆಗಡೆ ಅವರು ಎಲ್ಲರ ನಿರೀಕ್ಷೆ ಹುಸಿಗೊಳಿಸಿ ಚುನಾವಣೆಯಿಂದ ಹೊರಗುಳಿದರು. ಅಷ್ಟರಲ್ಲಿ ಸ್ಥಾಪಿಸಿದ್ದ ರಾಷ್ಟ್ರೀಯ ನವ ನಿರ್ಮಾಣ ವೇದಿಕೆ ರಾಜಕೀಯ ಪಕ್ಷವಲ್ಲ ಎಂಬುದನ್ನು ಸ್ಪಷ್ಟಪಡಿಸಿದರು.

• **ಸಚಿವ– ಸಿಬ್ಬಂದಿ ಜಗಳ**

ಬೆಂಗಳೂರು, ಜ. 25– 'ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾದಂತೆ' ಎಂಬ ಗಾದೆಯಂತಾಗಿದೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ (ಸೋರಿಕೆ) ಸಂಸ್ಥೆಯನ್ನೇ ನಂಬಿರುವ ರಾಜ್ಯದ ಲಕ್ಷಾಂತರ ಮಂದಿ ಅಮಾಯಕ ಪ್ರಯಾಣಿಕರ ಪಾಡು.

ಸಾರಿಗೆ ಸಚಿವ ಪಿ.ಜಿ.ಆರ್. ಸಿಂಧ್ಯಾ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕಾರ್ಮಿಕ ಸಂಘಗಳ ಕಲಹ ಪರಾಕಾಷ್ಠೆ ತಲುಪಿದೆ. ಇದು ಆಡಳಿತದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಕಾರ್ಮಿಕ ಸಂಘದಿಂದ ತಮಗೆ ಪ್ರಾಣ ಬೆದರಿಕೆ ಇದೆ ಎಂದು ಸಿಂಧ್ಯಾ ಬಹಿರಂಗವಾಗಿ ಹೇಳಿಕೆ ನೀಡಿ ಪೊಲೀಸ್ ಭದ್ರತೆ ಯಾಚಿಸಿದರೆ, ಸಚಿವರು ಕಾರ್ಮಿಕ ನಾಯಕರ ಬಗ್ಗೆ ಅತ್ಯಂತ ಅಸಹ್ಯವಾಗಿ ಮಾತನಾಡಿದ್ದಾರೆ ಎಂದು ಕಾರ್ಮಿಕ ಸಂಘಗಳು ಪ್ರತ್ಯಾರೋಪ ಮಾಡಿವೆ.

50 ವರ್ಷಗಳ ಹಿಂದೆ

ಬುಧವಾರ, 26-1-1972

• **ದ್ವೇಷ ಬಿಟ್ಟು, ಪರಸ್ಪರ ಏಳಿಗೆಗೆ ಸಹಕರಿಸಲು ಪಾಕಿಸ್ತಾನಕ್ಕೆ ಗಿರಿ ಕರೆ**

ನವದೆಹಲಿ, ಜ. 25– ಭಾರತದ ಬಗ್ಗೆ ದ್ವೇಷಭಾವನೆ ತ್ಯಜಿಸಲು ಪಾಕಿಸ್ತಾನದಲ್ಲಿ ಅಧಿಕಾರದಲ್ಲಿರುವವರಿಗೆ ರಾಷ್ಟ್ರಪತಿ ವಿ.ವಿ. ಗಿರಿ ಅವರು ಇಂದು ರಾತ್ರಿ ಮನವಿ ಮಾಡಿಕೊಂಡರು.

'ನಾವುಗಳು– ಭಾರತದ ಜನ, ಬಾಂಗ್ಲಾ ದೇಶದ ಜನ ಹಾಗೂ ಪಾಕಿಸ್ತಾನದ ಜನ, ಪರಸ್ಪರ ಮೈತ್ರಿ ಹಾಗೂ ಸಹಕಾರ ಬಾಂಧವ್ಯವಿಟ್ಟುಕೊಂಡು ನಮ್ಮೆಲ್ಲ ಜನತೆಯ ಒಟ್ಟಾರೆ ಕಲ್ಯಾಣ ಹಾಗೂ ವಿಶ್ವದಾದ್ಯಂತ ಶಾಂತಿ ಮತ್ತು ಮಾನವೀಯ ಸ್ವಾತಂತ್ರ್ಯ ಸಾಧನೆಗೆ ಶ್ರಮಿಸುವಂತಾಗುವ ದಿನವನ್ನು ಎದುರು ನೋಡೋಣ' ಎಂದು ಅವರು ಗಣರಾಜ್ಯೋತ್ಸವದ ಮುನ್ನಾದಿನ ಆಕಾಶವಾಣಿ ಕಾರ್ಯಕ್ರಮದಲ್ಲಿ ನುಡಿದರು.

• **ರಾಷ್ಟ್ರಪತಿಗೆ 'ಕ್ಷಮೆ ಕೋರಿ' ರಾಜ್ಯಪಾಲರ ಪತ್ರ**

ಬೆಂಗಳೂರು, ಜ. 25– ಕೇಂದ್ರದ ಆರ್ಥಿಕ ನೆರವಿನ ಖೋತಾ ಬಗ್ಗೆ ತಾವು ನೀಡಿದ್ದ ಹೇಳಿಕೆಯಿಂದ ಉಂಟಾಗಿರುವ ತಪ್ಪು ತಿಳಿವಳಿಕೆಯನ್ನು ನಿವಾರಿಸಲು ರಾಜ್ಯಪಾಲರು ಕ್ಷಮೆ ಕೋರಿ ರಾಷ್ಟ್ರಪತಿಗೆ ಪತ್ರ ಬರೆದಿದ್ದಾರೆ. ಕೇಂದ್ರ ಸರ್ಕಾರದ ನೆರವು ಖೋತಾ ಬಗ್ಗೆ ರಾಜ್ಯಪಾಲರು ನೀಡಿದ ಪ್ರತಿಕ್ರಿಯೆಯು ಕೇಂದ್ರ ಸರ್ಕಾರವನ್ನು ಅಸಮಾಧಾನಗೊಳಿಸಿತ್ತು.

ಬಂಡಿಗಟ್ಟಲೆ ಭರವಸೆ ಮತ್ತು ಕಾರ್ಯಾನುಷ್ಠಾನದ ನಡುವೆ ಇದೆ ದೊಡ್ಡ ಕಂದಕ

ಗಣರಾಜ್ಯ: ಒಂದು ರಾಜಕೀಯ ಅವಲೋಕನ



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಭಾರತವು ಮತ್ತೊಂದು ಗಣರಾಜ್ಯೋತ್ಸವದ ಸಂಭ್ರಮದಲ್ಲಿದೆ. ದೇಶವು ಗಣರಾಜ್ಯವಾಗಿ ರೂಪುಗೊಂಡು ಅದಾಗಲೇ ಏಳು ದಶಕಗಳನ್ನು ಪೂರೈಸಿರುವ ಈ ಸಂದರ್ಭವು ಸಾಗಿ ಬಂದಿರುವ ದಾರಿ ಹಾಗೂ ಮುಂದೆ ಕ್ರಮಿಸಬೇಕಾದ ಹಾದಿಯ ಬಗ್ಗೆ ಅವಲೋಕನ ಮಾಡಿಕೊಳ್ಳಲು ಒಂದು ಒಳ್ಳೆಯ ಸಮಯವೂ ಆಗಿದೆ.

ಐದು ವರ್ಷಗಳ ಹಿಂದೆ (2017ರಲ್ಲಿ) ಸಿಎಸ್‌ಡಿಎಸ್-ಲೋಕನೀತಿಯ ಸಾರ್ವಜನಿಕ ಅಭಿಪ್ರಾಯದ ವಿಶ್ಲೇಷಣೆ ಆಧಾರಿತ ಸಮೀಕ್ಷೆಯನ್ನು ಆಧರಿಸಿದ ಭಾರತದ ಪ್ರಜಾಪ್ರಭುತ್ವದ ಬಗೆಗಿನ ಸ್ಥಿತಿಗತಿ ವರದಿಯ ಒಟ್ಟಾರೆ ಅಭಿಪ್ರಾಯದ ಹೇಳಿಕೆಯು ಇವತ್ತಿಗೂ ಪ್ರಸ್ತುತವಾಗಿದೆ. ಆ ವರದಿ ಹೇಳಿರುವ ಪ್ರಕಾರ, 'ಬಹುತೇಕರಿಗೆ, ಮೂಲಭೂತ ಅಗತ್ಯಗಳಿಗಾಗಿ ಸರ್ಕಾರವನ್ನು ಆಶ್ರಯಿಸುವುದು ಇರುವ ಏಕೈಕ ಆಯ್ಕೆ'ಯಾಗಿದೆ. ಪರಿಸ್ಥಿತಿ ಹೀಗಿರುವಾಗ, ನಾಗರಿಕರು ಪ್ರೀತಿಸುವ, ಎತ್ತಿಹಿಡಿಯುವ ಪ್ರಜಾತಂತ್ರ ವ್ಯವಸ್ಥೆಯ ನ್ಯಾಯ ಮತ್ತು ಅಭಿವೃದ್ಧಿಯ ಆಯಾಮಗಳಿಗೆ ಪ್ರಭುತ್ವವು ಎಷ್ಟು ಸ್ಪಂದನೆ ತೋರುತ್ತದೆ ಎನ್ನುವುದು ಮಹತ್ವದ್ದಾಗುತ್ತದೆ. ಕೋವಿಡ್-19 ಸಾಂಕ್ರಾಮಿಕ ಹಾಗೂ ಅದು ನಾಗರಿಕರ ಬದುಕಿನ ಮೇಲೆ ಬೀರಿದ ಪರಿಣಾಮದ ವೈಖರಿಯು ಭಾರತದ ಜನರ ಆಕಾಂಕ್ಷೆಗಳಿಗೆ ಹಾಗೂ ನಿರೀಕ್ಷೆಗಳಿಗೆ ಕೈಗನ್ನಡಿ ಹಿಡಿಯುತ್ತದೆ.

ಒಂದು ಪ್ರಜಾಪ್ರಭುತ್ವ ಗಣರಾಜ್ಯವಾಗಿ ಈ ಹಿಂದಿನ ಎಪ್ಪತ್ತು ವರ್ಷಗಳಲ್ಲಿ ದೇಶವು ಪ್ರಗತಿ ಪಥದಲ್ಲಿ ಸಾಗಿ ಬಂದಿರುವುದನ್ನು ಗಮನಿಸಿದಾಗ, ನಾವು ಹೆಮ್ಮೆ ಪಡಬಹುದಾದ ಬಹಳಷ್ಟು ವಿಷಯಗಳಿವೆ. ದೇಶದಲ್ಲಿ ಪ್ರಜಾತಾಂತ್ರಿಕ ಪ್ರಕ್ರಿಯೆಯು ಆಳಕ್ಕೆ ಬೇರು ಬಿಡುತ್ತಿರುವುದನ್ನು ಹಾಗೂ ಪ್ರಜಾತಾಂತ್ರಿಕ ಆವರಣವು ವಿಸ್ತಾರಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ. ಎಲ್ಲಾ ಜನವರ್ಗಗಳ ಸಕ್ರಿಯ ಪಾಲ್ಗೊಳ್ಳುವಿಕೆಯಿಂದಾಗಿ ಚುನಾವಣೆಗಳಲ್ಲಿ ಹೆಚ್ಚಿನ ಜನರು ಮತ ಚಲಾವಣೆ ಮಾಡುತ್ತಿದ್ದಾರೆ. ಸ್ಪರ್ಧಾತ್ಮಕವಾದ ಪಕ್ಷವಾರು ವ್ಯವಸ್ಥೆ ಹೊರಹೊಮ್ಮಿರುವುದರಿಂದ ರಾಜ್ಯದ ಚುನಾವಣೆಯೇ ಆಗಲಿ ಅಥವಾ ರಾಷ್ಟ್ರ ಮಟ್ಟದ ಚುನಾವಣೆಯೇ ಆಗಲಿ ತೀವ್ರ ಪೈಪೋಟಿ ಕಂಡುಬರುತ್ತಿದೆ. ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಬಂಧದ ಮೂಲಕ ಒಕ್ಕೂಟ ವ್ಯವಸ್ಥೆಯು ಹೊಸ ಚಲನಶೀಲತೆಯನ್ನು ಕಂಡಿದೆ. 'ಭಾರತದ ರಾಜ್ಯಗಳು' ಹೆಚ್ಚೆಚ್ಚು ಪ್ರಮಾಣದಲ್ಲಿ 'ಭಾರತದ ರಾಜಕಾರಣದ ಹೊಸ ಕೇಂದ್ರ'ವಾಗಿ ರೂಪುಗೊಳ್ಳುತ್ತಿವೆ. ರಾಷ್ಟ್ರೀಯ ರಾಜಕಾರಣದ ಮೇಲೆ ರಾಜ್ಯ ಮಟ್ಟದ ಚುನಾವಣೆಯ ಪ್ರಾಮುಖ್ಯ ಮತ್ತು ಪ್ರಭಾವವು ಪ್ರಮುಖ ಚರ್ಚಾ ವಿಷಯವಾಗಿ ಗಮನ ಸೆಳೆಯುತ್ತಿವೆ.

ಈ ಆಶಾದಾಯಕ ಸಂಗತಿಗಳ ನಡುವೆಯೇ ಭಾರತ ಗಣರಾಜ್ಯದಲ್ಲಿನ ರಾಜಕೀಯ ವ್ಯವಸ್ಥೆಯು ಇಲ್ಲಿ ಮುಖ್ಯವಾದ ಲೋಪಗಳಿರುವುದನ್ನೂ ಸೂಚಿಸುತ್ತದೆ. ಹಾಗಾದರೆ, 'ಭಾರತದಲ್ಲಿ ಇರುವುದು 'ಕೇವಲ ಚುನಾವಣಾ' ಪ್ರಜಾಪ್ರಭುತ್ವವೇ?'- ಎಂಬುದು ಕೇಳಿಬರುವ ಮುಖ್ಯ ಪ್ರಶ್ನೆಯಾಗಿದೆ. ದೇಶವು ಗಣರಾಜ್ಯಗೊಂಡು ಎರಡು ವರ್ಷಗಳಾದ ಮೇಲೆ ನಾವು ಒಂದು ದೇಶವಾಗಿ (1952) ಮೊತ್ತಮೊದಲ ಸಾರ್ವತ್ರಿಕ ಚುನಾವಣೆಯನ್ನು ಕಂಡೆವು. ಅಲ್ಲಿಂದೀಚೆಗೆ ಏಳು ದಶಕಗಳ ಅವಧಿಯಲ್ಲಿ ನಾವು 17 ಲೋಕಸಭಾ ಚುನಾವಣೆಗಳನ್ನು ಎದುರಿಸಿದ್ದೇವೆ. ದೇಶದ ಪ್ರತಿಯೊಂದು ರಾಜ್ಯವೂ ಸರಿಸುಮಾರು ಇಷ್ಟೇ ಸಂಖ್ಯೆಯ ವಿಧಾನಸಭಾ ಚುನಾವಣೆಗಳನ್ನು ಎದುರಿಸಿದೆ. ಚುನಾವಣೆ ಎಂಬುದು ಭಾರತದಲ್ಲಿ ಹಬ್ಬದಂತಾಗಿದ್ದು, ಇದು ಭಾರತದ ಪ್ರಜಾಪ್ರಭುತ್ವ ಸಕ್ರಿಯವಾಗಿರುವುದನ್ನು ಸಂಕೇತಿಸುವ ಅತ್ಯಂತ ಎದ್ದು ಕಾಣುವ ಚಿಹ್ನೆಯೂ ಆಗಿದೆ. ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಚುನಾವಣೆಯ ದಿನವು ಭಾರತದ ನಾಗರಿಕರು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಹಕ್ಕನ್ನು ಚಲಾಯಿಸುವ ದಿನವಾಗಿರುವುದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಮತ ಚಲಾಯಿಸುತ್ತಿರುವುದಕ್ಕೆ ಕಾರಣವಿರಬಹುದು. ಆದರೆ ನಾವು ಭಾರತ ಗಣರಾಜ್ಯದಲ್ಲಿನ ಪ್ರಜಾತಾಂತ್ರಿಕ ಕಾರ್ಯ-ನಿರ್ವಹಣೆಯಲ್ಲಿ ನಾಗರಿಕರ ಸಕ್ರಿಯ ಪಾಲ್ಗೊಳ್ಳುವಿಕೆಗಾಗಿ ಹೊಸ ದಾರಿಗಳನ್ನು ಹಾಗೂ ಅವಕಾಶಗಳನ್ನು ಹೆಚ್ಚಿಸಲು ಏನನ್ನಾದರೂ ಮಾಡಿದ್ದೇವೆಯೇ? ನಮ್ಮ ಗಣರಾಜ್ಯ ವ್ಯವಸ್ಥೆಯಲ್ಲಿ 'ಸಂಸ್ಥೆ'ಗಳ ಬಗ್ಗೆ ಗಮನ ಕೇಂದ್ರೀಕರಿಸುವ ನಾವು ಅಧಿಕಾರದಲ್ಲಿರುವವರ ಪ್ರಯತ್ನಗಳ ಫಲಶ್ರುತಿಗಳ ಬಗ್ಗೆ ಅಷ್ಟೇ ಮಟ್ಟದಲ್ಲಿ ಗಮನ ಹರಿಸುತ್ತೇವೆಯೇ?

ಪ್ರಜಾಪ್ರಭುತ್ವದ ಪರಿಕಲ್ಪನೆಯು (ಐಡಿಯಾ) ಜನಮಾನಸಕ್ಕೆ ಮನವರಿಕೆಯಾಗಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಸಿಎಸ್‌ಡಿಎಸ್- ಲೋಕನೀತಿ ನಡೆಸಿರುವ ಸಮೀಕ್ಷೆಗಳಲ್ಲಿ ಕಂಡುಬಂದಿರುವಂತೆ, ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿಯೇ ಉಳಿಯುವುದು ಅಗತ್ಯ ಎಂದು ಸಾರ್ವಜನಿಕರು ನಿರಂತರವಾಗಿ ಅಭಿಪ್ರಾಯಪಡುತ್ತಾ ಬಂದಿದ್ದಾರೆ. ಆದರೆ, ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡುವಾಗ (ಅವಲೋಕನ ಮಾಡುವಾಗ) ಇಷ್ಟೇ ತೀವ್ರವಾದ ಬೆಂಬಲ ಇಲ್ಲದಿರುವುದನ್ನು ಯಾರಾದರೂ ಗಮನಿಸಬಹುದಾಗಿದೆ. ಹೀಗಾಗಿ, ಇಲ್ಲಿ 'ಪ್ರಜಾಪ್ರಭುತ್ವದ ಪರಿಕಲ್ಪನೆ'ಯು ಬಹಳಷ್ಟು ಪ್ರಬಲವಾಗಿ ನೆಲೆಯೂರಿದ್ದರೂ 'ಪ್ರಜಾಪ್ರಭುತ್ವದ ಕಾಣ್ಕೆ' (ಇಮ್ಯಾಜಿನೇಷನ್ ಆಫ್ ಡೆಮಾಕ್ರಸಿ) ನಿರೀಕ್ಷೆಯಷ್ಟು ಶಕ್ತಿಯುತವಾಗಿಲ್ಲ. ಅಂದರೆ, ಭರವಸೆ ಹಾಗೂ ಕಾರ್ಯಾನುಷ್ಠಾನದ ನಡುವೆ ದೊಡ್ಡ ಕಂದಕ ಇದೆ ಎಂಬುದನ್ನು ಇದು ತೋರಿಸುತ್ತದೆ. ಹಾಗಾದರೆ ನಾವು 'ಬಂಡಿಗಟ್ಟಲೆ ಭರವಸೆಗಳು' ಹಾಗೂ 'ಕಾರ್ಯಾನುಷ್ಠಾನದಲ್ಲಿ ಕೊರತೆ'ಗೆ ಸಾಕ್ಷಿಯಾಗಿರುವ ಗಣರಾಜ್ಯವಾಗಿದ್ದೇವೆಯೇ? ವಿಶೇಷವಾಗಿ ಬಹುತೇಕ ರಾಜ್ಯಗಳಲ್ಲಿ ಮತದಾರರು ಹಿಂದಿನ ಆಡಳಿತಾರೂಢ ಪಕ್ಷವನ್ನು ಪುನಃ ಚುನಾಯಿಸದೇ ಇರುವುದಕ್ಕೆ ಇದೇ ಕಾರಣವಿರಬಹುದೇ?

ದೇಶದಲ್ಲಿ ಇತ್ತೀಚೆಗೆ ನಡೆಯುತ್ತಿರುವ ರಾಜಕೀಯ ಚರ್ಚೆಗಳನ್ನು ನೋಡಿದರೆ, ನಾವು ಸಮಾಜದಲ್ಲಿ ತೀವ್ರವಾದ ಧ್ರುವೀಕರಣಕ್ಕೆ ಸಾಕ್ಷಿಯಾಗುತ್ತಿದ್ದೇವೆಯೇ ಎಂಬ ಪ್ರಶ್ನೆ ತಲೆದೋರುತ್ತದೆ. ನಾವು, 'ನಮಗೆಲ್ಲರಿಗೂ' ಎಂಬ ವಿಶಾಲ ಮನೋಧೋರಣೆಯನ್ನು ಬದಿಗಿಟ್ಟು ಸಂಕುಚಿತ ದೃಷ್ಟಿಯಲ್ಲಿ 'ನಮಗೆ ಮಾತ್ರ' ಹಾಗೂ 'ಅವರು' ಎಂಬುದರ ಬಗ್ಗೆ ತುಂಬಾ ಗಮನ ಕೊಡುತ್ತಿದ್ದೇವೆಯೇ? ಗಣರಾಜ್ಯದ ಏಕತೆ ಮತ್ತು ಸಮಗ್ರತೆಗೆ ಸಂಪೂರ್ಣ ಬದ್ಧವಾಗಿದ್ದುಕೊಂಡೇ ವೈವಿಧ್ಯವನ್ನು ಗುರುತಿಸುವುದು, ಗೌರವಿಸುವುದು ಹಾಗೂ ಅದನ್ನು ಸಂಭ್ರಮಿಸುವುದು ಮುಖ್ಯವಾಗುತ್ತದೆ. ಆದರೆ ಈಗ ಸಾರ್ವಜನಿಕ ಚರ್ಚೆಗಳಲ್ಲಿ ಮನಸ್ಸಿನಲ್ಲಿ ಪೂರ್ವಭಾವಿಯಾಗಿ ಅದಾಗಲೇ ಮಾಡಿಕೊಂಡಿರುವ ತೀರ್ಮಾನವನ್ನು ಸಮರ್ಥಿಸಿಕೊಳ್ಳುವಂತಹ ಧ್ರುವೀಕರಣದ ತೀವ್ರತೆಯ ನಿಲುವುಗಳೇ ಹೆಚ್ಚಾಗಿ ಕಂಡುಬರುತ್ತಿವೆ. ಜನಸಮುದಾಯ-ಗಳ ನಡುವಿನ ಅಂತರ ಹೆಚ್ಚಾಗುತ್ತಿರುವುದು ಈ ತೀವ್ರ ಧ್ರುವೀಕರಣ ಸ್ಥಿತಿಯ ಕಣ್ಣಿಗೆ ರಾಚುವ ಉಪ-ಉತ್ಪನ್ನವಾಗಿದೆ.

ಭಾರತದ ನಾಗರಿಕರಿಗೆ ಕಳೆದ ಎರಡು ವರ್ಷಗಳು ಅತ್ಯಂತ ಕಷ್ಟದ ದಿನಗಳಾಗಿವೆ. ಕೋವಿಡ್ ಸಾಂಕ್ರಾಮಿಕವು ತನ್ನ ಕಬಂಧಬಾಹುವನ್ನು ಎಲ್ಲೆಡೆಗೆ ಚಾಚಿ ಜನರ ದಿನನಿತ್ಯದ ಬದುಕಿನ ಮೇಲೆ ದುಷ್ಪರಿಣಾಮ ಬೀರಿದೆ. ಈ ಎರಡು ವರ್ಷಗಳಲ್ಲಿ ಅದೆಷ್ಟೋ ಜನರ ಬದುಕಿನ ಮಾರ್ಗಗಳು ನಾಟಕೀಯ ಪರಿವರ್ತನೆಗಳನ್ನು ಕಂಡಿವೆ. ಜನರು ತಮ್ಮ ಆದ್ಯತೆಗಳನ್ನು ಪುನರ್ ವ್ಯಾಖ್ಯಾನಿಸಿಕೊಂಡಿದ್ದಾರೆ. ಆರೋಗ್ಯದೆಡೆಗಿನ ಕಾಳಜಿಯು ನಿಚ್ಚಳವಾಗಿ ಕಂಡುಬರುತ್ತಿದೆ. ಕೌಟುಂಬಿಕ ಬಾಂಧವ್ಯ ಮತ್ತು ಭಾವನಾತ್ಮಕ ಬೆಂಬಲದಂತಹ ಸಂಗತಿಗಳಿಗೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ.

ಸಮಾಜದ ಎಲ್ಲಾ ಜನವರ್ಗಗಳಲ್ಲಿ ಆದ್ಯತೆಗಳು ಹಾಗೂ ಜೀವನಶೈಲಿಯಲ್ಲಿ ಬದಲಾವಣೆಯಾಗಿರುವ ಈ ಸಂದರ್ಭದಲ್ಲಿ ಭಾರತದ ಗಣರಾಜ್ಯವು ಹೊಸ ಭವಿಷ್ಯದ ಆಕಾಂಕ್ಷೆಗಳಿಗೆ ಹಾಗೂ ಸವಾಲುಗಳಿಗೆ ಸನ್ನದ್ಧವಾಗುತ್ತಿದೆಯೇ? ಭಾರತದ ಪ್ರಜೆಗಳು ಇಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಇಲ್ಲಿಯವರೆಗೆ ನಂಬಿಕೆ ಇರಿಸಿಕೊಂಡೇ ಬಂದಿದ್ದಾರೆ. ಈ ನಂಬಿಕೆಯೊಂದಿಗೇ ನಾಗರಿಕರು 'ಪ್ರಜಾಪ್ರಭುತ್ವದ ಫಲ'ಕ್ಕಾಗಿ ತಾಳ್ಮೆಯಿಂದ ಕಾಯುತ್ತಿದ್ದಾರೆ; ಆಕಾಂಕ್ಷೆಗಳನ್ನು ಎದುರಿಗಿಟ್ಟುಕೊಂಡು ನೋಡಿದರೆ ಮಾಡಿರುವ ಸಾಧನೆಯಲ್ಲಿ ಹಿಂದೆ ಬಿದ್ದಿದ್ದರೂ ಏಳು ದಶಕಗಳ ಹಿಂದೆ ಗಣರಾಜ್ಯದಲ್ಲಿ ಸ್ಥಾಪನೆಗೊಂಡ ಸಾಂವಿಧಾನಿಕ ವ್ಯವಸ್ಥೆಯು ಭವ್ಯ ಪ್ರಜಾತಾಂತ್ರಿಕ ಭವಿಷ್ಯದೊಂದಿಗೆ 'ನಂಬಿಕೆಯ ಫಲ'ವನ್ನು ಕಂಡೇ ಕಾಣಲಿದೆ ಎಂಬ ಆಶಾಭಾವದೊಂದಿಗೆ ಬದುಕುತ್ತಿದ್ದಾರೆ.



ಚುರುಮುರಿ



ಸರ್ಕಾರಿ ಸ್ಪೀಡ್

• ಮಣ್ಣೆ ರಾಜು

'**ಸರ್ಕಾರದ** ಸ್ಪೀಡ್ ಕುಸಿದುಹೋಗಿದೆಯಂತೆ. ಆಡಳಿತದ ವೇಗ ಹೆಚ್ಚಿಸಿಕೊಳ್ಳದಿದ್ದರೆ ಮುಂದಿನ ಚುನಾವಣೆಯ ಗುರಿ ತಲುಪುವುದು ಕಷ್ಟ ಅಂತ ಶಾಸಕರು ಆತಂಕಗೊಂಡಿದ್ದಾರಂತೆ ಕಣ್ರೀ...' ಎಂದಳು ಸುಮಿ.

'ಹೌದಂತೆ, ಮಂತ್ರಿಗಳ ಕಾರಿನ ಸ್ಪೀಡಿಗಿಂತ ವಿರೋಧ ಪಕ್ಷಗಳ ಪಾದಯಾತ್ರೆ ವೇಗವೇ ಹೆಚ್ಚಾಗಿದೆಯಂತೆ' ಅಂದ ಶಂಕ್ರಿ.

'ಸರ್ಕಾರಿ ಕಾರುಗಳನ್ನ ರಿಪೇರಿ ಮಾಡಿಸಿದರೆ ಇಲ್ಲವೆ ರೀಪ್ಲೇಸ್ ಮಾಡಿಸಿದರೆ ಆಡಳಿತದ ವೇಗ ಹೆಚ್ಚಾಗಬಹುದು'.

'ಕಾರುಗಳ ಕಂಡೀಷನ್ ಚೆನ್ನಾಗೇ ಇದೆಯಂತೆ, ಕಂಡೀಷನ್ ಕೆಟ್ಟಿರುವ ಮಂತ್ರಿಗಳನ್ನು ರೀಪ್ಲೇಸ್ ಮಾಡಿದರೆ ಅಭಿವೃದ್ಧಿ ವೇಗ ಹೆಚ್ಚುತ್ತ-ದೆಯಂತೆ'.

'ಸರ್ಕಾರದ ದುಡ್ಡೆಲ್ಲಾ ಕೊರೊನಾ ಪಾಲಾಗುತ್ತಿದೆ, ಲಾಭದಾಯಕ ಖಾತೆಗಳೂ ಅನುದಾನ ಇಲ್ಲದೆ ನಷ್ಟ ಅನುಭವಿಸುತ್ತಿವೆಯಂತೆ. ಇಂಥಾ ಖಾಲಿ ಖಾತೆ ಇಟ್ಟುಕೊಂಡು ಮಂತ್ರಿಗಳು ಕಾರು ತಳ್ಳಿಕೊಂಡು ಸರ್ಕಾರವನ್ನು ಸಾಗಿಸಲಾಗುತ್ತಾ?'

'ಅಲ್ವಂತೆ, ಮಂತ್ರಿಗಿರಿ ತಮ್ಮ ಆಜನ್ಮಸಿದ್ಧ ಲಕ್ಕು ಅಂತ ಹಲವು ವರ್ಷಗಳಿಂದ ಗೂಟದ ಕಾರಿನಲ್ಲಿ ಗೂಟ ಹೊಡೆದುಕೊಂಡಿರುವ ಮಂತ್ರಿಗಳನ್ನು ಕೆಳಗಿಳಿಸಿ, ಉತ್ಸಾಹಿಗಳನ್ನು ಕಾರು ಹತ್ತಿಸಿದರೆ ಸ್ಪೀಡ್ ಇಂಪ್ರೂವ್ ಆಗುತ್ತೆ ಅಂತ ಯತ್ನಾಳ್, ರೇಣುಕಾಚಾರ್ಯರಂಥವರು ಹೇಳ್ತಿದ್ದಾರೆ'.

'ಸಿಎಂ ಕಾರ್ಯದರ್ಶಿ ರೇಣುಕಾಚಾರ್ಯರಿಗೆ ಗೂಟದ ಕಾರು ನೀಡಲಾಗಿದೆಯಲ್ಲ'.

'ಮಕ್ಕಳ ಆಟದ ಕಾರಿನಂತಹ ಆ ಗೂಟದ ಕಾರು ಹತ್ತಿದರೆ ಚುನಾವಣೆ ರೇಸ್ ಗೆಲ್ಲಲಾಗದು, ಮೈಲೇಜ್ ಇರುವ ಮಂತ್ರಿ ಕಾರು ಬೇಕು ಅಂತ ಕೇಳ್ತಿದ್ದಾರೆ'.

'ಹೌದ್ದೌದು, ಇಲ್ಲವಾದರೆ ವಿರೋಧ ಪಕ್ಷಗಳ ವೇಗದ ಎದುರು ಆಡಳಿತ ಪಕ್ಷದ ಸ್ಪರ್ಧೆ ಆಮೆ, ಮೊಲದ ರನ್ನಿಂಗ್ ರೇಸ್ ಥರ ಆಗಿಬಿಡುತ್ತದೆ. ಆಮೆ ಗೆದ್ದು ಅವಾರ್ಡ್ ಪಡೆಯುತ್ತದೆ, ಮೊಲ ಬಿದ್ದು ಆಸ್ಪತ್ರೆ ವಾರ್ಡ್ ಸೇರಬೇಕಾಗುತ್ತದೆ. ಹಾಗಾಗಲು ಬಿಡದೆ ಬೇಗ ಸಚಿವ ಸಂಪುಟ ಪುನರ್‌ರಚನೆ ಮಾಡಿ ಸರ್ಕಾರದ ಸ್ಪೀಡ್ ಹೆಚ್ಚಿಸಿ ಅಂತ ಸಚಿವಾಕಾಂಕ್ಷಿಗಳು ಒತ್ತಾಯ ಮಾಡ್ತಿದ್ದಾರೆ...' ಎಂದು ಸುಮಿ ಹೇಳಿದಳು.

ಸಂಗತ

ಕೋಮು ಸೌಹಾರ್ದ ಮತ್ತು ಆರೋಗ್ಯಕರ ಸಮಾಜ

ಕೋಮುಗಳ ನಡುವಿನ ಅನ್ಯೋನ್ಯತೆಯು ಮನೋಸಾಮಾಜಿಕ ಆರೋಗ್ಯ ಕಾಪಾಡಬಲ್ಲದು

• ಡಾ. ಎ.ಶ್ರೀಧರ

ಈಗ್ಗೆ ಸುಮಾರು ನೂರೈವತ್ತು ವರ್ಷಗಳ ಹಿಂದಿನ ವಿಷಯವೊಂದನ್ನು ಈಗ ಸ್ಮರಿಸಿಕೊಳ್ಳುವುದು ಹಿತ-ವೆನಿಸುತ್ತದೆ. ನಮ್ಮ ತಾತ ಮೈಸೂರಿನ ಅಗ್ರಹಾರದಲ್ಲಿ ವಾಸವಾಗಿದ್ದವರು. ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರದಲ್ಲಿ ಜೀವನೋಪಾಯಕ್ಕಾಗಿ ಪುರೋಹಿತ ವೃತ್ತಿ ಮತ್ತು ಸಂಸ್ಥಾನದ ಉರ್ದು ಶಾಲೆಯೊಂದರಲ್ಲಿ ಮಕ್ಕಳಿಗೆ ಕನ್ನಡ ಕಲಿಸಿಕೊಡುತ್ತಿದ್ದರು. ತುಂಬಾ ಆಚಾರ, ಮಡಿವಂತಿಕೆ. ಆದರೆ ಅವೆಲ್ಲವೂ ಮನೆ ಮತ್ತು ಅಗ್ರ-ಹಾರಕ್ಕಷ್ಟೇ ಸೀಮಿತವಾಗಿದ್ದವು ಎನ್ನುವುದನ್ನು ನನ್ನ ತಂದೆಯವರು ಆಗಿಂದಾಗ್ಗೆ ಪ್ರಸ್ತಾಪಿಸುತ್ತಿದ್ದರು.

ಈ ವಿಷಯ ಹೇಳುವುದಕ್ಕೆ ಕಾರಣವಿದೆ. ಸುಮಾರು 85 ವರ್ಷಗಳ ಹಿಂದೆ ಅವರು ಬೆಂಗಳೂರಿನ ಬಸವನಗುಡಿ, ಗಾಂಧಿ ಬಜಾರಿನಲ್ಲಿ ಸೇವಾಮನೋಭಾವದಿಂದ ಪಾಠಶಾಲೆಯೊಂದನ್ನು ಪ್ರಾರಂಭಿಸಿದಾಗ ಅದರ ಮೊದಲ ಅಧ್ಯಕ್ಷರಾಗಲು ಒಪ್ಪಿದವರು ಅಬ್ದುಲ್ ಘನಿ ಸಾಬ್ ಎಂಬುವವರು. ಅವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದು ಕೆಲವೇ ತಿಂಗಳುಗಳು. ಆದರೆ ಈ ಅಲ್ಪ ಸಮಯದಲ್ಲಿ ಅವರು ಮಕ್ಕಳಿಗಾಗಿ ನೀಡಿದ ಕೊಡುಗೆ ಅಪಾರ. ನರಸಿಂಹರಾಜ ಕಾಲೊನಿಯಲ್ಲಿ-ರುವ ಆಟದ ಮೈದಾನದಲ್ಲಿ ಆಟವಾಡಿರದ ಆಸುಪಾಸಿನ ಬಡಾವಣೆಯ ಮಕ್ಕಳು ಅಪರೂಪ. ಕೋಮು ಭಾವನೆಗಳು ಮಾನಸಿಕ ನೆಮ್ಮದಿಯನ್ನು ಕೆಡಿಸಿ ಜನಾಕ್ರೋಶ ಏರುವಂತೆ ಮಾಡುತ್ತಿರುವ ಈ ಕಾಲಘಟ್ಟದಲ್ಲಿ ಇಂತಹದ್ದೊಂದು ಸಂಗತಿಯು ದಕ್ಷಿಣ ಭಾರತದ, ಅದರಲ್ಲಿಯೂ ಕರ್ನಾಟಕದ ಬಹುಪಾಲು ಮಠಗಳು ಮತೀಯ ಮಿತಿಗಳನ್ನು ಮೀರಿ ಅನ್ನದಾಸೋಹ, ಶಿಕ್ಷಣ ದಾಸೋಹ ಮಾಡಿರುವ ಸಾವಿರಾರು ಉದಾಹರಣೆಗಳ ಮರುನೆನಪು. ಕೋಮು ಸಮುದಾಯಗಳ ನಡುವಿನ ಸೌಹಾರ್ದ ಭಾವನೆಗಳನ್ನು ವ್ಯಕ್ತಪಡಿಸುವುದು ಆರೋಗ್ಯಕರ ಸಮಾಜದ ಸಂಕೇತ. ಕೋಮುಗಳ ನಡುವಿನ ಅನ್ಯೋನ್ಯತೆ, ಗೌರವಗಳು ಮನೋ ಸಾಮಾಜಿಕ ಆರೋಗ್ಯವು ಉತ್ತಮವಾಗಿ ಇರುವಂತೆ ಕಾಪಾಡಬಲ್ಲಂಥವು.

ಧಾರ್ಮಿಕ ಭಾವನೆಗಳು ಮೂಡುವುದರ ಹಿನ್ನೆಲೆಯಲ್ಲಿ ಇರುವಂತಹ ಮನೋವೈಜ್ಞಾನಿಕ ಕಾರಣಗಳನ್ನು ಮನೋವಿಶ್ಲೇಷಣೆಕಾರ ಕಾರ್ಲ್ ಯೂಂಗ್ ಮತ್ತು ಸಿಗ್ಮಂಡ್ ಫ್ರಾಯ್ಡ್ ಅತ್ಯುತ್ತಮವಾಗಿ ನಿರೂಪಿಸಿದ್ದಾರೆ. ಯೂಂಗ್ ಪ್ರಕಾರ, ತನ್ನನ್ನು ತಾನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಧಾರ್ಮಿಕ ಶ್ರದ್ಧೆ ನೆರವಾಗುತ್ತದೆ. ಹೇಗೆಂದರೆ, ವ್ಯಕ್ತಿಯು ನಿರಂತರವಾಗಿ ಒಂದಿಲ್ಲೊಂದು ಸಂಕಟ, ಆತಂಕ, ಭಯವನ್ನು ಎದುರಿಸುತ್ತಲೇ ಇರಬೇಕಾಗುತ್ತದೆ. ಇಂತಹದ್ದೊಂದು ಸ್ಥಿತಿ ಮನದೊಳಗೆ ಹುದುಗಿರುವ ತವಕ, ತಲ್ಲಣಗಳು ಹೊರಬರುವಂತೆ ಮಾಡುವ ಪ್ರಯತ್ನ ಎಡೆಬಿಡದೆ ನಡೆಯುತ್ತಲೇ ಇದ್ದು ನಾನಾ ರೀತಿಯ ಒತ್ತಡ, ವಕ್ರತೆಗಳನ್ನು ಹುಟ್ಟಿಸುತ್ತದೆ. ಇಂತಹ ಒತ್ತಡದ ಸ್ಥಿತಿಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಬಲವು ಧಾರ್ಮಿಕ ಶ್ರದ್ಧೆಯಲ್ಲಿ ಅಡಗಿರುತ್ತದೆ. ಹಾಗೆಯೇ ಧಾರ್ಮಿಕ ಅಂಧಶ್ರದ್ಧೆಯ ಮೂಲಕ ಹೊರಬರುವ ಮಾನಸಿಕತೆ, ವಿಕೃತಿಯು ಮನಸ್ಸಿನ ದೌರ್ಬಲ್ಯವನ್ನು ಬಿಂಬಿಸುತ್ತದೆ.

ಕೆಲವರಲ್ಲಿ ತಾವಷ್ಟೇ ಉತ್ತಮರು ಮಿಕ್ಕವರೆಲ್ಲಾ ಅಧಮರು ಎನ್ನುವಂತಹ ಭಾವನೆಯು ಗಾಢವಾಗಿ ಬೇರೂರಿದ್ದು ವಿಭಿನ್ನ ಆಚರಣೆ, ನಂಬಿಕೆಗಳನ್ನು ಹತ್ತಿಕ್ಕುವುದೇ ಮನಸ್ಸಿನ ಹವಣಿಕೆಯಾಗಿರುತ್ತದೆ. ಮನದಾಳದಲ್ಲಿ ಅಡಗಿ ಪೀಡಿಸುತ್ತಲೇ ಇರುವ ದೌರ್ಬಲ್ಯಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಧಾರ್ಮಿಕ ಅಂಧಶ್ರದ್ಧೆಯ ಅವಲಂಬನೆಯು ಅತ್ಯಂತ ಪರಿಣಾಮಕಾರಿ. ದುರಂತವೆಂದರೆ, ಹೀಗೆ ಇತರರನ್ನು ಪೀಡಿಸುವ ಕ್ರಮ ಪರಸ್ಪರ ದ್ವೇಷ, ಕ್ರೋಧಗಳಿಗೆ ಬೆಂಬಲ ನೀಡುತ್ತದೆ. ಆದುದರಿಂದಲೇ ಧಾರ್ಮಿಕತೆ-ಯನ್ನು ನ್ಯೂರಾಸಿಸ್ ಎಂದು ಫ್ರಾಯ್ಡ್ ಗುರುತಿಸಿದ್ದು. ಅತ್ಯಂತ ದುರದೃಷ್ಟಕರ ಸಂಗತಿ ಎಂದರೆ, ಇತ್ತೀಚಿನ ದಿನಗಳಲ್ಲಿ ದಕ್ಷಿಣದ ಕಾಷಾಯ ವಸ್ತ್ರಧಾರಿಗಳು ಉತ್ತರಮುಖಿಯಾಗುತ್ತಿರುವುದಲ್ಲದೆ ದ್ವೇಷ, ಆಕ್ರೋಶ ತುಂಬಿರುವ ಮಾತು, ಕೆಲಸಗಳನ್ನು ಮಂತ್ರ, ಆಚರಣೆಗಳೆಂಬಂತೆ ಪ್ರಚಾರ ಮಾಡುತ್ತಿರುವುದು. ಈಗ ಕೆಟ್ಟ ಸುದ್ದಿಯಲ್ಲಿರುವ ರಿಷಿ ಕುಮಾರ ಸ್ವಾಮಿ ಅವರ ವಿಡಿಯೋಪದೇಶ ಇಂತಹ ಅಸಹ್ಯಗಳಲ್ಲಿ ಒಂದು. ಒಂದು ರೀತಿಯಲ್ಲದು ಹೊಸ ನಮೂನೆಯ ಉನ್ಮಾದ; ವಿಡಿಯೊನ್ಮಾದ.



ತಮ್ಮ ಹಾವಭಾವಗಳು, ನಡೆನುಡಿಗಳು ಮಹದೋದ್ದೇಶದಿಂದ ಕೂಡಿವೆ ಎನ್ನುವಂತಹ ಏಕಸ್ವರೂಪಿ ಭ್ರಮೆ. ಇಂತಹ ಮಾನಸಿಕ ಅನಾರೋಗ್ಯಕರ ಭಾವನೆಯನ್ನು ಬಹಳ ಸುಲಭವಾಗಿ ಸ್ವ-ವಿಡಿಯೊಗಳು ಬಲಪಡಿಸುತ್ತವೆ. ಅವುಗಳನ್ನು ತಾವೇ ಪದೇ ಪದೇ ವೀಕ್ಷಿಸುವ ಮೂಲಕ ಆ ಮಾತುಗಳಲ್ಲಿ ಅತ್ಯದ್ಭುತ ಶಕ್ತಿ ಅಡಗಿದೆ ಎಂದು ವಿಭ್ರಮಿಸುವುದು.

ಇಂದು ಜನ ಕೋವಿಡ್ ಹಾವಳಿಯಿಂದ ವೃತ್ತಿ, ಶಿಕ್ಷಣ ಮತ್ತು ಬದುಕಿನ ಲಯವನ್ನು ಕಳೆದುಕೊಂಡು ಮಾನಸಿಕ, ಆರ್ಥಿಕ ಸಮತೋಲನ ಕಾಪಾಡಿಕೊಳ್ಳು-ವುದಕ್ಕಾಗಿ ಹರಸಾಹಸ ಪಡುತ್ತಿರುವ ಸಮಯದಲ್ಲಿ ಅಧ್ಯಾತ್ಮ, ಭಕ್ತಿಯನ್ನು ಪ್ರಚಾರ ಮಾಡುವವರ ನೆರವು ಅಗತ್ಯ. ಅಂತಹವರೇ ಹಿಂಸೆ, ಆಕ್ರೋಶದ ನಡೆನುಡಿಗೆ ಉತ್ತೇಜನ ನೀಡುತ್ತಿದ್ದಾಗ ಸಂಯಮದ ಸ್ವಭಾವದವರು ಸುಮ್ಮನಿರುವುದು ಸರಿಯಲ್ಲವೆನಿಸು-ತ್ತದೆ. ಹೊಡಿ, ಕೊಲ್ಲು, ಕಡಿ, ಕೆಡವು ಎನ್ನುವಂತಹ ಮಾತುಗಳು ಅನಾರೋಗ್ಯಕರ ಮನಸ್ಸಿನ ಸ್ಪಷ್ಟ ಸಂಕೇತಗಳು. ಇಂತಹ ಮಾತುಗಳಿಗೆ ಯುವಜನ ಮರುಳಾಗಬಾರದು. ವ್ಯಕ್ತಿಯ ಮನೋಬಲವನ್ನು ಸಂಪೂರ್ಣವಾಗಿ ನಾಶಪಡಿಸುವ ಗುಣ ಇಂತಹ ಆವೇಶಭರಿತ, ಪೂರ್ವಗ್ರಹಪೀಡಿತ ಮಾತುಗಳಲ್ಲಿ ಗಾಢವಾಗಿ ಅಡಗಿರುತ್ತದೆ ಎಂಬುದರ ಅರಿವು ಒಳಿತು.

ಡಿವಿಜಿಯರ ಮಂಕುತಿಮ್ಮ ಹೇಳುವಂತೆ-ಎಲ್ಲರೊಳು ಒಂದಾಗು- ಎನ್ನುವುದನ್ನು ಉತ್ತೇಜಿಸುವುದಕ್ಕೆ ಇದು ಸೂಕ್ತ ಸಮಯ.

ಲೇಖಕ: ಮನೋವೈದ್ಯ

ವಾಚಕರ ವಾಣಿ

ಗುಂಪುಗೂಡುವುದು ತರವೇ?

ರಾಜ್ಯ ಸರ್ಕಾರ ವಾರಾಂತ್ಯ ಕರ್ಫ್ಯೂ ತೆಗೆದು ಹಾಕುವಾಗ, ಪ್ರತಿಭಟನೆ, ಮೆರವಣಿಗೆಯಂತಹ ಗುಂಪುಗೂಡುವ ಕಾರ್ಯಕ್ರಮಗಳನ್ನು ಮಾಡಬಾರದೆಂದು ಮನವಿ ಮಾಡಿತ್ತು. ಆದರೂ ಮರುದಿನದ ಪತ್ರಿಕೆ ನೋಡಿದರೆ, ಪುರಭವನದ ಬಳಿ ಪ್ರತಿಭಟನೆ, ಮುಳಬಾಗಿಲಿನಲ್ಲಿ ಗುಂಪು ಚದುರಿಸಲು ಲಘು ಲಾಠಿ ಪ್ರಹಾರ, ಕೋವಿಡ್ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ ಇಂತಹದ್ದೇ ಸುದ್ದಿಗಳು.

ನಿಯಮ ಮಾಡಿದರೂ ವಿರೋಧ, ಮಾಡದಿದ್ದರೂ ವಿರೋಧ. ಅಳದಿದ್ದರೆ ಮಗುವಿಗೆ ತಾಯಿಯೂ ಹಾಲು ಕೊಡುವುದಿಲ್ಲ ಎನ್ನುವ ನುಡಿಗಟ್ಟಿನಂತೆ, ಪ್ರತಿಭಟನೆ ಮಾಡದಿದ್ದರೆ ಆಗುವುದಿಲ್ಲ ಎಂದು ಪ್ರತಿಭಟನೆ ಮಾಡುವವರೂ, ಪ್ರತಿಭಟನೆ ಮಾಡಲಿ ಆಮೇಲೆ ನೋಡೋಣ ಎಂದು ಆಡಳಿತ ನಡೆಸುವವರೂ ಕಾಯುತ್ತಿರುವಂತೆ, ಜನಸಾಮಾನ್ಯರೂ ಇದೊಂದು ಮನರಂಜನೆ ಎಂದು ಆನಂದಿಸುತ್ತಿರುವಂತೆ ಕಾಣುತ್ತದೆ. ಪ್ರತಿಭಟನೆ ಮಾಡುವವರು ತಮ್ಮ ಪ್ರತಿಭಟನೆಯಿಂದ ಏನೂ ಪ್ರಯೋಜನ ಇಲ್ಲವೆಂದು ಗೊತ್ತಿದ್ದರೂ ಅದೊಂದು ತಮ್ಮ ಕರ್ತವ್ಯ ಎಂದು ಭಾವಿಸಿದಂತಿದೆ. ಸಾಂಕ್ರಾಮಿಕದ ಈ ಸಂಕೀರ್ಣ ಸಮಯದಲ್ಲಿ ಕೋವಿಡ್ ಮಾರ್ಗಸೂಚಿಗಳಿಗೆ ಸಂಬಂಧಿಸಿದಂತೆ ಇವರ್‍ಯಾರಿಗೂ ಸಾಮಾನ್ಯ ಸಾಮಾಜಿಕ ಪ್ರಜ್ಞೆ, ಬದ್ಧತೆ ಮತ್ತು ಕಾಳಜಿ ಇದ್ದಂತೆ ಕಾಣುವುದಿಲ್ಲ.

ಟಿ.ವಿ.ಬಿ.ರಾಜನ್, ಬೆಂಗಳೂರು

ಅಧಿಕಾರಕ್ಕಾಗಿ ನೀರಿನ ರಾಜಕೀಯ

ನೀರು ಜೀವ ಸಂಕುಲಕ್ಕೆ ಸಂಜೀವಿನಿ. ನೀರಿಲ್ಲದೆ ಬದುಕು ಊಹಿಸಲು ಅಸಾಧ್ಯ. ಆದರೆ ನಮ್ಮ ರಾಜಕೀಯ ನಾಯಕರಿಗೆ ಪ್ರತೀ ವಿಧಾನಸಭೆ, ಲೋಕಸಭಾ ಚುನಾವಣೆ ಬಂದಾಗ ಮಾತ್ರ ನೀರಿನ ಹೋರಾಟದ ನೆನಪಾಗುತ್ತದೆ. ನೀರಿನ ಹೆಸರಿನಲ್ಲಿ ರಾಜಕೀಯ ಮಾಡಿ ಅಧಿಕಾರ ಹಿಡಿಯಲು ಪ್ರಯತ್ನಿಸುತ್ತಾರೆ. ನಂತರ ಆ ಭರವಸೆಗಳನ್ನು ಮರೆತು ಬಿಡುತ್ತಾರೆ. ಉದಾಹರಣೆಗೆ, ಕೃಷ್ಣಾ, ಕಾವೇರಿ, ಎತ್ತಿನಹೊಳೆ, ವಾರಾಹಿ, ಭದ್ರಾ ಮೇಲ್ದಂಡೆ, ಮಹದಾಯಿ, ಮೇಕೆದಾಟು ಯೋಜನೆಗಳಲ್ಲಿ ಇಂತಹ ನಡೆ ಕಂಡುಬಂದಿರುವುದು ಇತಿಹಾಸದಿಂದ ತಿಳಿಯುತ್ತದೆ. ಎಲ್ಲಾ ಯೋಜನೆಗಳ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತವೆ. ಎಲ್ಲಾ ಪಕ್ಷಗಳಿಗೆ ಅಧಿಕಾರಕ್ಕೆ ಬರಲು ರೈತ, ಕೃಷಿ, ನೀರಾವರಿ, ಕಾಲುವೆ, ಅಣೆಕಟ್ಟು ಯೋಜನೆಗಳೇ ಮೆಟ್ಟಿಲು. ಚುನಾವಣೆ ಮುಗಿದ ಮೇಲೆ ಈ ಭರವಸೆಗಳಿಗೆ ಎಳ್ಳುನೀರು.

ರೈತರು ನೀರು ಇಂದು ಬರುತ್ತದೆ ನಾಳೆ ಬರುತ್ತದೆ ಎಂದು ಕಾದು ಕಾದು ಸುಸ್ತಾಗಿ ಹೋಗಿದ್ದಾರೆ. ರಾಜಕೀಯ ನಾಯಕರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದು ಬಿಟ್ಟು ರೈತರ ಕಷ್ಟ, ಸಮಸ್ಯೆಗಳಿಗೆ ಆದಷ್ಟು ಬೇಗ ಸ್ಪಂದಿಸಲಿ. ನೀರಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿರುವ ಅರ್ಜಿಗಳ ಶೀಘ್ರ ವಿಲೇವಾರಿಗೆ ಪೂರಕವಾದ ಪ್ರಯತ್ನಗಳನ್ನು ಮಾಡಿ, ರೈತರಿಗೆ ಆದಷ್ಟು ಬೇಗ ನೀರು ಸಿಗುವಂತೆ ಮಾಡಲಿ.

ನಬಿಸಾಬ ಆರ್.ಬಿ. ದೋಟಿಹಾಳ, ಕುಷ್ಟಗಿ

ಮಾಸಾಶನ ಮನೆಗೇ ತಲುಪಲಿ

ವೃದ್ಧರು, ಅಂಗವಿಕಲರು, ವಿಧವೆಯರು ಹಾಗೂ ಬುದ್ಧಿಮಾಂದ್ಯರಿಗೆ ಸರ್ಕಾರ ಪ್ರತೀ ತಿಂಗಳು ನೀಡುವ ಮಾಸಾಶನವನ್ನು ಫಲಾನುಭವಿಗಳು ಖುದ್ದಾಗಿ ಅಂಚೆ ಕಚೇರಿಗೆ ಬಂದು ಪಡೆದುಕೊಳ್ಳಬೇಕು. ಬಹುತೇಕ ಮೇಲೆ ತಿಳಿಸಿದ ವ್ಯಕ್ತಿಗಳು ದೈಹಿಕ ಹಾಗೂ ಮಾನಸಿಕವಾಗಿ ಅಶಕ್ತರಾಗಿರುತ್ತಾರೆ. ತಮ್ಮ ಕೆಲಸಗಳನ್ನು ತಾವೇ ಅಲೆದಾಡಿ ಮಾಡಿಕೊಳ್ಳಲು ಕಷ್ಟಪಡುತ್ತಿರುತ್ತಾರೆ. ಇವರಲ್ಲಿ ಬಡತನದ ರೇಖೆಯಲ್ಲಿ ಇರುವವರೇ ಹೆಚ್ಚಾಗಿದ್ದಾರೆ. ಅವರ ಹತ್ತಿರ ಸ್ವಂತ ವಾಹನ ಇರುವುದಿಲ್ಲ ಅಥವಾ ಇದ್ದರೂ ಚಾಲನೆ ಮಾಡುವ ಸಾಮರ್ಥ್ಯ ಅವರಿಗೆ ಇರುವುದಿಲ್ಲ. ಇಂತಹ ವ್ಯಕ್ತಿಗಳು ಅಂಚೆ ಕಚೇರಿಗೆ ಹೋಗಿ ಹಣ ಪಡೆದುಕೊಂಡು ಬರಲು ತೀವ್ರ ಕಷ್ಟಪಡುತ್ತಿದ್ದಾರೆ. ಹೀಗಾಗಿ ಸರ್ಕಾರ ನೇರವಾಗಿ ಅವರ ಮನೆಬಾಗಿಲಿಗೆ ಈ ಹಣವನ್ನು ತಲುಪಿಸುವ ವ್ಯವಸ್ಥೆ ಮಾಡಬೇಕು. ಇದರಿಂದ ಅವರಲ್ಲಿ ಮಾನಸಿಕ ಸ್ಥೈರ್ಯ ತುಂಬಿದಂತೆಯೂ ಆಗುತ್ತದೆ.

ಶರಣಬಸವ ಆರ್. ಪತ್ತಾರ, ಯಡ್ರಾಮಿ

'ಅತಿಥಿ ಸಚಿವ'ರಾಗುವುದು ಬೇಡ

ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ, ಪುನರ್‌ರಚನೆಯ ಮಾತುಗಳು ಕೇಳಿಬರುತ್ತಿರುವ ಬೆನ್ನಲ್ಲೇ ಜಿಲ್ಲಾ ಉಸ್ತುವಾರಿ ಸಚಿವರ ನೇಮಕವಾಗಿದೆ. ಬಹುತೇಕ ಸಚಿವರನ್ನು ತಮ್ಮ ತವರು ಜಿಲ್ಲೆಗಳನ್ನು ಬಿಟ್ಟು ಬೇರೆ ಜಿಲ್ಲೆಗಳಿಗೆ ನೇಮಕ ಮಾಡಲಾಗಿದೆ. ರಾಜಕೀಯ ಸಂಘರ್ಷ ಏರ್ಪಡಬಾರದು ಎಂಬ ಕಾರಣದಿಂದ ಮುಖ್ಯಮಂತ್ರಿ ಈ ನಿರ್ಧಾರ ತೆಗೆದುಕೊಂಡಿದ್ದರೂ, ಅಭಿವೃದ್ಧಿ ವಿಚಾರವಾಗಿ ಇದು ಸೂಕ್ತ ನಿರ್ಧಾರವಲ್ಲ. ಬೇರೆ ಜಿಲ್ಲೆಗಳ ಸಚಿವರನ್ನು ಉಸ್ತುವಾರಿಯಾಗಿ ನೇಮಕ ಮಾಡುವುದರಿಂದ ಉಸ್ತುವಾರಿ ವಹಿಸಿಕೊಂಡ ಜಿಲ್ಲೆಗಳಲ್ಲಿ ಆ ಸಚಿವರು ಯಾವುದೇ ಸಭೆಗಳನ್ನು ನಡೆಸದೆ, ಜಿಲ್ಲೆಗೆ ಅಗತ್ಯಾನುಸಾರ ಭೇಟಿ ಕೊಡದೆ, ಸರ್ಕಾರಿ ಅಧಿಕಾರಿಗಳ ಸಭೆ ನಡೆಸದೇ ಇರುವುದರಿಂದ ಅಭಿವೃದ್ಧಿ ಕಾಮಗಾರಿಗಳು ಚುರುಕು ಪಡೆಯುವುದಿಲ್ಲ. ಈ ಕುರಿತು ಈಗಾಗಲೇ ಸಾರ್ವಜನಿಕರು ಅನೇಕ ಬಾರಿ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಕೋವಿಡ್ ಕಾಲಘಟ್ಟದ ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಪಾತ್ರ ಮಹತ್ವದ್ದಾಗಿರುತ್ತದೆ. ಕೋವಿಡ್ ನಿರ್ವಹಣೆ ಮತ್ತು ಪೂರ್ವಸಿದ್ಧತೆ ಕುರಿತ ಮೇಲ್ವಿಚಾರಣೆಗಾಗಿ ಸಚಿವರು ಆಗಾಗ ಆಯಾ ಜಿಲ್ಲೆಗಳಿಗೆ ಭೇಟಿ ನೀಡಬೇಕಾಗುತ್ತದೆ. ಅಲ್ಲಿನ ಕುಂದುಕೊರತೆಗಳನ್ನು ಆಲಿಸಬೇಕಾಗುತ್ತದೆ. ಆದರೆ ಈ ಹಿಂದಿನ ಬಹುತೇಕ ಸಚಿವರು ಆ ಕೆಲಸವನ್ನು ಮಾಡಿಲ್ಲ. ಅದಕ್ಕೆ ಮುಖ್ಯ ಕಾರಣ ಅವರು ಆ ಜಿಲ್ಲೆಯವರಲ್ಲ ಎಂಬುದು. ಹೀಗಾಗಿ ಮುಖ್ಯಮಂತ್ರಿ ಈ ಬಾರಿ ಆಯಾ ಜಿಲ್ಲೆಗಳ ಜನಪ್ರತಿನಿಧಿಗಳನ್ನೇ ಆಯಾ ಜಿಲ್ಲಾ ಉಸ್ತುವಾರಿಗಳನ್ನಾಗಿ ನೇಮಿಸಬೇಕಿತ್ತು. ಇಲ್ಲವಾದಲ್ಲಿ ಆಗೊಮ್ಮೆ-ಈಗೊಮ್ಮೆ ಭೇಟಿ ಕೊಡುವ ಮೂಲಕ ಅತಿಥಿ ಸಚಿವರಾಗುವ ಸಂಪ್ರದಾಯಕ್ಕೆ ತಿಲಾಂಜಲಿ ನೀಡುವಂತೆ ಖಡಕ್ ಸೂಚನೆ ನೀಡಬೇಕಿದೆ.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಉಕ್ರೇನ್ ಸಂಘರ್ಷ ಜಗತ್ತಿಗೂ ಸಂಕಟ

ಉಕ್ರೇನ್‌ನಲ್ಲಿನ ದಶಕದ ಅವಧಿಯ ಆಂತರಿಕ ಕಲಹವು ಈಗ ಜಾಗತಿಕ ಸಂಘರ್ಷವಾಗುವ ಹಂತಕ್ಕೆ ಬಂದಿದೆ. ಉಕ್ರೇನ್ ಮೇಲೆ ದಾಳಿ ನಡೆಸಲು, ರಷ್ಯಾ ಲಕ್ಷಾಂತರ ಸೈನಿಕರನ್ನು ಗಡಿಯಲ್ಲಿ ಜಮೆ ಮಾಡಿದೆ. ಮತ್ತೊಂದೆಡೆ ನ್ಯಾಟೊ ಮತ್ತು ಅಮೆರಿಕದ ಪಡೆಗಳು ಉಕ್ರೇನ್ ರಕ್ಷಣೆಗೆ ಮುಂದಾಗಿವೆ. ವಿಶ್ವದ ಶಸ್ತ್ರಾಸ್ತ್ರ ಪೂರೈಕೆಯ ಪ್ರಮುಖ ರಾಷ್ಟ್ರಗಳಲ್ಲಿ ಒಂದಾದ ಉಕ್ರೇನ್‌ನಲ್ಲಿ ನಡೆಯುವ ಯಾವುದೇ ಸಂಘರ್ಷವು ಭಾರತದ ಮೇಲೂ ಪರಿಣಾಮ ಬೀರುವ ಅಪಾಯವಿದೆ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಯುದ್ಧದ ಭೀತಿಯಲ್ಲಿ ಉಕ್ರೇನ್

ಇರಾಕ್, ಸಿರಿಯಾ, ಅಫ್ಗಾನಿಸ್ತಾನದ ಬಳಿಕ ಜಗತ್ತು ಮತ್ತೊಂದು ಯುದ್ಧವನ್ನು ಕಾಣುವ ದಿನಗಳು ಹತ್ತಿರದಲ್ಲಿವೆ. ರಷ್ಯಾ ಹಾಗೂ ಉಕ್ರೇನ್ ನಡುವಿನ ದಶಕಗಳ ಅಂತಃಕಲಹ ಇದೀಗ ಪೂರ್ಣ ಸ್ವರೂಪದ ಯುದ್ಧವಾಗಿ ಮಾರ್ಪಾಡಾಗುವ ಸನ್ನಿವೇಶ ಸೃಷ್ಟಿಯಾಗಿದೆ. ಉಕ್ರೇನ್ ಭವಿಷ್ಯದ ರಣರಂಗವಾಗುವ ಎಲ್ಲ ಸಾಧ್ಯತೆಯಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

1991ರಲ್ಲಿ ಸೋವಿಯತ್ ಒಕ್ಕೂಟ ಪತನವಾದ ಬಳಿಕ, ತನ್ನ ಜೊತೆ ಗಡಿ ಹಂಚಿಕೊಂಡಿರುವ ಉಕ್ರೇನ್ ಮೇಲೆ ರಷ್ಯಾ ಕಣ್ಣಿಟ್ಟಿತ್ತು. 2014ರಲ್ಲಿ ಉಕ್ರೇನ್‌ನ ಭಾಗವಾಗಿದ್ದ ಕ್ರಿಮಿಯಾವನ್ನು ಸೇರ್ಪಡೆ ಮಾಡಿಕೊಂಡ ಬಳಿಕ, ರಷ್ಯಾ ಹಾಗೂ ಉಕ್ರೇನ್ ನಡುವಣ ಸಂಘರ್ಷವು ಕಾವು ಪಡೆಯಿತು. ಉಕ್ರೇನ್ ಪೂರ್ವಭಾಗದ ಕೆಲವು ಕೈಗಾರಿಕಾ ಪ್ರದೇಶಗಳನ್ನೂ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತ್ತು. ಅಂದಿನಿಂದ ರಷ್ಯಾ ಬೆಂಬಲಿತ ಪ್ರತ್ಯೇಕವಾದಿಗಳು ಹಾಗೂ ಉಕ್ರೇನ್ ಸೇನೆಯ ನಡುವೆ ಗಡಿಗಳಲ್ಲಿ ಗುಂಡಿನ ಚಕಮಕಿ ನಡೆಯುತ್ತಿದೆ. ಇಲ್ಲಿಯವರೆಗೆ ಈ ಸಂಘರ್ಷದಲ್ಲಿ 14,000 ಜನರು ಮೃತಪಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ.

2014ರಲ್ಲಿ 298 ಜನರು ಪ್ರಯಾಣಿಸುತ್ತಿದ್ದ ಮಲೇಷ್ಯಾ ಏರ್‌ಲೈನ್ಸ್ ವಿಮಾನವು ಉಕ್ರೇನ್ ವಾಯುಪ್ರದೇಶದಲ್ಲಿ ಪತನವಾದ ಬಳಿಕ ಇದು ಅಂತರರಾಷ್ಟ್ರೀಯ ಸಂಘರ್ಷವಾಗಿ ಮಾರ್ಪಾಡಾಯಿತು. ರಷ್ಯಾ ನಿರ್ಮಿತ ಕ್ಷಿಪಣಿಯಿಂದ ವಿಮಾನವನ್ನು ಹೊಡೆಯಲಾಗಿದೆ ಎಂದು ತನಿಖಾ ವರದಿ ತಿಳಿಸಿತ್ತು.

ರಷ್ಯಾ ಬೆಂಬಲಿತ ಉಕ್ರೇನ್ ಅಧ್ಯಕ್ಷ ವಿಕ್ಟರ್ ಯನುಕೊವಿಚ್ ಅವರು ನ್ಯಾಟೊ (ನಾರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೆಷನ್) ಸಂಘಟನೆಗೆ ಉಕ್ರೇನ್ ಸೇರ್ಪಡೆಯಾಗಲು ವಿರೋಧ ವ್ಯಕ್ತಪಡಿಸಿದ್ದರು. ಈ ಸಂಬಂಧ ಐರೋಪ್ಯ ಒಕ್ಕೂಟ ಇರಿಸಿದ್ದ ಪ್ರಸ್ತಾವವನ್ನು ಅವರು ತಿರಸ್ಕರಿಸಿದ್ದರು. ವಿಕ್ಟರ್ ನಿರ್ಧಾರವನ್ನು ವಿರೋಧಿಸಿ ಜನರು ಸಾಮೂಹಿಕವಾಗಿ ಪ್ರತಿಭಟನೆ ನಡೆಸಿದ್ದರು. ಇದರ ಫಲವಾಗಿ ವಿಕ್ಟರ್ ದೇಶದಿಂದ ಪಲಾಯನ ಮಾಡಬೇಕಾಯಿತು.

ಅಮೆರಿಕ ಹಾಗೂ ಯುರೋಪ್‌ನ ಬಹುತೇಕ ದೇಶಗಳು ನ್ಯಾಟೊ ಸದಸ್ಯ ದೇಶಗಳಾಗಿವೆ. ಆದರೆ, ಉಕ್ರೇನ್ ಒಳಗೊಂಡಂತೆ ಪೂರ್ವ ಯುರೋಪ್ ಪ್ರದೇಶದಲ್ಲಿ ನ್ಯಾಟೊ ಅಸ್ತಿತ್ವವನ್ನು ರಷ್ಯಾ ವಿರೋಧಿಸುತ್ತಿದೆ. ಭವಿಷ್ಯದಲ್ಲಿ ರಷ್ಯಾದ ಆಕ್ರಮಣವನ್ನು ತಡೆಯುವ ಉದ್ದೇಶದಿಂದ ನ್ಯಾಟೊ ಸದಸ್ಯ ದೇಶಗಳಾದ ಎಸ್ಟೋನಿಯಾ, ಲಾಟ್ವಿಯಾ, ಲಿಥುವೇನಿಯಾ ಮತ್ತು ಪೋಲೆಂಡ್‌ಗಳಲ್ಲಿ ಸೇನಾಪಡೆ ನಿಯೋಜಿಸಲು ನ್ಯಾಟೊ ತೀರ್ಮಾನಿಸಿತ್ತು. ಈ ಬೆಳವಣಿಗೆಗಳು ರಷ್ಯಾವನ್ನು ಕೆರಳಿಸಿದವು. 2014ರಿಂದ ಇಲ್ಲಿಯವರೆಗೆ ಉಕ್ರೇನ್ ಗುರಿಯಾಗಿಸಿ ರಷ್ಯಾ ನೂರಾರು ಸೈಬರ್ ದಾಳಿಗಳನ್ನು ನಡೆಸಿದೆ.

2018ರಲ್ಲಿ ರಷ್ಯಾದ ಅಧಿಕಾರಿಗಳೂ ಸೇರಿದಂತೆ 21 ವ್ಯಕ್ತಿಗಳ ಮೇಲೆ ಅಮೆರಿಕ ನಿರ್ಬಂಧ ವಿಧಿಸಿತು. ಉಕ್ರೇನ್‌ಗೆ ಟ್ಯಾಂಕ್ ವಿರೋಧಿ ಶಸ್ತ್ರಾಸ್ತ್ರಗಳ ಮಾರಾಟವನ್ನು ಅಮೆರಿಕ ಅನುಮೋದಿಸಿತು. ಇದು ಸಂಘರ್ಷ ಪ್ರಾರಂಭವಾದ ನಂತರದ ಮೊದಲ ಶಸ್ತ್ರಾಸ್ತ್ರ ಮಾರಾಟವಾಗಿದೆ. 2018ರಲ್ಲಿ ಉಕ್ರೇನ್ ದೇಶವು ನ್ಯಾಟೊ ಒಕ್ಕೂಟವನ್ನು ಸೇರಿತು. ಇದರ ಬೆನ್ನಲ್ಲೇ ಪಶ್ಚಿಮ ಉಕ್ರೇನ್‌ನಲ್ಲಿ ಬೃಹತ್ ಸೇನಾ ಕಸರತ್ತು ನಡೆಯಿತು. ಇವೆಲ್ಲವೂ ಸಂಘರ್ಷವನ್ನು ಹೆಚ್ಚಿಸಿದವು.



ರಷ್ಯಾ ಅತಿಕ್ರಮಣದ ವಿರುದ್ಧ ಹೋರಾಟ ನಡೆಸಲು ತರಬೇತಿ ಪಡೆಯುತ್ತಿರುವ ಉಕ್ರೇನ್ ಸೈನಿಕರು —ಎಪಿ/ಪಿಟಿಐ ಚಿತ್ರ

ಭಾರತಕ್ಕೂ ಸಂಕಷ್ಟ

ಉಕ್ರೇನ್‌ನಲ್ಲಿನ ಆಂತರಿಕ ಸಂಘರ್ಷ ಮತ್ತು ಬೇರೆ ದೇಶಗಳ ಅತಿಕ್ರಮಣವು ಭಾರತದ ಮೇಲೂ ಭಾರಿ ಪರಿಣಾಮ ಬೀರುವ ಅಪಾಯವಿದೆ. ಭಾರತಕ್ಕೆ ಅತಿಹೆಚ್ಚು ಶಸ್ತ್ರಾಸ್ತ್ರಗಳು ಮತ್ತು ಸೇನಾ ಸಲಕರಣೆಗಳನ್ನು ಪೂರೈಕೆ ಮಾಡುವ ದೇಶಗಳ ಸಾಲಿನಲ್ಲಿ ಉಕ್ರೇನ್ ಎರಡನೇ ಸ್ಥಾನದಲ್ಲಿದೆ. ಭಾರತೀಯ ಸೇನೆಯ ಮೂರೂ ಪಡೆಗಳು ಹಲವು ವಾಹನಗಳು, ಮದ್ದುಗುಂಡುಗಳು ಮತ್ತು ಶಸ್ತ್ರಾಸ್ತ್ರಗಳಿಗಾಗಿ ಉಕ್ರೇನ್ ಅನ್ನು ಅವಲಂಬಿಸಿದೆ. ಉಕ್ರೇನ್‌ನಲ್ಲಿನ ಯಾವುದೇ ರೀತಿಯ ಸಂಘರ್ಷವು ಭಾರತದ ಈ ಅವಲಂಬನೆಯನ್ನು ಬಾಧಿಸುತ್ತದೆ. ಈ ಕಾರಣದಿಂದ ಉಕ್ರೇನ್‌ನಲ್ಲಿನ ಬೆಳವಣಿಗೆಯನ್ನು ಭಾರತವು ಸೂಕ್ಷ್ಮವಾಗಿ ಗಮನಿಸುತ್ತಿದೆ.

1991ರಲ್ಲಿ ಸೋವಿಯತ್ ಒಕ್ಕೂಟದ ಪತನದ ಜತೆಗೆ ಉಕ್ರೇನ್ ಉದಯವಾಯಿತು. ಉಕ್ರೇನ್ ಅನ್ನು ಒಂದು ರಾಷ್ಟ್ರ ಎಂದು ಒಪ್ಪಿಕೊಂಡ ಮೊದಲ ದೇಶ ಭಾರತ. ಉಕ್ರೇನ್‌ನಲ್ಲಿ ರಾಯಭಾರ ಕಚೇರಿಯನ್ನು ಆರಂಭಿಸಿದ ಮೊದಲ ದೇಶವೂ ಭಾರತವೇ ಆಗಿದೆ. ಸೋವಿಯತ್ ಅವಧಿಯಿಂದಲೂ ಉಕ್ರೇನ್‌ನೊಂದಿಗೆ ಭಾರತವು ಉತ್ತಮ ಸಂಬಂಧ ಹೊಂದಿದೆ. ಸೋವಿಯತ್ ಪತನದ ನಂತರ ಈ ಸಂಬಂಧ ಮತ್ತಷ್ಟು ಗಟ್ಟಿಯಾಗಿದೆ. ಇದಕ್ಕೆ, ಶಸ್ತ್ರಾಸ್ತ್ರಗಳು ಮತ್ತು ಸೇನಾ ಸಲಕರಣೆಗಳಿಗಾಗಿ ಉಕ್ರೇನ್ ಮೇಲಿನ ಅವಲಂಬನೆಯೇ ಪ್ರಮುಖ ಕಾರಣ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಸೋವಿಯತ್ ರಷ್ಯಾದ ಎಕೆ 47 ಸರಣಿಯ ರೈಫಲ್‌ಗಳು ವಿಶ್ವದ ಹಲವು ಸೇನೆಗಳಲ್ಲಿ ಬಳಕೆಯಲ್ಲಿವೆ. ಇದಕ್ಕೆ ಭಾರತವೂ ಹೊರತಲ್ಲ. ಈ ರೈಫಲ್ ತಯಾರಿಕೆಯಲ್ಲಿ ಬಳಸುವ ಹಲವು ಬಿಡಿಭಾಗಗಳು, ಈ ರೈಫಲ್‌ನಲ್ಲಿ ಬಳಸುವ ಗುಂಡುಗಳ ತಯಾರಿಕೆಯಲ್ಲಿನ ಕಚ್ಚಾ ವಸ್ತುಗಳನ್ನು ಉಕ್ರೇನ್ ಪೂರೈಸಬೇಕು. ಭಾರತೀಯ ಸೇನೆಯ ಮೂರೂ ಪಡೆಗಳಲ್ಲಿ ಬಳಕೆಯಲ್ಲಿರುವ ಈ ರೈಫಲ್‌ಗಳ ನಿರ್ವಹಣೆ ಮತ್ತು ಮೇಲ್ದರ್ಜೆಗೆ ಏರಿಸುವ ಒಪ್ಪಂದಕ್ಕೆ 2021ರ ಫೆಬ್ರುವರಿಯಲ್ಲಿ ಭಾರತ ಮತ್ತು ಉಕ್ರೇನ್ ಸಹಿ ಹಾಕಿವೆ. ನಿರ್ವಹಣೆ ಮತ್ತು ಮೇಲ್ದರ್ಜೆಗೆ ಏರಿಸುವ ಕಾರ್ಯ ಇನ್ನೂ ಪೂರ್ಣವಾಗಿಲ್ಲ. ಉಕ್ರೇನ್‌ನಲ್ಲಿ ಸಂಘರ್ಷ ತೀವ್ರವಾದರೆ ಈ ಕಾರ್ಯಕ್ಕೆ ತೊಡಕಾಗುತ್ತದೆ. ಚೀನಾ ಜತೆಗೆ ಗಡಿ ಸಂಘರ್ಷ ತೀವ್ರವಾಗಿರುವ ಈ ಸಂದರ್ಭದಲ್ಲಿ ಶಸ್ತ್ರಾಸ್ತ್ರಗಳು ಸನ್ನದ್ಧವಾಗಿ ಇಲ್ಲದೇ ಇರುವುದು ಅತ್ಯಂತ ಅಪಾಯಕಾರಿ ಸ್ಥಿತಿ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಭಾರತವು ₹18,699 ಕೋಟಿ ವೆಚ್ಚದಲ್ಲಿ ರಷ್ಯಾದಿಂದ ಯುದ್ಧನೌಕೆಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಯುದ್ಧನೌಕೆಗಳಿಗೆ ಅಗತ್ಯವಿರುವ ಎಂಜಿನ್‌ಗಳನ್ನು ಉಕ್ರೇನ್ ಪೂರೈಸಿದೆ. ಇನ್ನೂ ಹಲವು ಎಂಜಿನ್‌ಗಳು ಪೂರೈಕೆಯಾಗಬೇಕಿವೆ. ಎಂಜಿನ್ ಪೂರೈಕೆಯಲ್ಲಿ ವ್ಯತ್ಯಯವಾದರೆ, ನೌಕೆ ನಿರ್ಮಾಣ ವಿಳಂಬವಾಗುತ್ತದೆ. ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಪ್ರಾಬಲ್ಯವನ್ನು ಮುರಿಯುವ ಉದ್ದೇಶದಿಂದ ಭಾರತವು ಯುದ್ಧನೌಕೆಗಳನ್ನು ಹೆಚ್ಚಿಸುವ ಯೋಜನೆ ಹಾಕಿಕೊಂಡಿದೆ. ಆ ಯೋಜನೆಯ ಭಾಗವಾಗಿರುವ ರಷ್ಯಾದ ಯುದ್ಧನೌಕೆಗಳ ಪೂರೈಕೆ ವಿಳಂಬವಾದರೆ, ಅದು ದೇಶದ ಭದ್ರತೆಗೆ ದೊಡ್ಡ ತೊಡಕಾಗಲಿದೆ. ಹೀಗಾಗಿ ಉಕ್ರೇನ್‌ನಲ್ಲಿ ಸಂಘರ್ಷ ತೀವ್ರವಾಗದಂತೆ ಎಚ್ಚರಿಕೆ ವಹಿಸುವ ಹೊಣೆ ಭಾರತದ ಮೇಲೂ ಇದೆ ಎಂದು ತಜ್ಞರು ಹೇಳಿದ್ದಾರೆ.

ಆದರೆ, ಉಕ್ರೇನ್ ಸಂಘರ್ಷಕ್ಕೆ ಸಂಬಂಧಿಸಿದಂತೆ ಭಾರತವು ಯಾವ ನಿಲುವನ್ನೂ ತೆಗೆದುಕೊಳ್ಳದ ಸ್ಥಿತಿಯಲ್ಲಿದೆ. ಉಕ್ರೇನ್‌ನಲ್ಲಿ ರಷ್ಯಾ ಮತ್ತು ಅಮೆರಿಕ ನೇತೃತ್ವದ ನ್ಯಾಟೊ ಪಡೆಗಳ ಮಧ್ಯೆ ಸಂಘರ್ಷ ನಡೆಯುವ ಸಾಧ್ಯತೆ ಇರುವ ಕಾರಣ, ಎರಡೂ ಬಣಗಳನ್ನು ಬೆಂಬಲಿಸುವ ಸ್ಥಿತಿಯಲ್ಲಿ ಭಾರತ ಇಲ್ಲ. ಈ ಸಂಘರ್ಷದಲ್ಲಿ ರಷ್ಯಾವನ್ನು ಭಾರತ ಬೆಂಬಲಿಸಿದರೆ, ಅಮೆರಿಕದ ಕೆಂಗಣ್ಣಿಗೆ ಮತ್ತು ಆ ಮೂಲಕ ಆರ್ಥಿಕ ನಿರ್ಬಂಧಕ್ಕೆ ಗುರಿಯಾಗುವ ಅಪಾಯವಿದೆ. ಅದೇ ರೀತಿ ಅಮೆರಿಕವನ್ನು ಬೆಂಬಲಿಸಿದರೆ, ರಷ್ಯಾದ ಜತೆಗೆ ಭಾರತದ ಸಂಬಂಧ ಹಳಸುವ ಅಪಾಯವಿದೆ. ಹೀಗಾಗಿ ಈ ವಿಚಾರದಲ್ಲಿ ಭಾರತ ಯಾವ ನಿಲುವು ತೆಗೆದುಕೊಳ್ಳಬೇಕು ಎಂಬುದು ಅತ್ಯಂತ ಮಹತ್ವದ ಅಂಶವಾಗಿದೆ. ಆದರೆ ಇದರಲ್ಲಿ ವಿಳಂಬ ಮಾಡುವುದೂ ಸರಿಯಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅವಕಾಶಗಳು ಹಾಗೂ ಆತಂಕಗಳು

ತನ್ನ ದೇಶದ ಭಾಷೆ ಹಾಗೂ ಸಂಸ್ಕೃತಿಯನ್ನು ಹಂಚಿಕೊಂಡಿರುವ ಭೂ ಭಾಗಗಳು ತನಗೆ ಸೇರಬೇಕು ಎಂಬುದು ರಷ್ಯಾದ ಪ್ರತಿಪಾದನೆ. ಉಕ್ರೇನ್ ಸಹಜವಾಗಿ ತನ್ನದು ಎನ್ನುವುದು ಪುಟಿನ್ ನಿಲುವು. ಪೂರ್ವ ಯುರೋಪ್‌ನಲ್ಲಿ ನ್ಯಾಟೊ ಅಸ್ತಿತ್ವದಿಂದ ತನ್ನ ಪ್ರಾದೇಶಿಕ ಭದ್ರತೆಗೆ ಅಪಾಯವಿದೆ ಎಂಬುದು ಪುಟಿನ್ ಅವರ ಆತಂಕ. ಇತ್ತೀಚೆಗೆ ಉಕ್ರೇನ್ ಸಹ ನ್ಯಾಟೊ ಸದಸ್ಯ ದೇಶವಾಗಿರುವುದು ಅವರನ್ನು ಕೆರಳಿಸಿದೆ. ರಷ್ಯಾ ಜೊತೆ ಗಡಿ ಹಂಚಿಕೊಂಡಿರುವ ಉಕ್ರೇನ್‌ನಲ್ಲಿ ನ್ಯಾಟೊ ಪಡೆಗಳು ಬೀಡುಬಿಟ್ಟರೆ, ಮುಂದೆ ರಷ್ಯಾಗೆ ಅಪಾಯವಾಗಲಿದೆ ಎಂಬುದು ಅವರ ಈ ಆತಂಕಕ್ಕೆ ಕಾರಣ. ಉಕ್ರೇನ್ ಅನ್ನು ತನ್ನ ಕಾರ್ಯತಂತ್ರದ ಪ್ರಮುಖ ಪಾಲುದಾರ ಎಂದು ಅಮೆರಿಕ ಭಾವಿಸಿರುವುದು ರಷ್ಯಾಗೆ ಇನ್ನಷ್ಟು ಭೀತಿ ಮೂಡಿಸಿದೆ.

ರಷ್ಯಾದ ಅತಿಕ್ರಮಣ ಹುನ್ನಾರವನ್ನು ತಡೆಯುವುದು ಅಮೆರಿಕ ಹಾಗೂ ಐರೋಪ್ಯ ಒಕ್ಕೂಟಗಳ ಉದ್ದೇಶ. ಕ್ರಿಮಿಯಾ, ಜಾರ್ಜಿಯಾವನ್ನು ವಶಪಡಿಸಿಕೊಂಡಂತೆ, ಉಕ್ರೇನ್ ಅನ್ನೂ ರಷ್ಯಾ ವಶಕ್ಕೆ ತೆಗೆದುಕೊಳ್ಳುವ ಸಾಧ್ಯತೆಯಿದ್ದು, ಅದಕ್ಕೆ ಅವಕಾಶ ಮಾಡಿಕೊಡದಿರಲು ನ್ಯಾಟೊ ಸದಸ್ಯ ದೇಶಗಳು ನಿರ್ಧರಿಸಿವೆ. ರಷ್ಯಾದ ಮೇಲೆ ಸೇನಾ ಕಣ್ಗಾವಲು ಹಾಕಲು ಉಕ್ರೇನ್‌ನ ವಾಯುನೆಲೆ ಸಾಕಷ್ಟು ನೆರವಾಗುತ್ತವೆ. ಭವಿಷ್ಯದಲ್ಲಿ ರಷ್ಯಾ ಮೇಲೆ ಯುದ್ಧ ಎದುರಾದಲ್ಲಿ, ಉಕ್ರೇನ್ ಅನ್ನು ನೆಲೆಯಾಗಿಸಿಕೊಂಡು ದಾಳಿ ನಡೆಸಲು ಸುಲಭವಾಗುತ್ತದೆ ಎನ್ನಲಾಗಿದೆ. ಅಮೆರಿಕ ಹಾಗೂ ಯುರೋಪ್‌ನ ಮಾರುಕಟ್ಟೆ ವಿಸ್ತರಣೆಗೆ ಉಕ್ರೇನ್ ನೆರವಾಗಬಹುದು ಎಂಬುದು ಇನ್ನೊಂದು ಲೆಕ್ಕಾಚಾರ.

ಉಕ್ರೇನ್ ದೇಶವು ಅತಿಹೆಚ್ಚಾದ ಫಲವತ್ತಾದ ಕೃಷಿ ಭೂಮಿಗೆ ಹೆಸರಾಗಿದೆ. ಹೀಗಾಗಿ ಉಕ್ರೇನ್ ಅನ್ನು ಯುರೋಪ್‌ನ ಅನ್ನದ ಬಟ್ಟಲು ಎಂದೇ ಕರೆಯಲಾಗುತ್ತದೆ. ಇಲ್ಲಿನ ಕಪ್ಪುಮಣ್ಣಿನಲ್ಲಿ ಬೆಳೆಯುವ ಸೂರ್ಯಕಾಂತಿ, ಸೋಯಾಬೀನ್ಸ್ ಹಾಗೂ ಎಣ್ಣೆಬೀಜಗಳು ಹೆಸರುವಾಸಿ. ಇವುಗಳ ರಫ್ತಿನಲ್ಲಿ ಉಕ್ರೇನ್ ಜಾಗತಿಕ ನಾಯಕ ಎನಿಸಿಕೊಂಡಿದೆ. ಕೃಷಿಯಿಂದ ಸಮೃದ್ಧವಾಗಿರುವ ಉಕ್ರೇನ್, ರಷ್ಯಾದ ಜೊತೆಗಿದ್ದರೆ ದೊಡ್ಡ ಬಲ ಎಂಬುದು ಅದರ ವಾದ. ಇಲ್ಲಿನ ಬಂದರುಗಳು ವ್ಯಾಪಾರ ವಹಿವಾಟಿಗೆ ಹೇಳಿಮಾಡಿಸಿದ ಜಾಗದಲ್ಲಿರುವುದೂ ಪ್ರಮುಖ ಅಂಶವಾಗಿದೆ.

ಜಾಗತಿಕ ಪರಿಣಾಮಗಳು

ಉಕ್ರೇನ್‌ನಲ್ಲಿ ಸಂಘರ್ಷ ತೀವ್ರವಾದರೆ ಅದು ಜಾಗತಿಕ ಮಟ್ಟದಲ್ಲೂ ಭಾರಿ ಪರಿಣಾಮ ಬೀರುವ ಅಪಾಯಗಳಿವೆ ಎನ್ನಲಾಗಿದೆ. ಅಮೆರಿಕ ನೇತೃತ್ವದ ನ್ಯಾಟೊ ಪಡೆಗಳು ಮತ್ತು ರಷ್ಯಾದ ಸೇನೆಯು, ವಿಶ್ವದ ಹಲವೆಡೆ ಶಾಂತಿಪಾಲನಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಜತೆಗೆ ಭಯೋತ್ಪಾದನೆ ವಿರುದ್ಧ ಜಂಟಿಯಾಗಿ ಹೋರಾಡುತ್ತಿವೆ. ಅವುಗಳಲ್ಲಿ ಸಿರಿಯಾ ಮುಖ್ಯವಾದುದು. ಉಕ್ರೇನ್‌ನಲ್ಲಿನ ಸಂಘರ್ಷದಿಂದ ಈ ಕಾರ್ಯಾಚರಣೆಯಲ್ಲಿನ ಸಮನ್ವಯಕ್ಕೆ ಧಕ್ಕೆಯಾಗುವ ಅಪಾಯವಿದೆ. ಶಾಂತಿಪಾಲನಾ ಪಡೆಗಳಿಗೆ ಮದ್ದುಗುಂಡುಗಳ ಪೂರೈಕೆಯಲ್ಲಿ ವ್ಯತ್ಯಯವಾಗುವ ಅಪಾಯವೂ ಇದೆ ಎನ್ನಲಾಗಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಆಧಾರ: ದಿ ಗಾರ್ಡಿಯನ್, ಬಿಬಿಸಿ, ರಾಯಿಟರ್ಸ್, ಎಎಫ್‌ಪಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 28

ಬ್ರಹ್ಮನ ಸುಳ್ಳಿಗೆ ಕೇದಗೆಹೂ ಸಾಕ್ಷಿ

ಮೇಲಿನಿಂದ ಕೆಳಗೆ ಬೀಳುತ್ತಿದ್ದ ಕೇದಗೆಹೂವು ಶಿವನ ಶಿರಸ್ಸಿನ ಮೇಲೆ ಇತ್ತು. ಬ್ರಹ್ಮ-ವಿಷ್ಣು ಇಬ್ಬರೂ ಕಂಬದ ಆದಿ ಮತ್ತು ಕೊನೆಗಳನ್ನು ಹುಡುಕುತ್ತಾ ದಿಕ್ಕು ತಪ್ಪಿದ್ದನ್ನು ನೋಡಿದ ಸ್ತಂಭರೂಪೀ ಪರಮೇಶ್ವರ ನಕ್ಕಾಗ, ಅವನ ಶಿರಸ್ಸು ಸ್ವಲ್ಪ ಅಲುಗಿತು. ಆಗ ಶಿವನ ಶಿರಸ್ಸಿನಲ್ಲಿದ್ದ ಉತ್ತಮವಾದ ಕೇದಗೆ ಪುಷ್ಪವು ಬ್ರಹ್ಮ-ವಿಷ್ಣುಗಳ ಅನುಗ್ರಹಕ್ಕಾಗಿ ಕೆಳಗೆ ಬಿದ್ದಿತ್ತು. ಇದು ತಿಳಿಯದ ಬ್ರಹ್ಮ 'ಪುಷ್ಪರಾಜನಾದ ಕೇದಗೆಯೆ! ನೀನು ಎಲ್ಲಿಂದ ಬೀಳುತ್ತಲಿರುವೆ?' ಎಂದು ಕೇಳುತ್ತಾನೆ. ಅದಕ್ಕೆ ಕೇದಗೆಯು 'ಚಕ್ಷುಸ್ಸೇ ಮೊದಲಾದ ಪ್ರಮಾಣಗಳಿಂದ ತಿಳಿಯಲು ಅಸಾಧ್ಯವಾದ ಈ ಕಂಬದ ಮಧ್ಯದಿಂದ ಬಹಳ ಕಾಲದಿಂದ ಬೀಳುತ್ತಲಿರುವೆ. ಆದರೆ, ಇದರ ನೆಲೆಯು ಇದುವರೆಗೂ ನನಗೇ ಕಾಣಿಸಲಿಲ್ಲ. ಆದುದರಿಂದ ನೀನೂ ಈ ಸ್ತಂಭದ ಮೇಲ್ತುದಿಯನ್ನು ನೋಡುವ ಆಸೆಯನ್ನು ಬಿಡು' ಎಂದು ಹೇಳಿತು. ಆಗ ಬ್ರಹ್ಮ 'ಎಲೈ ಕೇದಗೆ! ಇನ್ನು ಮುಂದೆ ನೀನು ನನ್ನ ಸ್ನೇಹಿತನು. ಈ ಸ್ನೇಹಿತನಿಗಾಗಿ ನನಗೆ ಬೇಕಾದ ಒಂದು ಕಾರ್ಯವನ್ನು ನೀನು ನಡೆಸಿ ಕೊಡಬೇಕು' ಅಂತ ಕೋರಿದ.

ಅದೇನೆಂದು ಕೇದಗೆ ಕೇಳಿದಾಗ, ಬ್ರಹ್ಮ 'ನೀನು ನನ್ನೊಂದಿಗೆ ಬಂದು, ವಿಷ್ಣುವಿಗೆ ಒಂದು ಸುಳ್ಳು ಹೇಳಬೇಕು. ಈ ಸ್ತಂಭದ ಕೊನೆಯನ್ನು ಬ್ರಹ್ಮ ನೋಡಿರುವನು, ಇದಕ್ಕೇ ನಾನೇ ಸಾಕ್ಷಿ ಎಂದು ಹೇಳಬೇಕು' ಎಂದ. ಬ್ರಹ್ಮ ಬೇಡಿಕೊಂಡಿದ್ದರಿಂದ ಕೇದಗೆಗೆ ಕನಿಕರವಾಯಿತು. ಆದರೆ ಸುಳ್ಳು ಹೇಳುವುದು ತಪ್ಪು ಅಂತ ಶಾಸ್ತ್ರ ಹೇಳಿದೆ; ಆದ್ದರಿಂದ ಸುಳ್ಳು ಹೇಳಲಾರೆ ಎಂದಿತು. ಆಗ ಬ್ರಹ್ಮ, ಅತ್ಯಂತ ಆಪತ್ತಿನಲ್ಲಿರುವವರನ್ನು ರಕ್ಷಿಸಲು ಸುಳ್ಳನ್ನು ಹೇಳಬಹುದು ಎಂದು ಶಾಸ್ತ್ರ ಹೇಳಿರುವುದನ್ನು ನೆನಪಿಸಿದ. ಒಲ್ಲದ ಮನಸ್ಸಿನಿಂದಲೇ ಕೇದಗೆಹೂವು ಸುಳ್ಳು ಹೇಳಲು ಒಪ್ಪಿಕೊಂಡಿತು.

ಬ್ರಹ್ಮ ಕೇದಗೆಯೊಂದಿಗೆ, ಸ್ತಂಭದ ನೆಲೆ ತಿಳಿಯದೆ ಬಳಲಿ ಕೂತಿದ್ದ ವಿಷ್ಣುವಿನ ಬಳಿ ಬಂದ. ಬಾಡಿದ ವಿಷ್ಣುವಿನ ಮುಖ ನೋಡಿದ ಮತ್ತಷ್ಟು ಸಂತೋಷದಿಂದ ಹಿಗ್ಗಿದ; ವಿಷ್ಣುವನ್ನು ಲೇವಡಿ ಮಾಡಿ ಹಂಗಿಸಿದ. 'ಎಲೈ ಹರಿಯೇ! ಸ್ತಂಭದ ಕೊನೆ ತುದಿಯನ್ನು ನಾನು ನೋಡಿಬಂದೆ. ಇದಕ್ಕೆ ಈ ಕೇದಗೆಯೇ ಸಾಕ್ಷಿ. ಬೇಕಿದ್ದರೆ ಕೇಳು' ಅಂತ ಕೇದಗೆ ಪುಷ್ಪದತ್ತ ಕೈ ತೋರಿಸಿದ. ಆಗ ಕೇದಗೆಯೂ ಬ್ರಹ್ಮ ಕಂಬದ ತುದಿ ನೋಡಿದ್ದು ನಿಜವೆಂದು ವಿಷ್ಣುವಿಗೆ ಸುಳ್ಳು ಹೇಳಿತು. ಹರಿಯು ಬ್ರಹ್ಮ ಮತ್ತು ಕೇದಗೆಗಳ ಮಾತು ನಿಜವೆಂದು ನಂಬಿ, ಬ್ರಹ್ಮನಿಗೆ ಸೋತೆನೆಂದು ಒಪ್ಪಿಕೊಂಡ. ಇದರ ಕಾಣಿಕೆಯಾಗಿ, ಧ್ಯಾನ ಮತ್ತಿತರ ಹದಿನಾರು ಉಪಚಾರಗಳಿಂದ ಬ್ರಹ್ಮನನ್ನು ಪೂಜಿಸಿದ.

ಇದನ್ನು ಕಂಡ ಶಿವ ಉರಿಗೋಪದಿಂದ ಅಗ್ನಿಮಯವಾದ ಕಂಬದಿಂದ ಆವಿರ್ಭಿಸಿ ಬಂದ. ಪ್ರತ್ಯಕ್ಷನಾದ ಈಶ್ವರನನ್ನು ನೋಡಿದ ವಿಷ್ಣುವು ಕೂಡಲೇ ಅವನ ಪಾದಗಳನ್ನು ಹಿಡಿದು, ಭಯದಿಂದ ನಡುಗುತ್ತಲಿದ್ದ ತನ್ನ ಕೈಗಳಿಂದ ನಮಸ್ಕರಿಸಿ, 'ಓ ಪ್ರಭುವೇ! ನೀನು ಕೊನೆ ಮೊದಲಿಲ್ಲದಂತಹ ಸ್ವರೂಪವುಳ್ಳವನು. ಇಂತಹ ನಿನ್ನ ವಿಷಯದಲ್ಲಿ ನಾನೇ ದೊಡ್ಡವನೆಂಬ ದುರಹಂಕಾರಕ್ಕೆ ಒಳಗಾದೆ, ನನ್ನ ತಪ್ಪನ್ನು ಕ್ಷಮಿಸು' ಅಂತ ವಿನೀತನಾಗಿ ಕೇಳಿಕೊಂಡ. ಆಗ ಪ್ರಸನ್ನಚಿತ್ತನಾದ ಈಶ್ವರ 'ನೀನು ಈಶ್ವರನಾಗಬೇಕೆಂಬ ದುರಾಸೆಯುಳ್ಳವನಾದರೂ ಅಗ್ನಿಸ್ತಂಭದ ನೆಲೆಯ ವಿಷಯದಲ್ಲಿ ನಿಜವನ್ನೇ ಆಡಿರುವೆ. ಆದ ಕಾರಣ ಇನ್ನು ಮುಂದೆ ಜನಗಳಲ್ಲಿ ಸತ್ಯನಾರಾಯಣನಾಗಿ ನಿನಗೆ ನನ್ನಂತೆ ಗೌರವವೂ ಪೂಜೆಯೂ ಲಭಿಸುವುದು; ನನ್ನಂತೆಯೇ ನಿನಗೂ ಪುಣ್ಯಕ್ಷೇತ್ರಗಳಲ್ಲಿ ಮೂರ್ತಿಪ್ರತಿಷ್ಠೆ, ಉತ್ಸವ, ಪೂಜೆ ಮುಂತಾದವು ನಡೆಯುವುವು' ಎಂದು ಹರಸಿದ.

ಹೀಗೆ ನಂದಿಕೇಶ್ವರ ಮಂದಾರಪರ್ವತದಲ್ಲಿ ತಪಸ್ಸಿಗೆ ಕುಳಿತ ಸನತ್ಕುಮಾರನಿಗೆ ಮಹಾಕಾಳೇಶ್ವರ ಸ್ತಂಭರೂಪದಲ್ಲಿ ಆವಿರ್ಭವಿಸಿದ ಕಥೆಯನ್ನು ಹೇಳಿದ ಎಂಬಲ್ಲಿಗೆ ಶ್ರೀಶಿವಪುರಾಣದ ವಿದ್ಯೇಶ್ವರಸಂಹಿತೆಯ ಏಳನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರ ವಾಹನವನ್ನು ಪ್ರತಿಭಟನಾಕಾರರು ತಡೆಯುತ್ತಿರುವ ವಿಡಿಯೊವೊಂದು ವೈರಲ್ ಆಗಿದೆ. 'ಉತ್ತರ ಪ್ರದೇಶದಲ್ಲಿ ಚುನಾವಣಾ ಪ್ರಚಾರಕ್ಕೆ ಬಂದ ಕೇಂದ್ರ ಸಚಿವರೊಬ್ಬರಿಗೆ ನೀಡುವ ಗೌರವವಿದು. ಬಿಜೆಪಿ ನಾಯಕರಿಗೆ ಈ ರೀತಿಯ ಅವಮಾನ ಮಾಡುತ್ತಿರುವುದನ್ನು ನೋಡಿ ಹಿಂದೂಗಳಿಗೆ ಬೇಸರವಾಗುತ್ತಿಲ್ಲವೇ? ಇಂಥ ದಿನವನ್ನು ನಾವು ನೋಡಬಾರದಿತ್ತು. ಬಿಜೆಪಿ ನಾಯಕರನ್ನು ಈ ರೀತಿ ಏಕೆ ನಡೆಸಿಕೊಳ್ಳಲಾಗುತ್ತಿದೆ ಎಂಬ ಕುರಿತು ಚಿಂತನೆ ನಡೆಯಬೇಕು' ಎಂದು ವಿಡಿಯೊಗೆ ಅಡಿಬರಹ ಬರೆಯಲಾಗಿದೆ.



ಈ ವಿಡಿಯೊ ಜೊತೆ ನೀಡಿರುವ ಮಾಹಿತಿ ಸುಳ್ಳು ಎಂದು ಇಂಡಿಯಾ ಟುಡೆ ವರದಿ ಮಾಡಿದೆ. ಈಗ ವೈರಲ್ ಆಗುತ್ತಿರುವ ವಿಡಿಯೊ 2020ರದ್ದು. ಹಾಥರಸ್ ಸಾಮೂಹಿಕ ಅತ್ಯಾಚಾರದ ವಿರುದ್ಧ ಪ್ರತಿಭಟಿಸುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರು ಸ್ಮೃತಿ ಇರಾನಿ ಅವರ ವಾಹನವನ್ನು ತಡೆಗಟ್ಟಿದ್ದರು. ಈ ಘಟನೆ ಕುರಿತ ವರದಿಗಳು 'ನಯೂರ್ಝ್ ಟೀವಿ ಯು ಟ್ಯೂಬ್ ವಾಹಿನಿ'ಯಲ್ಲಿ 2020ರ ಅ.3ರಂದು ಪ್ರಕಟವಾಗಿವೆ. ವೈರಲ್ ಆಗಿರುವ ವಿಡಿಯೊದಲ್ಲಿ ಇರುವಂತೆ ಚುನಾವಣಾ ಪ್ರಚಾರದ ವೇಳೆ ಈ ಪ್ರತಿಭಟನೆ ನಡೆದಿಲ್ಲ ಎಂದು ಇಂಡಿಯಾ ಟುಡೆ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ವಿಧಿಯ ಅಧಿಕಾರ

ವಿಧಿಗೆ ನೀಂ ಕಾರ್ಯನಕ್ಷೆಯ ವಿಧಿಸ ಹೊರಡದಿರು |
ಅಧಿಕಾರಿ ನೀನಲ್ಲ; ವಿಧಿ ಬೆಪ್ಪನಲ್ಲ ||
ಹದವರಿತು ವಿಧಿ ತಾನೆ ಕುದುರಿಸುವನೆಲ್ಲವನು |
ಅದಟದಿರು ನೀನವನ – ಮಂಕುತಿಮ್ಮ || 549 ||

ಪದ-ಅರ್ಥ: ಹದವರಿತು = ಹದವ + ಅರಿತು, ಕುದುರಿಸುವನೆಲ್ಲವನು = ಕುದುರಿಸುವನು(ಸರಿಪಡಿಸುವನು) + ಎಲ್ಲವನು, ಅದಟದಿರು = ಗದರಿಸದಿರು, ನೀನವನ = ನೀನು + ಅವನ.

ವಾಚ್ಯಾರ್ಥ: ವಿಧಿಗೆ ನೀನು ಕಾರ್ಯದ ರೂಪುರೇಷೆಗಳನ್ನು ವಿಧಿಸಲು ಹೋಗಬೇಡ. ನೀನು ಅದಕ್ಕೆ ಅಧಿಕಾರಿಯಲ್ಲ ಮತ್ತು ವಿಧಿ ಮೂರ್ಖನಲ್ಲ. ಸರಿಯಾದ ಹದವನ್ನು ನೋಡಿಕೊಂಡು ಎಲ್ಲವನ್ನೂ ಸರಿಪಡಿಸುತ್ತಾನೆ. ಅವನನ್ನು ಗದರಿಸ ಹೋಗದಿರು.

ವಿವರಣೆ: ವಿಧಿ ಎನ್ನುವುದೊಂದು ನಮ್ಮ ಭಾರತೀಯ ಕಲ್ಪನೆ. ವಿಧಿ ನಮ್ಮ ಎಲ್ಲ ಚಿಂತನೆಗಳನ್ನು ಮೀರಿದ್ದು. ಅದರ ಹೊಂಚು ನಮಗೆ ತಿಳಿಯಲಾರದು. ನಮ್ಮ ಅತ್ಯಂತ ಯೋಜಿತವಾದ ಕಾರ್ಯಗಳು ನಡೆಯದೆ ಹೋದಾಗ ಅಥವಾ ಯೋಜಿಸದೇ ಇದ್ದ ಕಾರ್ಯಗಳು ಕಲ್ಪನಾತೀತವಾಗಿ ನಡೆದು ಹೋದಾಗ ಅವು ಯಾಕೆ ಹಾಗೆ ನಡೆದವು ಎಂಬುದನ್ನು ವಿವರಿಸಲು ನಮ್ಮ ತರ್ಕ ಸೋತು ಹೋಗುತ್ತದೆ. ನಮ್ಮ ತರ್ಕದ ಮಿತಿಗಳನ್ನು ದಾಟಿದ, ಅವರ್ಣನೀಯವಾದ ಸಂದರ್ಭಗಳನ್ನು ವಿವರಿಸಲು ಈ 'ವಿಧಿ' ಎಂಬ ಪದವನ್ನು ಹಿರಿಯರು ಬಳಸಿರಬೇಕು. ನಮಗೆ ಯಾವುದೇ ರೀತಿಯ ಸಂಬಂಧವಿಲ್ಲದ ವ್ಯಕ್ತಿಯೋ, ಕೆಲಸವೋ ನಮಗೆ ಸಹಾಯಕವಾಗಿ ಅಥವಾ ವಿರುದ್ಧವಾಗಿ ನಡೆಯುವುದನ್ನು ಹೇಗೆ ವಿವರಿಸುವುದೆಂದು ತಿಳಿಯದೆ, ಅದು ವಿಧಿಯ ಕಾರ್ಯ ಎಂದಿರಬೇಕು. ಯಾಕೆಂದರೆ ಅದು ಕಾರ್ಯ-ಕಾರಣ ಸಿದ್ಧಾಂತಕ್ಕೆ ಹೊರಗು.

ಅಯೋಧ್ಯೆಯ ರಾಜ್ಯಭಾರ ಮಾಡುತ್ತಿದ್ದ ರಾಜಾಹರಿಶ್ಚಂದ್ರ. ಅವನು ತನ್ನ ಪಾಡಿಗೆ ತಾನು ಸಂತೋಷವಾಗಿ, ಪ್ರಾಮಾಣಿಕವಾಗಿ ರಾಜ್ಯಭಾರ ಮಾಡುತ್ತಿದ್ದ. ಆಗ ಸ್ವರ್ಗದಲ್ಲಿ ಮಹರ್ಷಿ ವಶಿಷ್ಠರಿಗೆ ಮತ್ತು ವಿಶ್ವಾಮಿತ್ರರಿಗೆ ವಾದ ಪ್ರಾರಂಭವಾಯಿತಂತೆ. ಭೂಲೋಕದಲ್ಲಿ ಸತ್ಯವನ್ನೇ ಹೇಳಿ ಬದುಕುವುದು ಸಾಧ್ಯವಿಲ್ಲವೆಂಬುದು ವಿಶ್ವಾಮಿತ್ರರ ವಾದ. ಹಾಗಿಲ್ಲ, ಹರಿಶ್ಚಂದ್ರನಂಥ ಸತ್ಯವಾದಿಗಳೂ ಇದ್ದಾರೆ ಎಂದರು ವಶಿಷ್ಠರು. ಒತ್ತಡದ ಸ್ಥಿತಿ ಬಂದಾಗ ಎಂಥವನೂ ಸತ್ಯವನ್ನೂ ಬಿಡುತ್ತಾನೆ ಎಂದು ವಾದಿಸಿದರು ವಿಶ್ವಾಮಿತ್ರರು. ಅದಕ್ಕೆ ವಶಿಷ್ಠರು ಒಪ್ಪದಿದ್ದುದರಿಂದ ಪರೀಕ್ಷೆ ಮಾಡಿ ನೋಡಲು ವಿಶ್ವಾಮಿತ್ರರು ತೀರ್ಮಾನಿಸಿದರು. ಅದಕ್ಕೆ ಪ್ರಯೋಗಪಶುವಾದದ್ದು ಹರಿಶ್ಚಂದ್ರ. ವಿಶ್ವಾಮಿತ್ರರು ಹರಿಶ್ಚಂದ್ರನನ್ನು ಯಾವ ಮಟ್ಟಿಗೆ ಪರೀಕ್ಷಿಸಿದರು ಎನ್ನುವುದು ಪುರಾಣದ ಕಥೆಯಾಯಿತು. ಪಾಪ! ಇದಕ್ಕೆ ಹರಿಶ್ಚಂದ್ರ ಮಾಡಿದ ತಪ್ಪೇನು? ಅದನ್ನು ನಾವು ವಿಧಿಯ ಪರೀಕ್ಷೆ ಎಂದೆವು.

ಇಂದಿಗೂ ಹಾಗೆಯೇ ಇದೆ. ನಾನಿಷ್ಟು ಪ್ರಯತ್ನ ಮಾಡಿದ್ದೇನೆ, ಇಷ್ಟು ಓದಿದ್ದೇನೆ. ಇಷ್ಟು ಜನರಿಗೆ ಸಹಾಯ ಮಾಡಿದ್ದೇನೆ, ಆದ್ದರಿಂದ ನನಗೆ ಇಂಥ ಫಲ ಸಿಗಲಿ ಎಂದು ಆಶಿಸುವುದು ಸಾಧ್ಯವಿಲ್ಲ. ಅದು ಹಾಗೆ ಆಗಿಯೇ ತೀರುತ್ತದೆಂಬ ಭರವಸೆಯಿಲ್ಲ. ಒಂದು ಸುಭಾಷಿತ ಇದನ್ನು ಅನುಮೋದಿಸುತ್ತದೆ.

ಮನಸಾಪಿ ಯದಸ್ಪೃಷ್ಟಂ ದೂರಾದಪಿ ಯದುಜ್ಝಿತಮ್ |
ಅದಪ್ಯುಪಾಯೈ ರ್ವಿವಿಧೈರ್ವಿಧಿರಿಚ್ಛನ್ ಪ್ರಯಚ್ಛತಿ||

'ಯಾವುದನ್ನು ಮನಸ್ಸಿನಿಂದ ಕೂಡ ಮುಟ್ಟಲಾಗದೋ, ಯಾವುದು ನಿರಾಸೆಯಿಂದ ತಿರಸ್ಕರಿಸಲ್ಪಟ್ಟಿದೆಯೋ, ಅಂಥದನ್ನೂ ಸಹ ಬಗೆಬಗೆಯ ಮಾರ್ಗಗಳಿಂದ ವಿಧಿ ನಡೆಸಿ ಬಿಡುತ್ತದೆ' ಅದನ್ನು ಕಗ್ಗ ಹೇಳುತ್ತದೆ. ವಿಧಿಗೆ ನೀನು ಹೀಗೆ ಮಾಡು, ಹಾಗೆ ತಿಳಿಸು ಎಂದು ಅಪ್ಪಣೆ ಕೊಡಬೇಡ. ನೀನು ಅಧಿಕಾರಿಯೂ ಅಲ್ಲ, ವಿಧಿ ದಡ್ಡನೂ ಅಲ್ಲ. ಅವನೇ ಎಲ್ಲವನ್ನೂ ಸರಿಯಾದ ಸಮಯದಲ್ಲಿ ಹೊಂದಿಸುತ್ತಾನೆ. ಅವನನ್ನು ಗದರಿಸುವುದು ಬೇಡ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 26, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಹೇಮಂತ ಋತು ಮಕರ ಮಾಸದ 12 ನೇ ದಿನ
ತಿಥಿ: (ಪೌಷ ಕೃಷ್ಣ) ನವಮಿ ಗಂ. 28-35 ನಕ್ಷತ್ರ: ಸ್ವಾತಿ ಗಂ. 10-06 ಯೋಗ: ಶೂಲ ಗಂ. 06-51, ಗಂಡ ಗಂ. 28-08 ಕರಣ: ತೈತಿಲ ಗಂ. 17-34. ರಾಹುಕಾಲ : ಮಧ್ಯಾಹ್ನ 12:00 – 01:30 ಸೂರ್ಯೋದಯ : 07-01 ಸೂರ್ಯಾಸ್ತ : 06-25 ಮುಸ್ಲಿಂ ದಿನಾಂಕ : 22 ಜುಮಾದುಸ್ಸಾನಿ ದಿನ ವಿಶೇಷ : ಗಣರಾಜ್ಯೋತ್ಸವ ದಿನ
ಅದೃಷ್ಟ ಸಂಖ್ಯೆ: 8, 12

ಮೇಷ: ಸಾಮಾಜಿಕ ಚಟುವಟಿಕೆಗಳು ಹೆಚ್ಚಲಿವೆ. ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. ಇತರರ ಬಗ್ಗೆ ಅನುಕಂಪ ತೋರುವ ನೀವು, ನಿಮ್ಮ ಬಗ್ಗೆಯೂ ಗಮನವಿರಿಸಿಕೊಳ್ಳಲು ಮರೆಯದಿರಿ.

ವೃಷಭ: ಕೈ ತಪ್ಪಿದ ಅವಕಾಶಗಳು ಪುನಃ ದೊರೆಯಲಿವೆ. ಈ ಬಾರಿ ಅವಕಾಶವನ್ನು ಸದುಪಯೋಗಿಸಿಕೊಳ್ಳಿ. ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆಗೆ ಅನುಕೂಲವಾಗುವುದು. ಸರ್ಕಾರಿ ಕೆಲಸಗಳು ಕೈಗೂಡುವುದು.

ಮಿಥುನ: ಮಾರುಕಟ್ಟೆಯ ಬದಲಾವಣೆ ಅನುಕೂಲಕ್ಕೆ ತಕ್ಕಂತೆ ಇರುವುದು. ವ್ಯವಹಾರಗಳಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಶಿಕ್ಷಕ ವರ್ಗದವರಿಗೆ ಅಧಿಕ ಜವಾಬ್ದಾರಿಯ ಕೆಲಸವಿರುವುದು.

ಕರ್ಕಾಟಕ: ಇಂದು ನಿಮ್ಮ ವಾಕ್ಚಾತುರ್ಯವನ್ನು ಪ್ರದರ್ಶಿಸಲು ಸುವರ್ಣಾವಕಾಶ ಲಭಿಸುವುದು. ಧೈರ್ಯದಿಂದ ನಿಮ್ಮ ವಾದವನ್ನು ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ಅನಗತ್ಯ ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ.

ಸಿಂಹ: ನಿಮ್ಮ ಪ್ರಯತ್ನಗಳಿಗೆ ವ್ಯಕ್ತಿಯೊಬ್ಬರ ಬೆಂಬಲ ದೊರೆತು ಯಶಸ್ವಿಯಾಗಿ ನೆರವೇರಲಿದೆ. ತೈಲ ಲೇಪನ, ಅಭ್ಯಂಗದಂತಹ ವಿಧಿಯ ಆಚರಣೆಯಿಂದ ಹಿರಿಯರ ಆರೋಗ್ಯ ಉತ್ತಮಗೊಳ್ಳುವುದು.

ಕನ್ಯಾ: ಹಲವು ದಿನದ ಬಿಡುವಿಲ್ಲದ ಕೆಲಸದಿಂದ ಬಳಲಿರುವ ನೀವು ವಿಶ್ರಾಂತಿಗಾಗಿ ಸ್ವಲ್ಪ ಸಮಯವನ್ನು ಮೀಸಲಿಡುವುದು ಉತ್ತಮ. ಖಾದ್ಯ ತೈಲಗಳ ವ್ಯಾಪಾರಗಳಿಂದ ಹೇರಳ ಲಾಭ. ಗೃಹಕ್ಕೆ ಬಂಧು-ಮಿತ್ರರ ಆಗಮನ.

ತುಲಾ: ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಬರಲಿದೆ. ಪ್ರಯತ್ನಪಟ್ಟ ಸರ್ಕಾರಿ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ. ಉದ್ಯೋಗದಲ್ಲಿ ವದಂತಿಗೆ ಕಿವಿಗೊಡದಿರಿ.

ವೃಶ್ಚಿಕ: ನಿರುದ್ಯೋಗಿಗಳ ಅಲೆದಾಟ ತಪ್ಪಿ ಹೊಸ ಕೆಲಸ ಪ್ರಾರಂಭ ಮಾಡುವ ಅವಕಾಶ. ಬುದ್ಧಿವಂತಿಕೆ ಹಾಗೂ ಯೋಜನೆಗಳು ವ್ಯವಹಾರವನ್ನು ಸುಲಭಗೊಳಿಸುತ್ತದೆ. ಗುಂಪು ಚಟುವಟಿಕೆಗಳಿಗೆ ಮುಂದಾಳತ್ವವು ಅನಗತ್ಯವಾಗಿರುವುದು.

ಧನು: ಸಾಮಾಜಿಕ ಚಟುವಟಿಕೆಗಳಲ್ಲಿ ನಿಮ್ಮ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುವುದು. ಭಾವನಾತ್ಮಕ ಸಂಬಂಧಗಳಿಂದ ದೂರ ಉಳಿಯುವ ಸ್ಥಿತಿ ಬರಲಿದೆ. ಕಾಫಿ ಬೆಳೆಗಾರರಿಗೆ ಉತ್ತಮ ಆದಾಯ.

ಮಕರ: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಯನ್ನು ಎದುರಿಸಬೇಕಾದರೂ ನಿಮ್ಮ ಸ್ವಲ್ಪ ಪ್ರಯತ್ನದಿಂದ ಜಯವನ್ನು ಹೊಂದುವಿರಿ. ಆರ್ಥಿಕ ಭದ್ರತೆ ಬಗ್ಗೆ ತಯಾರಿ ನಡೆಸಿಕೊಳ್ಳಿ. ಜಾಗ ಖರೀದಿಸಲು ಅಥವಾ ಒಪ್ಪಂದಕ್ಕೆ ಸಹಿ ಹಾಕಲು ಸುದಿನ.

ಕುಂಭ: ಸ್ವತಂತ್ರ ಮನೋಭಾವದಿಂದ ಹೊರ ಬರುವಂತಾಗಲಿದೆ. ಮನೆಯಲ್ಲಿ ಅಗತ್ಯ ಹೊಂದಾಣಿಕೆಯನ್ನು ಮಾಡಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಅದರಿಂದಾಗಿ ಮನೆಯ ವಾತಾವರಣ ಸರಿಯಾಗಿರುವುದು.


ಮೀನ: ಹೊಸ ಕ್ಲಿನಿಕ್ ಆರಂಭದ ಶುಭಕಾರ್ಯಗಳ ಬಗ್ಗೆ ಹಿರಿಯರೊಡನೆ ಸಮಾಲೋಚನೆ ನಡೆದು ತೀರ್ಮಾನ ಸಿಗಲಿದೆ. ಶಿಕ್ಷಣ ಮುಂದುವರೆಸಲು ಬಂಧುಗಳ ಸಹಾಯ ದೊರಕುವುದು.

ಪದಬಂಧ 4850

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರಪಂಚದ ನಾನಾ ರಾಷ್ಟ್ರಗಳ ಒಕ್ಕೂಟ (4)
2.ಹರನಲ್ಲೇ ಅಡಗಿರುವ ಶೂರ! (3)
4.ಬಿಗಿದ ಕಂಠ (3)
6.ಗದ್ದಲ ಇಲ್ಲಿ ಕಾಣುತ್ತಿದೆ (3)
7.ಲೋಹದ ಹಕ್ಕಿಯಲ್ಲಿನ ಪಯಣ (5)
10.ಮುಳ್ಳುಗಳ ನಡುವೆ ಅರಳುವ ಹೂ (3)
11.ಅಂಧಕಾರ ಇಲ್ಲಿ ಕವಿದಿದೆ (3)
13.ಸಾಲ ಪಡೆದು ನೋಡಿರುವ ಸಮುದ್ರ (3)
14.ಈತ ನೈಪುಣ್ಯವುಳ್ಳವನು (4)

ಮೇಲಿಂದ ಕೆಳಕ್ಕೆ
1.ಯೋಗವಿದ್ದಕ್ಕೇ ಈ ಅಗಲಿಕೆ! (3)
2.ಕೆಲಸಕ್ಕೆ ಬಾರದ ಮಾತು (3)
3.ಕಾಪಾಡುವವ ಇಲ್ಲಿದ್ದಾನೆ (3)
5.ಹಾಸ್ಯವಿಲ್ಲಿ ತಿರುವು ಮುರುವಾಗಿದೆ! (3)
6.ಆಕಾಶವನ್ನು ಮುಟ್ಟುವಂಥ ಕಟ್ಟಡ (5)
8.ಕಂಪನ ಹೀಗೆ ಉಂಟಾಗಿದೆ (3)
9.ಅಜ್ಜ ಇಲ್ಲಿದ್ದಾನೆ (3)
10.ಉತ್ಸವದಲ್ಲಿ ಒಬ್ಬರಿಗೊಬ್ಬರು ಎರಚುವ ಬಣ್ಣದ ಪುಡಿ (3)
12.ದುಂಡನೆಯ ಪಾತ್ರೆಯಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)



4849ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಿಸಿಲ್ಗುದುರೆ3.ಗಣತ5.ಗಡಿ 6.ಸುಪ್ರಭಾತ9.ಪಟ್ಟಾಭಿಷೇಕ 12.ತರಗತಿ14.ಪುಟ15.ನಲ್ನುಡಿ 16.ಹಾಳುಹರಟೆ
ಮೇಲಿಂದ ಕೆಳಕ್ಕೆ: 1.ಬಿಡುಗಡೆ 2.ದುರ್ಜನ4.ತರತಮ7.ಪ್ರತೀಕ 8.ಸಭಿಕ9.ಪತಂಗ 10.ಅಂತರ್ಧಾನ11.ಕಟಕಟೆ 13.ಕುರುಳು

ಸುಡೊಕು 5236

	8			9		5		
6		5					1	
			1		5		7	6
		4	8		3		5	
	5					1		9
2				5			6	
1			9					
	3					6		1
8		6		3	1		9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5235 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ವರದಿಗಾರನನ್ನು ನಿಂದಿಸಿದ ಬೈಡನ್: ವಿಡಿಯೊ ವೈರಲ್

ವಾಷಿಂಗ್ಟನ್ (ಎಎಫ್‌ಪಿ): ಟಿವಿ ಪತ್ರಕರ್ತರೊಬ್ಬರಿಗೆ ಅಮೆರಿಕ ಅಧ್ಯಕ್ಷ ಜೊ ಬೈಡನ್ ಅವರು ಅಶ್ಲೀಲವಾಗಿ ನಿಂದಿಸಿರುವ ಘಟನೆ ನಡೆದಿದೆ. ಈ ಘಟನೆ ಮೈಕ್ರೊಫೋನ್‌ನಲ್ಲಿ ಸೆರೆಯಾಗಿದೆ.


ವೈಟ್‌ಹೌಸ್‌ನಲ್ಲಿ ಪತ್ರಿಕಾಗೋಷ್ಠಿ ನಡೆಯುವಾಗ ಜೊ ಬೈಡನ್ ಮಾತು ಮುಗಿಸಿದ ಮೇಲೆ ಕೆಲ ಪತ್ರಕರ್ತರು ತೆರಳಲು ಮುಂದಾದರು. ಆದರೆ, ಅಲ್ಲಿದ್ದ ಫಾಕ್ಸ್ ನ್ಯೂಸ್ ವರದಿಗಾರ 'ಹಣದುಬ್ಬರ ಹೆಚ್ಚಾಗಿದೆ. ಇದು ರಾಜಕೀಯ ಹೊಣೆಗಾರಿಕೆಯಾ? ಎಂದು ಅಧ್ಯಕ್ಷರನ್ನು ಪ್ರಶ್ನಿಸಿದ್ದಾರೆ.

ಇದರಿಂದ ಕುಪಿತಗೊಂಡ ಜೊ ಬೈಡನ್ ಕ್ಷೀಣ ಸ್ವರದಲ್ಲಿ 'ಹೌದು ಹೆಚ್ಚಿನ ಹಣದುಬ್ಬರ ಹೆಚ್ಚಿನ ಸ್ವತ್ತು ನಮಗೆ' ಎನ್ನುತ್ತಾ ಪ್ರಶ್ನೆ ಕೇಳಿದ್ದ ಪತ್ರಕರ್ತನನ್ನುದ್ದೇಶಿಸಿ ಅವಾಚ್ಯವಾಗಿ ನಿಂದಿಸಿದ್ದಾರೆ. ಇದು ಅಲ್ಲಿದ್ದವರಿಗೆ ಕೇಳಿಲ್ಲ. ನಂತರ ಫಾಕ್ಸ್ ನ್ಯೂಸ್ ಈ ಬಗ್ಗೆ ವರದಿ ಮಾಡಿ ಅಧ್ಯಕ್ಷರನ್ನು ತರಾಟೆಗೆ ತೆಗೆದುಕೊಂಡಿದೆ.

ಅಲ್ಲದೇ ಈ ಘಟನೆ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅನೇಕ ನೆಟ್ಟಿಗರು ಜಂಟಲ್‌ಮನ್ ಜೊ ಬೈಡನ್ ಬಾಯಲ್ಲಿ ಇದೆಂಥಾ ಮಾತು ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಮೆರಿಕದ ಹಣದುಬ್ಬರದ ಬಗ್ಗೆ ಅಧ್ಯಕ್ಷರನ್ನು ಪ್ರಶ್ನೆ ಕೇಳಿದರೆ ಅವರಿಗೆ ಏನನಿಸುತ್ತದೆ ಎಂಬುದಕ್ಕೆ ಅವರ ಮಾತುಗಳೇ ಸಾಕ್ಷಿ ಎಂದು ಫಾಕ್ಸ್ ನ್ಯೂಸ್ ಹೇಳಿದೆ. ಘಟನೆಗೆ ಸಂಬಂಧಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,149
ಇಂದಿನ ಅಂತ್ಯ	17,277
▲	128
ದಿನದ ಗರಿಷ್ಠ	17,309

ವಿನಿಮಯ ದರ

$ ಡಾಲರ್	74.78
£ ಪೌಂಡ್	100.6
€ ಯುರೊ	84.47
¥ ಯೆನ್ (100ಕ್ಕೆ)	65.68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹440
	12 ಮೊಟ್ಟೆಗೆ	₹60
ಮೈಸೂರು	100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1320)
ಸೋಯಾ (ರಿಫೈನ್ಡ್)	₹1222 (1230)
ಸೂರ್ಯಕಾಂತಿ (ರಿಫೈನ್ಡ್)	₹1250 (1260)
ಪಾಮೋಲಿನ್	₹1184 (1187)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1800-2300
ಮಧ್ಯಮ	₹1200-1800
ಸಣ್ಣ	₹600-1200

ಕೊಬ್ಬರಿ ಧಾರಣೆ

ಪುತ್ತೂರು (ಇತರ)	₹4500-11500
ತುರುವೇಕೆರೆ	₹17350-17350
ಕೆ.ಆರ್.ಪೇಟೆ (ಇತರ)	₹8774-8774

ಮಾರುತಿ ಸುಜುಕಿ ಲಾಭ ಶೇ 48ರಷ್ಟು ಕುಸಿತ


ಸಾಂದರ್ಭಿಕ ಚಿತ್ರ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿಯಾದ ಮಾರುತಿ ಸುಜುಕಿ, ಡಿಸೆಂಬರ್ ತ್ರೈಮಾಸಿಕದಲ್ಲಿ ನಿವ್ವಳ ಲಾಭದ ಪ್ರಮಾಣದಲ್ಲಿ ಶೇಕಡ 47.82ರಷ್ಟು ಇಳಿಕೆ ದಾಖಲಿಸಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 1,041 ಕೋಟಿ ನಿವ್ವಳ ಲಾಭ ಗಳಿಸಿದೆ. ಸೆಮಿಕಂಡಕ್ಟರ್ ಕೊರತೆ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಕಾರು ಮಾರಾಟ ಕಡಿಮೆ ಆಗಿರುವುದು ಲಾಭದ ಪ್ರಮಾಣ ತಗ್ಗಲು ಒಂದು ಕಾರಣ.

ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 1,996 ಕೋಟಿ ನಿವ್ವಳ ಲಾಭ ಗಳಿಸಿತ್ತು. 2021ರ ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯ ವಾಹನ ಮಾರಾಟ ಪ್ರಮಾಣವು ಶೇಕಡ 13.1ರಷ್ಟು ಇಳಿಕೆ ಆಗಿದೆ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು 4.95 ಲಕ್ಷ ವಾಹನಗಳನ್ನು ಮಾರಾಟ ಮಾಡಿದ್ದ ಕಂಪನಿಯು, ಈ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ 4.30 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ.

ಜಾಗತಿಕ ಮಟ್ಟದಲ್ಲಿ ಎದುರಾದ ಎಲೆಕ್ಟ್ರಾನಿಕ್ ವಸ್ತುಗಳ ಪೂರೈಕೆ ಕೊರತೆಯ ಕಾರಣದಿಂದಾಗಿ ಡಿಸೆಂಬರ್ ತ್ರೈಮಾಸಿಕದಲ್ಲಿ ವಾಹನ ಉತ್ಪಾದನೆಗೆ ಅಡ್ಡಿ ಉಂಟಾಯಿತು. ಇದರಿಂದಾಗಿ ಅಂದಾಜು 90 ಸಾವಿರ ವಾಹನಗಳ ಉತ್ಪಾದನೆ ಸಾಧ್ಯವಾಗಲಿಲ್ಲ ಎಂದು ಕಂಪನಿಯು ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ವಿವರಿಸಿದೆ.

'ಬೇಡಿಕೆ ಕಡಿಮೆ ಆಗಿರಲಿಲ್ಲ. ಡಿಸೆಂಬರ್ ತ್ರೈಮಾಸಿಕದ ಕೊನೆಯ ವೇಳೆಯಲ್ಲಿ ಕಂಪನಿಯ ಬಳಿ 2.40 ಲಕ್ಷ ವಾಹನಗಳಿಗೆ ಬೇಡಿಕೆಗಳು ಬಾಕಿ ಇದ್ದವು. ಎಲೆಕ್ಟ್ರಾನಿಕ್ ವಸ್ತುಗಳ ಪೂರೈಕೆಯು ನಿಧಾನವಾಗಿ ಸುಧಾರಣೆ ಕಾಣುತ್ತಿದೆ. 2022ರ ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ತ್ರೈಮಾಸಿಕದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ವಿಶ್ವಾಸ ಇದೆ' ಎಂದು ಕಂಪನಿ ಹೇಳಿದೆ.

ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ ತೆಕ್ಕೆಗೆ ಪಿಎಂಸಿ ಬ್ಯಾಂಕ್

ನವದೆಹಲಿ (ಪಿಟಿಐ): ಬಿಕ್ಕಟ್ಟಿಗೆ ಸಿಲುಕಿದ್ದ ಪಂಜಾಬ್ ಆ್ಯಂಡ್ ಮಹಾರಾಷ್ಟ್ರ ಸಹಕಾರ (ಪಿಎಂಸಿ) ಬ್ಯಾಂಕ್ ಅನ್ನು ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವಿಕೆಯು ಮಂಗಳವಾರದಿಂದ ಜಾರಿಗೆ ಬಂದಿದೆ.

ಎರಡು ಬ್ಯಾಂಕ್‌ಗಳ ವಿಲೀನದ ಯೋಜನೆಯನ್ನು ಕೇಂದ್ರ ಸರ್ಕಾರವು ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ಮಂಗಳವಾರದಿಂದ ಅನ್ವಯ ಆಗುವಂತೆ ಪಿಎಂಸಿ ಬ್ಯಾಂಕ್ ಶಾಖೆಗಳು, ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ (ಯುಎಸ್‌ಎಫ್‌ಬಿಎಲ್) ಶಾಖೆಗಳಾಗಿ ಕಾರ್ಯಾಚರಿಸಲಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಪಿಎಂಸಿ ಬ್ಯಾಂಕ್‌ನಲ್ಲಿ ಹಣಕಾಸಿನ ಅಕ್ರಮಗಳು ನಡೆದಿರುವುದು ಬಹಿರಂಗವಾದ ನಂತರ, ಆರ್‌ಬಿಐ ಅದರ ಆಡಳಿತ ಮಂಡಳಿಯನ್ನು ಸೂಪರ್‌ಸೀಡ್ ಮಾಡಿತ್ತು.

ಇದಾದ ಎರಡು ವರ್ಷಗಳ ನಂತರದಲ್ಲಿ ಈ ಸ್ವಾಧೀನವು ಜಾರಿಗೆ ಬರುತ್ತಿದೆ.

ಸೆಂಟ್ರಂ ಫೈನಾನ್ಶಿಯಲ್ ಸರ್ವಿಸಸ್ ಕಂಪನಿಯು ರೆಸಿಲಿಯಂಟ್ ಇನ್ನೊವೇಷನ್ ಪ್ರೈ.ಲಿ. ಜೊತೆಯಾಗಿ ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ಅನ್ನು ಪ್ರವರ್ತಕ ಸ್ಥಾನದಲ್ಲಿ ನಿಂತು ಆರಂಭಿಸಿದೆ.

ಇದಕ್ಕೆ 2021ರ ಅಕ್ಟೋಬರ್‌ನಲ್ಲಿ ಬ್ಯಾಂಕಿಂಗ್ ಪರವಾನಗಿ ದೊರೆತಿದೆ. ನವೆಂಬರ್ 1ರಿಂದ ಯುನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಕಾರ್ಯ ಆರಂಭಿಸಿದೆ.

'ಮೇ-ಜೂನ್‌ನಲ್ಲಿ ಆಕಾಸಾ ಕಾರ್ಯಾಚರಣೆ ಆರಂಭ'

ನವದೆಹಲಿ (ಪಿಟಿಐ): ಆಕಾಸಾ ಏರ್ ಕಂಪನಿಯು ಮೇ ತಿಂಗಳ ಕೊನೆಯಲ್ಲಿ ಅಥವಾ ಜೂನ್‌ನಲ್ಲಿ ಕಾರ್ಯಾಚರಣೆ ಆರಂಭಿಸುವ ಸಾಧ್ಯತೆ ಇದೆ. ಈ ಕಂಪನಿಯು, ವಿಮಾನಯಾನವು ಇನ್ನಷ್ಟು ಜನರ ಕೈಗೆ ಎಟಕುವಂತೆ ಮಾಡುವ ಉದ್ದೇಶ ಹೊಂದಿದೆ.

ದೇಶದಲ್ಲಿ ದೀರ್ಘಾವಧಿಯಲ್ಲಿ ನಾಗರಿಕ ವಿಮಾನಯಾನ ಉದ್ದಿಮೆಯು ಒಳ್ಳೆಯ ಬೆಳವಣಿಗೆ ಕಾಣಲಿದೆ ಎನ್ನುವ ನಂಬಿಕೆ ಕಂಪನಿಯದ್ದು. ಖ್ಯಾತ ಹೂಡಿಕೆದಾರ ರಾಕೇಶ್ ಜುಂಝುನ್‌ವಾಲಾ ಅವರೂ ಈ ಕಂಪನಿಯಲ್ಲಿ ಹೂಡಿಕೆ ಮಾಡಿದ್ದು, 2023ರ ಮಾರ್ಚ್ ವೇಳೆಗೆ ಒಟ್ಟು 18 ವಿಮಾನಗಳನ್ನು ಹೊಂದುವ ಗುರಿಯನ್ನು ಕಂಪನಿ ಇರಿಸಿಕೊಂಡಿದೆ. ವಿಮಾನಯಾನ ಕ್ಷೇತ್ರದಲ್ಲಿ ಕೋವಿಡ್‌ನಿಂದ ಎದುರಾಗಿರುವ ಸಮಸ್ಯೆಗಳು ತಾತ್ಕಾಲಿಕ ಎಂದು ಕಂಪನಿಯ ಸಿಇಒ ವಿನಯ್ ದುಬೆ ಹೇಳಿದ್ದಾರೆ.

ಕಡಿಮೆ ವೆಚ್ಚದಲ್ಲಿ ವಿಮಾನಯಾನ ಸೇವೆಗಳನ್ನು ಒದಗಿಸುವ ಉದ್ದೇಶವನ್ನು ಆಕಾಸಾ ಏರ್ ಹೊಂದಿದೆ. 'ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ವಿಮಾನ ಯಾನದ ಅನುಭವ ಹೊಂದಿರುವವರ ಸಂಖ್ಯೆ ಕಡಿಮೆ. ಇದು ನಾವು ನಾಗರಿಕ ವಿಮಾನಯಾನ ಕ್ಷೇತ್ರದ ವಿಚಾರವಾಗಿ ಆಶಾವಾದ ಹೊಂದಲು ಮುಖ್ಯ ಕಾರಣ. ಈಗಿರುವ ಪರಿಸ್ಥಿತಿಯು ಮುಂದಿನ ದಿನಗಳಲ್ಲಿ ಬದಲಾಗಲಿದೆ. ಆ ಬದಲಾವಣೆಯನ್ನು ಸಾಧ್ಯವಾಗಿಸಲು ನಮ್ಮ ಕೊಡುಗೆ ಇರಲಿದೆ. ವಿಮಾನಯಾನವು ಎಲ್ಲರಿಗೂ ಸಿಗುವಂತೆ ಮಾಡುವುದು ನಮ್ಮ ಬಯಕೆ' ಎಂದು ದುಬೆ ತಿಳಿಸಿದ್ದಾರೆ.

2023ರ ದ್ವಿತೀಯಾರ್ಧದಲ್ಲಿ ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ಕೂಡ ವಿಮಾನಯಾನ ಸೇವೆ ಒದಗಿಸುವ ಉದ್ದೇಶ ಕಂಪನಿಯದ್ದು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	27,500-45,000
ಹಳತು	46,000-53,000
ಬೆಳ್ತಂಗಡಿ	
ಕೋಕ	26,000-27,000
ಹೊಸತು	29,000-45,000
ಹಳತು	48,000-53,000
ಇತರ	28,300-32,000
ಕಾರ್ಕಳ	
ಹೊಸತು	40000-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	23129-23129
ಚಾಲಿ	41299-41299
ಕೆಂಪುಗೋಟು	32899-35699
ರಾಶಿ	46099-46899
ಸಿಪ್ಪೆಗೋಟು	6269-17499
ಶಿವಮೊಗ್ಗ	
ಬೆಟ್ಟೆ	48000-53010
ಗೊರಬಲು	17020-35269
ರಾಶಿ	43099-46589
ಸರಕು	52109-76696
ಸಿದ್ದಾಪುರ	
ಬಿಳಿಗೋಟು	24299-30219
ಚಾಲಿ	42189-48099
ಕೋಕ	21099-32699
ಹೊಸಚಾಲಿ	33199- 40139
ಕೆಂಪುಗೋಟು	30269-34269
ರಾಶಿ	44369-47649
ತಟ್ಟಿಬೆಟ್ಟೆ	38099-44099
ಶಿರಸಿ	
ಬೆಟ್ಟೆ	39699-46221
ಬಿಳಿಗೋಟು	20899-42899
ಚಾಲಿ	32809-49052
ರಾಶಿ	43099-48189
ಯಲ್ಲಾಪುರ	
ಆಪಿ	54100-54369
ಬಿಳಿಗೋಟು	26899-32899
ಕೋಕ	21072-32799
ಹಳೆಚಾಲಿ	43589-48497
ಹೊಸಚಾಲಿ	35499-41501
ಕೆಂಪುಗೋಟು	30581-37399
ರಾಶಿ	43890-51900
ತಟ್ಟಿಬೆಟ್ಟೆ	38699-42850
ರೇಷ್ಮೆಗೂಡು ಮಾರುಕಟ್ಟೆ	
ರಾಮನಗರ	
ಮಿಶ್ರ ತಳಿ:	₹508-686
ದ್ವಿತಳಿ;	₹455-865

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15650	15550	15500	232.95 ಸೆಂಟ್ಸ್
ಎಸಿ	7310	7000	7100	
ಆರ್‌ಪಿ	7100	7000	7225	
ಆರ್‌ಸಿ	4025	3850	3900	2197 ಡಾಲರ್ಸ್

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶ್ರೀರಾಮ ಪೂಜಾರಿ, ಊರುಬೇಡ

- **ಪ್ರಶ್ನೆ: ನನಗೆ ಎರಡೂವರೆ ವರ್ಷ ವಯಸ್ಸಿನ ಮಗಳು ಇದ್ದಾಳೆ. ಅವಳ ಓದು, ಮದುವೆಗೆ ಅನುಕೂಲ ಆಗುವಂತೆ ಸಾಂಪ್ರದಾಯಿಕ ಉಳಿತಾಯ ಯೋಜನೆ ಹಾಗೂ ಈಕ್ವಿಟಿ ಆಧಾರಿತ ಉಳಿತಾಯ ಯೋಜನೆ ತಿಳಿಸಿ.**

ಉತ್ತರ: ಮಗಳ ಉಜ್ವಲ ಭವಿಷ್ಯದ ಉದ್ದೇಶದಿಂದ ದೀರ್ಘಾವಧಿ ಉಳಿತಾಯ ಯೋಜನೆಯಲ್ಲಿ ಹೂಡಿಕೆ ಮಾಡಲು ಮುಂದಾಗಿರುವುದು ಉತ್ತಮ ವಿಚಾರ. ಉಳಿತಾಯದ ಮೊದಲ ಹೆಜ್ಜೆಯಾಗಿ ನೀವು ಕೇಂದ್ರ ಸರ್ಕಾರದ 'ಸುಕನ್ಯಾ ಸಮೃದ್ಧಿ ಯೋಜನೆ'ಯಲ್ಲಿ ತೊಡಗಿಸಿ. ಇದರಲ್ಲಿ ಕನಿಷ್ಠ ₹ 250ರಿಂದ ಗರಿಷ್ಠ ₹ 1.50 ಲಕ್ಷದವರೆಗೆ 15 ವರ್ಷ ಹೂಡಿಕೆಗೆ ಅವಕಾಶವಿದೆ. ಈ ಯೋಜನೆಯ ಅಡಿ ಖಾತೆಯನ್ನು ನಿಮ್ಮ ಸಮೀಪದ ಅಂಚೆ ಕಚೇರಿ ಅಥವಾ ಬ್ಯಾಂಕುಗಳಲ್ಲಿ ತೆರೆಯಬಹುದು. ನಿಮ್ಮ ಮಗಳು 18 ವರ್ಷ ಪೂರೈಸಿದ ನಂತರ ಮದುವೆ ಅಥವಾ ಓದಿಗಾಗಿ ಇದರಿಂದ ಹಣ ಹಿಂಪಡೆಯಬಹುದು. ಇದು ಖಾತೆ ತೆರೆದ ನಂತರ 21 ವರ್ಷಗಳ ಒಟ್ಟು ಅವಧಿ ಹೊಂದಿದೆ. ಪ್ರಸ್ತುತ ಶೇಕಡ 7.6ರಷ್ಟು ಬಡ್ಡಿ ಸಿಗುತ್ತದೆ ಹಾಗೂ ಇದು ತೆರಿಗೆಯಿಂದ ಮುಕ್ತವಾಗಿದೆ. ಇಷ್ಟೇ ಅಲ್ಲದೆ, ನೀವು ಜಮಾ ಮಾಡುವ ಮೊತ್ತದದ ಮೇಲೆ ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿ ವಿನಾಯಿತಿಯೂ ಇದೆ.

ಈಕ್ವಿಟಿ ಆಧಾರಿತ ಹೂಡಿಕೆಯು ದೀರ್ಘಾವಧಿಯಲ್ಲಿ ಸಾಂಪ್ರದಾಯಿಕ ಹೂಡಿಕೆಗಳಿಗಿಂತ ಅಧಿಕ ಲಾಭ ನೀಡಬಲ್ಲದು. ಉತ್ತಮ ಕಂಪನಿಗಳ ಷೇರುಗಳಲ್ಲಿ ಅಥವಾ ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ವಿನಿಯೋಗಿಸುವ ಮೂಲಕ ನಿಮ್ಮ ಉದ್ದೇಶ ಈಡೇರಿಸಿಕೊಳ್ಳಬಹುದು. ಇದಕ್ಕಾಗಿ ಸ್ಥಳೀಯ ಷೇರು ದಲ್ಲಾಳಿ ಸಂಸ್ಥೆಗಳನ್ನು ಸಂಪರ್ಕಿಸಿ. ಇಲ್ಲಿ ಗಳಿಸಿದ ಲಾಭದ ಮೇಲೆ ತೆರಿಗೆ ಇದೆ ಎಂಬುದನ್ನು ಮರೆಯದಿರಿ. ಸಾಧ್ಯವಾದಷ್ಟು ಮಟ್ಟಿಗೆ ನಿಮ್ಮ ಒಟ್ಟು ಹೂಡಿಕೆಯ ಮೊತ್ತವನ್ನು ಇವುಗಳಲ್ಲಿ ಸಮನಾಗಿ ಹಂಚಿ ಹೂಡಿಕೆ ಮುಂದುವರಿಸಿ. ಈಕ್ವಿಟಿ ಆಧಾರಿತ ಹೂಡಿಕೆಯಾದುದರಿಂದ ನಿರಂತರವಾಗಿ ನಿಮ್ಮ ಹೂಡಿಕೆ ಮೇಲ್ಮುಖವಾಗಿ ಸಾಗುತ್ತಿದೆಯೇ ಎಂಬುದನ್ನು ಗಮನಿಸುತ್ತ ಇರಿ, ಪರಿಣತರ ಮಾರ್ಗದರ್ಶನ ತೆಗೆದುಕೊಳ್ಳಿ.

ವಿ.ಬಿ.ಮಲ್ಲಪ್ಪ, ಸಿಂಧನೂರ

- **ಪ್ರಶ್ನೆ: ನಾನು ಹಿರಿಯ ನಾಗರಿಕ. ನನಗೆ ಅಂಚೆ ಕಚೇರಿಯಿಂದ ವರ್ಷಕ್ಕೆ ₹ 96,000 ಬಡ್ಡಿ ಬರುತ್ತದೆ. ಸಿಂಧನೂರಿನಲ್ಲಿ ಒಂದು ಮನೆ ಇದೆ. ನಾನು ಈಗ ಅದನ್ನು ಮಾರಬೇಕೆಂದಿದ್ದೇನೆ. ನನಗೆ ಅದರಿಂದ ₹ 35 ಲಕ್ಷ ಬರಬಹುದು. ನಾನು 1990ರಲ್ಲಿ ಭೂ ಅಂತಸ್ತಿನ ಹಂತ ಮತ್ತು 1992ರಲ್ಲಿ ಒಂದನೆಯ ಮಹಡಿ ಕಟ್ಟಿಸಿರುತ್ತೇನೆ. ಬಂದ ಹಣದಿಂದ ನಾನು ಸುಮಾರು ₹ 10 ಲಕ್ಷದಿಂದ ₹ 12 ಲಕ್ಷದೊಳಗಿನ ನಿವೇಶನ ಖರೀದಿಸಬೇಕೆಂದಿದ್ದೇನೆ. ಇದಕ್ಕೆ ನನಗೆ ಬಂಡವಾಳ ವೃದ್ಧಿ ತೆರಿಗೆ ಬರಬಹುದೇ? ನಿವೇಶನ ಖರೀದಿಸುವುದು ತಪ್ಪಿದಲ್ಲಿ ನಾನು 500 ಚದರ ಅಡಿಯ ಮನೆ ಕಟ್ಟಿಸಬೇಕೆಂದಿದ್ದೇನೆ. ಇದರಲ್ಲಿ ಯಾವುದು ಉತ್ತಮ? ಇದಕ್ಕಾಗಿ ₹ 6 ಲಕ್ಷದವರೆಗೆ ಖರ್ಚು ಬರಬಹುದು.**

ಉತ್ತರ: ನೀವು ಮನೆ ಮಾರಾಟ ಮಾಡುವುದರಿಂದ ಬರುವ ಲಾಭದ ಮೇಲೆ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಅನ್ವಯಿಸುತ್ತದೆ. ನಿಮ್ಮ ಎರಡು ಹಂತಗಳ ಮನೆಯ ಒಟ್ಟು ನಿರ್ಮಾಣದ ಮೊತ್ತವನ್ನು ಆಯಾ ವರ್ಷದ ಹಣದುಬ್ಬರ ಸೂಚ್ಯಂಕವನ್ನಾಧರಿಸಿ ಮಾರಾಟ ಮಾಡುವ ಮನೆಯ ಪ್ರಸ್ತುತ ಬೆಲೆಯನ್ನು ಮರು ಅಂದಾಜಿಸಲಾಗುತ್ತದೆ. ಮಾರಾಟದ ಬೆಲೆ ಇದಕ್ಕಿಂತ ಅಧಿಕವಾಗಿದ್ದರೆ, ಆ ವ್ಯತ್ಯಾಸವನ್ನು ದೀರ್ಘಾವಧಿ ಬಂಡವಾಳ ವೃದ್ಧಿ ಎಂದೂ, ಮಾರಾಟ ಮಾಡಿದ ಬೆಲೆ ಅದಕ್ಕಿಂತ ಕಡಿಮೆಯಾಗಿದ್ದರೆ, ದೀರ್ಘಾವಧಿ ಬಂಡವಾಳ ನಷ್ಟ ಎಂದೂ ಲೆಕ್ಕಹಾಕಲಾಗುತ್ತದೆ. ಲಾಭವಾದ ಪಕ್ಷದಲ್ಲಿ ಶೇ 20ರ ತೆರಿಗೆ ಬರುತ್ತದೆ. ನಷ್ಟವಾದ ಪಕ್ಷದಲ್ಲಿ ಮುಂದಿನ ಎಂಟು ವರ್ಷಗಳ ತನಕ ನಷ್ಟ ಮುಂದೂಡುವ ಹಾಗೂ ಮುಂಬರುವ ವರ್ಷಗಳಲ್ಲಾಗಬಹುದಾದ ಬಂಡವಾಳ ವೃದ್ಧಿ ಲಾಭದೊಡನೆ ವಜಾ ಮಾಡುವ ಅವಕಾಶವಿದೆ.

ಹೊಸ ನಿವೇಶನ ಖರೀದಿಗೆ ಯಾವುದೇ ತೆರಿಗೆ ವಿನಾಯಿತಿ ಇಲ್ಲವಾದರೂ, ಹೂಡಿಕೆಯ ದೃಷ್ಟಿಯಿಂದ ನಿವೇಶನ ಖರೀದಿಗೆ ಅಡ್ಡಿಯಿಲ್ಲ. ಆದಾಯ ತೆರಿಗೆಯ ನಿಯಮ 54ರ ಪ್ರಕಾರ ಹೊಸ ಮನೆಯ ಖರೀದಿ ಅಥವಾ ನಿರ್ಮಾಣಕ್ಕೆ ಮಾರಾಟದಿಂದ ಬರುವ ಬಂಡವಾಳ ವೃದ್ಧಿಯ ಮೊತ್ತಕ್ಕೆ ತೆರಿಗೆ ವಿನಾಯಿತಿ ಇದೆ. ನಿಮ್ಮ ಪ್ರಶ್ನೆಯಂತೆ, ದೀರ್ಘಾವಧಿ ಬಂಡವಾಳ ವೃದ್ಧಿಯ ಮೊತ್ತ ₹ 10 ಲಕ್ಷ ಎಂದು ಊಹಿಸಿದರೆ, ಹೂಡಿಕೆಯಾಗದೆ ಉಳಿದ ಮೊತ್ತ ₹ 4 ಲಕ್ಷದಿಂದ ₹ 5 ಲಕ್ಷದ ಮೇಲೆ ನೀವು ತೆರಿಗೆ ಕಟ್ಟಬೇಕಾಗುತ್ತದೆ. ಅದೇ, ನಿಮ್ಮ ಹೊಸ ಮನೆಯ ಮೇಲಣ ಹೂಡಿಕೆ ₹ 10 ಲಕ್ಷಕ್ಕಿಂತ ಕಡಿಮೆಯಾಗದಂತೆ ಇದ್ದರೆ, ಸಂಪೂರ್ಣ ತೆರಿಗೆ ವಿನಾಯ್ತಿ ಸಿಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ರಷ್ಯಾ: ಅಲೆಕ್ಸಿ ನವಾಲ್ನಿ ಹೆಸರು 'ಉಗ್ರರ ಪಟ್ಟಿ'ಗೆ ಸೇರ್ಪಡೆ


ಅಲೆಕ್ಸಿ ನವಾಲ್ನಿ

ಮಾಸ್ಕೊ: ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಕಟು ಟೀಕಾಕಾರ ಅಲೆಕ್ಸಿ ನವಾಲ್ನಿ ಅವರನ್ನು 'ಭಯೋತ್ಪಾದಕರ ಪಟ್ಟಿ'ಗೆ ಮಂಗಳವಾರ ಸೇರ್ಪಡೆ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನವಾಲ್ನಿ ಅವರ ಪ್ರಮುಖ ಸಹಾಯಕ ಲ್ಯುಬೋವ್ ಸೊಬೊಲ್ ಅವರ ಹೆಸರು ಸಹ 'ಫೆಡರಲ್ ಸರ್ವೀಸ್ ಫಾರ್ ಫೈನಾನ್ಶಿಯಲ್ ಮಾನಿಟರಿಂಗ್' ಕಚೇರಿ ಸಿದ್ಧಪಡಿಸಿದ 'ನಿಷೇಧಕ್ಕೆ ಒಳಗಾದವರ' ಪಟ್ಟಿಯಲ್ಲಿ ಕಾಣಿಸಿಕೊಂಡಿದೆ.

'ನವಾಲ್ನಿ ಅವರ ಸಹಾಯಕರ ಪೈಕಿ ಒಟ್ಟು 9 ಜನರನ್ನು ಭಯೋತ್ಪಾದಕರ ಪಟ್ಟಿಗೆ ಸೇರಿಸಲಾಗಿದೆ' ಎಂದು ನವಾಲ್ನಿ ಅವರು ಸ್ಥಾಪಿಸಿರುವ 'ಭ್ರಷ್ಟಾಚಾರ ವಿರೋಧಿ ಫೌಂಡೇಷನ್' ತಿಳಿಸಿದೆ.

ವಿರೋಧ ಪಕ್ಷವನ್ನು ದಮನಿಸುವ ಕಾರ್ಯವನ್ನು ಸರ್ಕಾರ ಮುಂದುವರಿಸಿದ್ದು, ಈಗ ನವಾಲ್ನಿ ಸೇರಿದಂತೆ ಹಲವು ನಾಯಕರ ವಿರುದ್ಧ ಪುಟಿನ್ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಂಡಿದೆ ಎಂದು ಮೂಲಗಳು ಹೇಳಿವೆ.

ಮುಂಬೈ ಧಾರಣೆ

ಶೇಂಗಾ

25-1-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9750-9800
ದಪ್ಪ ಗುಜರಾತ್(ಹೊಸ)	8600-8650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1330)
ಒಂದು ವಾರದ ಡೆಲಿವರಿ	1335 (1325)
ಸೋಯಾ ಕಚ್ಚಾ	1172 (1180)
ಪಾಮ್ ವಾರದ ಡೆಲಿವರಿ	1182 (1185)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1210)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
48,700 (48,650)
ಬೆಳ್ಳಿ ಕೆ.ಜಿ
63,750 (64,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಉತ್ತರ ಪ್ರದೇಶದಲ್ಲಿ ಚುನಾವಣಾ ಉಸ್ತುವಾರಿ ಪ್ರಿಯಾಂಕಾ ಗಾಂಧಿ ವಾದ್ರಾ ಮಾತು

ಜನರು ಸರ್ಕಾರದ ಹೊಣೆಗಾರಿಕೆ ಪ್ರಶ್ನಿಸಬೇಕು

ಉತ್ತರ ಪ್ರದೇಶದಲ್ಲಿ ಚುನಾವಣಾ ಉಸ್ತುವಾರಿ ಹೊತ್ತಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ವಿಧಾನಸಭಾ ಚುನಾವಣೆಯ ವಿವಿಧ ವಿಷಯಗಳು ಕುರಿತು ಮಾತನಾಡಿದ್ದಾರೆ. ಧ್ರುವೀಕರಣ, ಅಭಿವೃದ್ಧಿ ವಿಷಯ, ಮಹಿಳೆಯರಿಗೆ ಆದ್ಯತೆ, ಕೃಷಿ ಕಾನೂನುಗಳು ಹಾಗೂ ಲಖಿಂಪುರ ಖೇರಿ ಘಟನೆಯ ಪರಿಣಾಮದ ಬಗ್ಗೆ ಅವರು ಪಿಟಿಐ ಸಂದರ್ಶನದಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ



- **ಯಾವ ವಿಚಾರಗಳ ಮೇಲೆ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ನಡೆಯಲಿದೆ. ಕೃಷಿ ಕಾಯ್ದೆ ಚಳವಳಿ ಹಾಗೂ ಲಖಿಂಪುರ ಖೇರಿ ಪ್ರಕರಣ ಪ್ರಮುಖವಾಗುತ್ತವೆಯೇ?**

ರಾಜಕೀಯ ಪಕ್ಷಗಳು ಬೇರೆ ಬೇರೆ ವಿಷಯಗಳಿಗೆ ಒತ್ತು ನೀಡುತ್ತಿವೆ. ಕೆಲವು ಪಕ್ಷಗಳು ಧರ್ಮ ಅಥವಾ ಜಾತಿಗಳ ಚರ್ಚೆಯನ್ನು ಹುಟ್ಟುಹಾಕಿ ಮತಗಳನ್ನು ಧ್ರುವೀಕರಿಸುವ ಉದ್ದೇಶ ಹೊಂದಿವೆ. ಇದು ಬದಲಾಗಬೇಕಿದೆ. ಉದ್ಯೋಗ, ಆರೋಗ್ಯ, ಶಿಕ್ಷಣ, ಅಭಿವೃದ್ದಿ ವಿಚಾರಗಳ ಮೇಲೆ ಚುನಾವಣೆಗಳು ನಡೆಯಬೇಕಿದೆ. ಕಾಂಗ್ರೆಸ್ ಪಕ್ಷ ಇಂತಹ ಸಕಾರಾತ್ಮಕ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಿದೆ. ಪ್ರಾಣ ಕಳೆದುಕೊಂಡ ರೈತರು, ಸರ್ಕಾರದ ಅಸಡ್ಡೆ, ನಿರಂಕುಶಾಧಿಕಾರ ಧೋರಣೆಗಳು ಚುನಾವಣೆಯ ಫಲಿತಾಂಶವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

- **ಕೋವಿಡ್ ಮೂರನೇ ಅಲೆ ಹೆಚ್ಚಿದೆ. ಈ ಎರಡು ವರ್ಷಗಳಲ್ಲಿ ಯೋಗಿ ಆದಿತ್ಯನಾಥ ಸರ್ಕಾರವು ಪರಿಸ್ಥಿತಿ ನಿಭಾಯಿಸಿದ ವಿಷಯ ಮಹತ್ವ ಪಡೆಯಲಿದೆಯೇ?**

ಕೋವಿಡ್ ಎರಡನೇ ಅಲೆಯಲ್ಲಿ ಪರಿಸ್ಥಿತಿಯನ್ನು ಯೋಗಿ ಸರ್ಕಾರ ತೀರಾ ಕೆಟ್ಟದಾಗಿ ನಿಭಾಯಿಸಿದೆ. ಜನರಿಗೆ ಆರೋಗ್ಯ ಸೇವೆ, ಆಮ್ಲಜನಕ, ಔಷಧ, ಹಾಸಿಗೆಗಳನ್ನು ದೊರಕಿಸುವಲ್ಲಿ ಸರ್ಕಾರ ವಿಫಲವಾಗಿದೆ. ಜೀವ ಬಿಗಿಹಿಡಿದು ಕೆಲಸ ಮಾಡಿದ ಆಶಾ ಕಾರ್ಯಕರ್ತೆಯರು, ವೈದ್ಯರು, ನರ್ಸ್‌ಗಳಿಗೆ ಸೂಕ್ತ ಸಂಭಾವನೆ ನೀಡಲಿಲ್ಲ. ಜೀವಗಳನ್ನು ಉಳಿಸುವ ಬದಲು ಸತ್ಯ ಮುಚ್ಚಿಡಲು ಸರ್ಕಾರ ಸಾಕಷ್ಟು ಮುತುವರ್ಜಿ ವಹಿಸಿತು. ಇದು ಚುನಾವಣೆಯಲ್ಲಿ ಎಷ್ಟರ ಮಟ್ಟಿಗೆ ಪ್ರಭಾವ ಬೀರಲಿದೆ ಎಂದು ಹೇಳಲಾಗದು. ಜನರು ಕಹಿ ಘಟನೆಗಳನ್ನು ಮರೆತು, ಮುಂದೆ ಸಾಗುತ್ತಾರೆ. ಆದರೆ, ಸರ್ಕಾರದ ಹೊಣೆಗಾರಿಕೆಯನ್ನು ಜನರು ಪ್ರಶ್ನಿಸಬೇಕು.

- **ಧ್ರುವೀಕರಣ ವಿಷಯ ಎಷ್ಟು ದೊಡ್ಡದು? ವಿಭಜಿಸುವ ಮಾತುಗಾರಿಯನ್ನು ಎದುರಿಸಲು ಏನು ಯೋಜನೆ ಹಾಕಿಕೊಂಡಿದ್ದೀರಿ?**

ತಮ್ಮ ತಮ್ಮ ಮತ ನೆಲೆಗಳನ್ನು ಕ್ರೋಡೀಕರಿಸಲು ಬಿಜೆಪಿ ಅಥವಾ ಸಮಾಜವಾದಿ ಪಕ್ಷಗಳು ಧ್ರುವೀಕರಣದ ಹಾದಿ ಹಿಡಿದಿವೆ. ಅಂತಿಮವಾಗಿ ಈ ಧ್ರುವೀಕರಣದ ದೊಡ್ಡ ಫಲಾನುಭವಿ ಬಿಜೆಪಿಯೇ ಆಗಬಹುದು ಎಂದು ನಾನು ಭಾವಿಸುತ್ತೇನೆ. ಕೆಲವು ರಾಜಕೀಯ ಪಕ್ಷಗಳಿಗೆ ಮಾತ್ರ ಲಾಭವಾಗುವ ವಿಭಜನೆ ಉದ್ದೇಶದ ರಾಜಕೀಯದಿಂದ ಜನ ದೂರ ಸರಿಯಬೇಕು. ಈ ಸರ್ಕಾರದ ಹೊರತಾಗಿ ಮತ್ತೊಂದು ಆಯ್ಕೆ ಇದೆ ಎಂಬುದನ್ನು ಜನ ಅರಿಯಬೇಕು.

- **ಧರ್ಮ, ಜಾತಿ ಲೆಕ್ಕಾಚಾರಗಳ ಹೊರತಾಗಿ, ಉನ್ನಾವ್ ಅತ್ಯಾಚಾರ ಸಂತ್ರಸ್ತೆಯ ತಾಯಿಗೆ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ ಭಿನ್ನ ಹಾದಿ ತುಳಿದಿದೆ. ಮಹಿಳೆಯರಿಗೆ ಆದ್ಯತೆ ನೀಡಿದೆ. ಮಹಿಳೆಯರು ಕಾಂಗ್ರೆಸ್ಸನ್ನು ನಿಜವಾಗಿಯೂ ಬೆಂಬಲಿಸಲಿದ್ದಾರೆಯೇ?**

ಜನಸಂಖ್ಯೆಯಲ್ಲಿ ಶೇ 50ರಷ್ಟು ಪಾಲು ಹೊಂದಿರುವ ಮಹಿಳೆಯರು ರಾಜಕೀಯ ಪ್ರಾತಿನಿಧ್ಯದಿಂದ ವಂಚಿತರಾಗಿದ್ದಾರೆ. ಹೀಗಾಗಿ ಮಹಿಳೆಯರು ಪ್ರತ್ಯೇಕ ರಾಜಕೀಯ ಘಟಕವಾಗಿ ಮತ ಚಲಾವಣೆ ಮಾಡಬೇಕು. ಉನ್ನಾವ್ ಪ್ರಕರಣದ ಸಂತ್ರಸ್ತೆಯ ತಾಯಿಗೆ ಟಿಕೆಟ್ ನೀಡಿದ್ದಕ್ಕೆ ಸ್ಪಷ್ಟ ಕಾರಣವಿದೆ. ಅವರೂ ಸಹ ಶಾಸಕಿಯಾಗಿ ಆಯ್ಕೆಯಾಗಿ, ತನಗಾದ ಅನ್ಯಾಯವನ್ನು ಮೆಟ್ಟಿನಿಂತು ಹೊಸ ಬದುಕು ಕಟ್ಟಿಕೊಳ್ಳಬೇಕು ಹಾಗೂ ಇತರರಿಗೆ ಸಹಾಯ ಮಾಡುವಂತಾಗಬೇಕು ಎಂಬ ಉದ್ದೇಶದಿಂದ ಟಿಕೆಟ್ ನೀಡಲಾಗಿದೆ. ಮಾಫಿಯಾದವರು ಹಾಗೂ ಅಪರಾಧಿಗಳಿಗೆ ಸರ್ಕಾರ ರಕ್ಷಣೆ ನೀಡುತ್ತದೆ. ಆದರೆ ದನಿ ಕಳೆದುಕೊಂಡವರಿಗೆ ಅವಕಾಶವೊಂದನ್ನು ನೀಡಬೇಕಲ್ಲವೇ

- **ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಚುನಾವಣೋತ್ತರ ಮೈತ್ರಿಗೆ ಕಾಂಗ್ರೆಸ್ ಮುಂದಾಗಲಿದೆಯೇ?**

ಒಮ್ಮೆ ಚುನಾವಣಾ ಫಲಿತಾಂಶ ಹೊರಬಿದ್ದ ಬಳಿಕ, ಅಂತಹ ಪರಿಸ್ಥಿತಿ ಉದ್ಭವವಾದರೆ, ಆ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ಈಗಲೇ ಪ್ರತಿಕ್ರಿಯಿಸುವುದು ಸರಿಯಲ್ಲ.

ಮತದಾನ ಕಡ್ಡಾಯಕ್ಕೆ ಶೇ 86 ಜನರ ಒಲವು: ಸಮೀಕ್ಷೆ

ನವದೆಹಲಿ (ಪಿಟಿಐ): ಮತದಾನವನ್ನು ಕಡ್ಡಾಯ ಮಾಡಬೇಕು ದೇಶದ ಒಟ್ಟು ಜನರಲ್ಲಿ ಶೇ 86ರಷ್ಟು ಮಂದಿ ಹೇಳಿದ್ದಾರೆ ಎಂದು ಸಮೀಕ್ಷಾ ವರದಿಯೊಂದು ಹೇಳಿದೆ.

ಪಬ್ಲಿಕ್ ಆ್ಯಪ್ ವೇದಿಕೆಯು ಸಾಮಾಜಿಕ ಜಾಲತಾಣಗಳಲ್ಲಿ ನಡೆಸಿದ್ದ ಸಮೀಕ್ಷೆಯ ವರದಿಯನ್ನು, ರಾಷ್ಟ್ರೀಯ ಮತದಾರರ ದಿನವಾದ ಮಂಗಳವಾರ ಬಿಡುಗಡೆ ಮಾಡಿದೆ. 4 ಲಕ್ಷ ಜನರು ಸಮೀಕ್ಷೆಯಲ್ಲಿ ಭಾಗಿಯಾಗಿದ್ದರು. ಈಗಿನ ಮತದಾನ ಪ್ರಕ್ರಿಯೆಯನ್ನು ನಂಬುತ್ತೇವೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಶೇ 81ರಷ್ಟು ಜನರು ಹೇಳಿದ್ದಾರೆ.

ಅಭ್ಯರ್ಥಿಯು ಈ ಹಿಂದಿನ ಅವಧಿಯಲ್ಲಿ ಹೇಗೆ ಕಾರ್ಯನಿರ್ವಹಿಸಿದ್ದಾರೆ ಎಂಬುದರ ಆಧಾರದಲ್ಲಿ ಮತ ನೀಡುತ್ತೇವೆ ಎಂದು ಶೇ 34ರಷ್ಟು, ಎಲ್ಲಾ ಅಭ್ಯರ್ಥಿಗಳ ಸಂಪೂರ್ಣ ವಿವರಗಳನ್ನು ಪರಿಶೀಲಿಸುತ್ತೇವೆ ಎಂದು ಶೇ 31ರಷ್ಟು ಜನರು ಹೇಳಿದ್ದಾರೆ. ಜನಪ್ರಿಯತೆಯೇ ಮಾನದಂಡ ಎಂದು ಶೇ 4.96ರಷ್ಟು ಜನರು ಹೇಳಿದ್ದರೆ, ಅಭ್ಯರ್ಥಿಯ ಪಕ್ಷ ಯಾವುದು ಎಂಬುದೇ ಮುಖ್ಯವಾಗುತ್ತದೆ ಎಂದು ಶೇ 11.92ರಷ್ಟು ಜನರು ಸಮೀಕ್ಷೆಯಲ್ಲಿ ಹೇಳಿದ್ದಾರೆ.

'ಶೇ 56.3ರಷ್ಟು ಜನರು ನಾವು ಮತದಾನವನ್ನು ತಪ್ಪಿಸುವುದಿಲ್ಲ ಎಂದು ಹೇಳಿದ್ದಾರೆ. ಶೇ 30.04ರಷ್ಟು ಜನರು ತಾವು ಬೇರೆ ಸ್ಥಳದಲ್ಲಿ ಇರುವ ಕಾರಣದಿಂದ ಮತದಾನ ಮಾಡಿರುವುದಿಲ್ಲ ಎಂದು ಹೇಳಿದ್ದಾರೆ. ಚುನಾವಣೆ ಬಗ್ಗೆ ಮಾಹಿತಿ ಇಲ್ಲ ಎಂದು ಶೇ 5.22ರಷ್ಟು, ಯಾವುದೇ ಪಕ್ಷವನ್ನು ಬೆಂಬಲಿಸುವುದಿಲ್ಲ ಎಂದು ಶೇ 7.19 ಮತ್ತು ಅಸಡ್ಡೆಯಿಂದ ಮತದಾನ ಮಾಡಿಲ್ಲ ಎಂದು ಶೇ 1.27ರಷ್ಟು ಜನರು ಹೇಳಿದ್ದಾರೆ ಎಂದು ವರದಿ ವಿವರಿಸಿದೆ.

ನುಡಿ–ಕಿಡಿ



ಬೆದರಿಕೆ, ಧ್ರುವೀಕರಣ ಮತ್ತು ದ್ವೇಷದ ರಾಜಕಾರಣ ಪಂಜಾಬ್‌ನಲ್ಲಿ ನುಸುಳುತ್ತಿದೆ. ಮಾತಾ ಕಾಳಿ ದೇವಿ ದೇವಸ್ಥಾನವನ್ನು ಅಪವಿತ್ರಗೊಳಿಸಲು ನಡೆಸಿದ ಯತ್ನ ವಿಷಾದಕರ. ಪಂಜಾಬಿಯತ್‌ನ ಸಾಮಾಜಿಕ–ಆರ್ಥಿಕ ಸಂರಚನೆಯನ್ನು ಘಾಸಿಗೊಳಿಸಲು ಇಂತಹ ವಿಭಜಕ ಶಕ್ತಿಗಳಿಂದ ಸಾಧ್ಯವಿಲ್ಲ

ನವಜೋತ್ ಸಿಂಗ್ ಸಿಧು, ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ



ಅಖಿಲೇಶ್ ಸದಾ ಪಾಕಿಸ್ತಾನದ ಬಗ್ಗೆ ಮಾತನಾಡುತ್ತಾರೆ. ಪಾಕಿಸ್ತಾನವನ್ನು ಶತ್ರುದೇಶ ಎಂದು ಒಪ್ಪಿಕೊಳ್ಳದವರು ಮತ್ತು ಜಿನ್ನಾ ತಮ್ಮ ಸ್ನೇಹಿತ ಎನ್ನುವವರು ತಮ್ಮನ್ನು ತಾವು ಸಮಾಜವಾದಿಗಳು ಎಂದು ಕರೆದುಕೊಳ್ಳುತ್ತಾರೆ. ಆದರೆ ವಾಸ್ತವದಲ್ಲಿ ಅವರು ಬಂದೂಕುವಾದಿಗಳಾಗಿದ್ದಾರೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ



ಎಎಪಿ ನಡೆಸಿದ 'ಜನರೇ ತಮ್ಮ ಮುಖ್ಯಮಂತ್ರಿ ಆರಿಸುತ್ತಾರೆ' ಅಭಿಯಾನ ಒಂದು ದೊಡ್ಡ ಹಗರಣ ಎಂದಿರುವ ಸಿಧು ಅವರು, ಕಾಂಗ್ರೆಸ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆಗೆ ಟ್ವಿಟರ್ ಪೋಲ್ ನಡೆಸಿದ್ದನ್ನು ಮರೆತಿದ್ದಾರೆ. ಅವರು ಎಎಪಿ ಆಂತರಿಕ ವಿಚಾರಗಳಲ್ಲಿ ಮೂಗು ತೂರಿಸದಿರುವುದು ಒಳ್ಳೆಯದು

ಭಗವಂತ್ ಮಾನ್, ಎಎಪಿಯ ಪಂಜಾಬ್ ಮುಖ್ಯಮಂತ್ರಿ ಅಭ್ಯರ್ಥಿ

ಚುನಾವಣೆ ಹೊಸ್ತಿಲಲ್ಲಿ ಕಾಂಗ್ರೆಸ್‌ಗೆ ಹಿನ್ನಡೆ

ಬಿಜೆಪಿಗೆ ಆರ್‌ಪಿಎನ್ ಸಿಂಗ್ ಜಿಗಿತ

ಲಖನೌ/ನವದೆಹಲಿ (ಪಿಟಿಐ): ಉತ್ತರ ಪ್ರದೇಶ ಕಾಂಗ್ರೆಸ್‌ನ ಹಿರಿಯ ನಾಯಕ ಆರ್‌ಪಿಎನ್ ಸಿಂಗ್ ಅವರು ಮಂಗಳವಾರ ಪಕ್ಷವನ್ನು ತೊರೆದು, ಬಿಜೆಪಿ ಸೇರಿದ್ದಾರೆ. ಇನ್ನೇನು ಮೊದಲ ಹಂತದ ಮತದಾನ ನಡೆಯಲಿರುವ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಇದರಿಂದ ದೊಡ್ಡ ಹಿನ್ನಡೆಯಾದಂತಾಗಿದೆ ಎಂದು ಪಕ್ಷದ ನಾಯಕರು ಹೇಳಿದ್ದಾರೆ.

ಉತ್ತರ ಪ್ರದೇಶ ಚುನಾವಣಾ ಪ್ರಚಾರವು ಪ್ರಿಯಾಂಕಾ ಗಾಂಧಿ ವಾದ್ರಾ ಅವರ ನೇತೃತ್ವದಲ್ಲಿ ನಡೆಯುತ್ತಿದೆ. ಪ್ರಚಾರದಲ್ಲಿ ತಮ್ಮನ್ನು ಕಡೆಗಣಿಸಲಾಗಿದೆ. ಹೀಗಾಗಿಯೇ ಪಕ್ಷ ತೊರೆಯುತ್ತಿದ್ದೇನೆ ಎಂದು ಆರ್‌ಪಿಎನ್ ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಉತ್ತರ ಪ್ರದೇಶ ಚುನಾವಣೆಗೆ ಕಾಂಗ್ರೆಸ್ ತನ್ನ ತಾರಾ ಪ್ರಚಾರಕರ ಪಟ್ಟಿಯನ್ನು ಸೋಮವಾರವಷ್ಟೇ ಬಿಡುಗಡೆ ಮಾಡಿತ್ತು. ಅದರಲ್ಲಿ ಆರ್‌ಪಿಎನ್ ಸಿಂಗ್ ಅವರಿಗೆ ಸ್ಥಾನ ನೀಡಲಾಗಿತ್ತು. ಆದರೆ, ಅದರ ಮರುದಿನವೇ ಆರ್‌ಪಿಎನ್ ಸಿಂಗ್ ಅವರು ಪಕ್ಷ ತೊರೆದಿದ್ದಾರೆ. ಮಂಗಳವಾರ ಬೆಳಿಗ್ಗೆ ಅವರು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಟ್ವೀಟ್ ಮೂಲಕ ರಾಜೀನಾಮೆ ಪತ್ರ ರವಾನಿಸಿದ್ದಾರೆ.

'ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ಪಕ್ಷದಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು' ಎಂದು ಅವರು ರಾಜೀನಾಮೆ ಪತ್ರದಲ್ಲಿ ಹೇಳಿದ್ದಾರೆ. ಈ ಟ್ವೀಟ್‌ನ ನಂತರ, 'ಬಿಜೆಪಿ ಸೇರುತ್ತಿದ್ದೇನೆ. ಇದು ಹೊಸ ಆರಂಭವಾಗಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಟ್ಯಾಗ್ ಮಾಡಿ ಟ್ವೀಟ್ ಮಾಡಿದ್ದಾರೆ.

ಇದಾದ ಕೆಲವೇ ಗಂಟೆಗಳಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಬಿಜೆಪಿ ಸೇರಿದ್ದಾರೆ.



ನವದೆಹಲಿಯಲ್ಲಿನ ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ನಾಯಕರು, ಆರ್‌ಪಿಎನ್ ಸಿಂಗ್ ಅವರನ್ನು (ಮಧ್ಯದಲ್ಲಿ ಇರುವವರು) ಪಕ್ಷಕ್ಕೆ ಬರಮಾಡಿಕೊಂಡರು –ಪಿಟಿಐ ಚಿತ್ರ

ಇದು ಸೈದ್ಧಾಂತಿಕ ಮತ್ತು ಸತ್ಯಕ್ಕಾಗಿನ ಹೋರಾಟ. ಇದನ್ನು ಧೈರ್ಯದಿಂದ ಮತ್ತು ಬದ್ಧತೆಯಿಂದ ಹೋರಾಡಬೇಕು. ಹೇಡಿಗಳಿಂದ ಇದು ಸಾಧ್ಯವಿಲ್ಲ

ಸುಪ್ರಿಯಾ ಶ್ರೀನಾತೆ, ಕಾಂಗ್ರೆಸ್ ವಕ್ತಾರೆ

ಕಾಂಗ್ರೆಸ್‌ಗೆ ದ್ರೋಹ ಬಗೆದ ಜ್ಯೋತಿರಾದಿತ್ಯ ಸಿಂಧಿಯಾ, ಜಿತಿನ್ ಪ್ರಸಾದ್ ಅವರ ಪಟ್ಟಿಗೆ ಆರ್‌ಪಿಎನ್ ಸಿಂಗ್ ಸೇರಿದ್ದು ತೀವ್ರ ಬೇಸರ ಮೂಡಿಸಿದೆ

ಕಾರ್ತಿ ಚಿದಂಬರಂ, ಕಾಂಗ್ರೆಸ್ ಸಂಸದ

'ಕಾಂಗ್ರೆಸ್ ಮೊದಲಿನಂತಿಲ್ಲ'

'ಕಾಂಗ್ರೆಸ್‌ಗಾಗಿ 32 ವರ್ಷ ದುಡಿದಿದ್ದೇನೆ. ಆದರೆ, ಕಾಂಗ್ರೆಸ್ ಈಗ ಮೊದಲಿನಂತಿಲ್ಲ. ಹೀಗಾಗಿಯೇ ಪಕ್ಷ ತೊರೆದಿದ್ದೇನೆ. ಈಗ ದೇಶದ ಅಭಿವೃದ್ಧಿಗಾಗಿ ಮತ್ತು ಜನರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿರುವ ಏಕೈಕ ಪಕ್ಷ ಬಿಜೆಪಿ ಎಂಬುದು ಎಲ್ಲರಿಗೂ ಗೊತ್ತಿದೆ. ಹೀಗಾಗಿ ಬಿಜೆಪಿ ಸೇರುತ್ತಿದ್ದೇನೆ' ಎಂದು ಆರ್‌ಪಿಎನ್ ಸಿಂಗ್ ಟ್ವೀಟ್ ಮಾಡಿದ್ದಾರೆ.

ಮೌರ್ಯ ವಿರುದ್ಧ ಕಣಕ್ಕೆ: ಆರ್‌ಪಿಎನ್ ಸಿಂಗ್ ಅವರು ಬಿಜೆಪಿ ಟಿಕೆಟ್‌ನಲ್ಲಿ ಪಡ್ರೌನಾ ಕ್ಷೇತ್ರದಿಂದ ಕಣಕ್ಕೆ ಇಳಿಯಲಿದ್ದಾರೆ. ಈಚೆಗಷ್ಟೇ ಬಿಜೆಪಿ ತೊರೆದು ಸಮಾಜವಾದಿ ಪಕ್ಷ ಸೇರಿರುವ ಒಬಿಸಿ ನಾಯಕ ಸ್ವಾಮಿ ಪ್ರಸಾದ್ ಮೌರ್ಯ ಅವರು ಈ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದಾರೆ. ಅವರಿಗೆ ಪೈಪೋಟಿ ನೀಡಲೆಂದೇ ಆರ್‌ಪಿಎನ್ ಸಿಂಗ್ ಅವರನ್ನು ಬಿಜೆಪಿ ಸೆಳೆದಿದೆ ಎಂದು ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

ಇಬ್ಬರೂ ಒಬಿಸಿಯ ಪ್ರಬಲ ನಾಯಕರು. ಹೀಗಾಗಿ ಇಬ್ಬರ ಮಧ್ಯೆ ತೀವ್ರ ಪೈಪೋಟಿ ನಡೆಯಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಕಾಂಗ್ರೆಸ್‌ಗೆ ಹಿನ್ನಡೆ: ಆರ್‌ಪಿಎನ್ ಸಿಂಗ್ ಅವರು ಪಕ್ಷ ತೊರೆದಿರುವುದು ಕಾಂಗ್ರೆಸ್‌ಗೆ ದೊಡ್ಡ ಹಿನ್ನಡೆ ಎಂದು ಪಕ್ಷದ ಹಲವು ನಾಯಕರು ಅಭಿಪ್ರಾಯಪಟ್ಟಿದ್ದಾರೆ.

'ಆರ್‌ಪಿಎನ್ ರಾಜ್ಯದ ಹಿಂದುಳಿದ ವರ್ಗಗಳ ನಾಯಕರಲ್ಲಿ ಪ್ರಮುಖರು. ಆರ್‌ಪಿಎನ್ ಕಾರಣದಿಂದ ಪೂರ್ವಾಂಚಲ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಮತಗಳು ದೊರೆಯುತ್ತಿದ್ದವು. ಅವರು ಪಕ್ಷಕ್ಕಾಗಿ 32 ವರ್ಷ ದುಡಿದಿದ್ದರು. ಈಗ ಅವರು ಪಕ್ಷವನ್ನು ತೊರೆದಿರುವ ಕಾರಣ ಆ ಮತಗಳು ಕಾಂಗ್ರೆಸ್‌ನಿಂದ ದೂರವಾಗುತ್ತದೆ' ಎಂದು ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

ಚುನಾವಣಾ ಕಣದಲ್ಲಿ...

- ಗೋವಾ ವಿಧಾನಸಭೆ ಚುನಾವಣೆಗೆ ಟಿಎಂಸಿ ತನ್ನ ಅಭ್ಯರ್ಥಿಗಳ ಮೂರನೇ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. ಮೂರನೇ ಪಟ್ಟಿಯಲ್ಲಿ ಆರು ಜನರಿಗೆ ಸ್ಥಾನ ನೀಡಲಾಗಿದೆ. ಪಕ್ಷವು ಈವರೆಗೆ ಒಟ್ಟು 24 ಮಂದಿಯ ಟಿಕೆಟ್‌ಗಳನ್ನು ಕಾತರಿಪಡಿಸಿದೆ
- ಕಾಂಗ್ರೆಸ್‌ನ ಪ್ರಚಾರ ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ಮುಸ್ಲಿಮರ ಯೋಧ ಎಂದು ಬಿಂಬಿಸಿಕೊಂಡಿದ್ದ ಪಂಜಾಬ್‌ನ ಮಾಜಿ ಪೊಲೀಸ್ ಮಹಾ ನಿರ್ದೇಶಕ ಮೊಹಮ್ಮದ್ ಮುಸ್ತಫಾ ಅವರನ್ನು ಬಂಧಿಸಬೇಕು' ಎಂದು ಬಿಜೆಪಿ ನಾಯಕರು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ. ಈ ಆರೋಪವನ್ನು ಮುಸ್ತಫಾ ನಿರಾಕರಿಸಿದ್ದಾರೆ. ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ
- ಮಣಿಪುರ ವಿಧಾನಸಭಾ ಚುನಾವಣೆಗೆ ನ್ಯಾಷನಲ್ ಪೀಪಲ್ಸ್ ಪಾರ್ಟಿಯು ತನ್ನ 20 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಪಕ್ಷವು ಈಗಿನ ಬಿಜೆಪಿ ಸರ್ಕಾರದಲ್ಲಿ ಮೈತ್ರಿಯಲ್ಲಿದೆ. ಆದರೆ ಈ ಚುನಾವಣೆಯಲ್ಲಿ ಪ್ರತ್ಯೇಕವಾಗಿ ಕಣಕ್ಕೆ ಇಳಿದಿದೆ. ಇನ್ನೂ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಶೀಘ್ರವೇ ಬಿಡುಗಡೆ ಮಾಡುತ್ತೇವೆ ಎಂದು ಪಕ್ಷವು ಹೇಳಿದೆ
- ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜ.27ರಂದು ಪಂಜಾಬ್‌ನಲ್ಲಿ ಪ್ರಚಾರ ನಡೆಸಲಿದ್ದಾರೆ. ಪಕ್ಷದ 117 ಅಭ್ಯರ್ಥಿಗಳ ಜತೆಗೆ ಅವರು ಅಮೃತಸರದ ಸ್ವರ್ಣ ಮಂದಿರಕ್ಕೆ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಲಿದ್ದಾರೆ ಎಂದು ಪಕ್ಷದ ಪ್ರಕಟಣೆ ಹೇಳಿದೆ

ಆಧಾರ: ಪಿಟಿಐ

ರಾಮ್‌ನಗರದಿಂದ ರಾವತ್ ಕಣಕ್ಕೆ



ಹರೀಶ್ ರಾವತ್

ನವದೆಹಲಿ (ಪಿಟಿಐ): ಉತ್ತರಾಖಂಡ ವಿಧಾನಸಭಾ ಚುನಾವಣೆಗೆ 11 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಕಾಂಗ್ರೆಸ್ ಬಿಡುಗಡೆ ಮಾಡಿದ್ದು, ಮಾಜಿ ಮುಖ್ಯಮಂತ್ರಿ ಹರೀಶ್ ರಾವತ್ ಅವರು ರಾಮ್‌ನಗರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ರಾಜ್ಯದಲ್ಲಿ ಪಕ್ಷದ ಚುನಾವಣಾ ಪ್ರಚಾರ ಅಭಿಯಾನದ ಮುಖ್ಯಸ್ಥರಾಗಿರುವ ರಾವತ್, 2017ರ ಚುನಾವಣೆಯಲ್ಲಿ ಹರಿದ್ವಾರ ಗ್ರಾಮೀಣ ಮತ್ತು ಕಿಚಚಾ ಕ್ಷೇತ್ರಗಳಿಂದ ಸ್ಪರ್ಧಿಸಿ ಸೋತಿದ್ದರು.

ಅನುಕೃತಿ ಗುಸೈನ್ ರಾವತ್ ಅವರನ್ನು ಲ್ಯಾನ್ಸ್‌ಡೌನ್ ಕ್ಷೇತ್ರದಿಂದ ಕಾಂಗ್ರೆಸ್ ಕಣಕ್ಕಿಳಿಸಿದೆ. ಇವರು ಹಾರಕ್ ಸಿಂಗ್ ರಾವತ್ ಅವರ ಸೊಸೆ. ಇವರು ಬಿಜೆಪಿ ತೊರೆದು ಶುಕ್ರವಾರ ಕಾಂಗ್ರೆಸ್ ಸೇರಿದ್ದರು. ಹಾರಕ್ ಸಿಂಗ್ ರಾವತ್ ಅವರ ಉಮೇದುವಾರಿಕೆಯನ್ನು ಪಕ್ಷ ಇನ್ನೂ ಬಹಿರಂಗಪಡಿಸಿಲ್ಲ.

ಎರಡನೇ ಪಟ್ಟಿಯ ಮೂಲಕ ಒಟ್ಟು 64 ಅಭ್ಯರ್ಥಿಗಳನ್ನು ಅಖೈರುಗೊಳಿಸಲಾಗಿದೆ. ಇನ್ನೂ ಆರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವುದು ಬಾಕಿಯಿದೆ. 70 ಸದಸ್ಯಬಲದ ಉತ್ತರಾಖಂಡ ವಿಧಾನಸಭೆಗೆ ಫೆ. 14ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ.

ಪಕ್ಷವೇ ಪರಮೋಚ್ಚ: ರಿತು ಖಂಡೂರಿ

ಡೆಹ್ರಾಡೂನ್ ವರದಿ: ಯಮಕೇಶ್ವರ ಶಾಸಕಿ ರಿತು ಖಂಡೂರಿ ಅವರಿಗೆ ಉತ್ತರಾಖಂಡ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಲು ಬಿಜೆಪಿ ನಿರಾಕರಿಸಿದೆ. ಪಕ್ಷ ಟಿಕೆಟ್ ನಿರಾಕರಿಸಿರುವುದರ ಹಿಂದೆ ಒಳ್ಳೆಯ ಉದ್ದೇಶ ಇರಬಹುದು ಎಂದು ಪ್ರತಿಕ್ರಿಯಿಸಿರುವ ರಿತು, ಎಲ್ಲಕ್ಕಿಂತ ಪಕ್ಷವೇ ಪರಮೋಚ್ಚ ಎಂದಿದ್ದಾರೆ. ರಿತು ಅವರು ಮಾಜಿ ಮುಖ್ಯಮಂತ್ರಿ ಮೇಜರ್ ಜನರಲ್ ಬಿ.ಸಿ. ಖಂಡೂರಿ ಅವರ ಪುತ್ರಿ.

ರಿತು ಅವರು ಜಾಗದಲ್ಲಿ ರೇಣು ಬಿಷ್ಟ್ ಅವರನ್ನು ಕಣಕ್ಕಿಳಿಸಲು ಬಿಜೆಪಿ ನಿರ್ಧರಿಸಿದೆ. ಚುನಾವಣಾ ಪೂರ್ವ ಆಂತರಿಕ ಸಮೀಕ್ಷೆಯ ಮಾಹಿತಿ ಅಧರಿಸಿ ಪಕ್ಷ ಈ ನಿರ್ಧಾರ ತೆಗೆದುಕೊಂಡಿದೆ. ಹಾಲಿ ಶಾಸಕಿಗೆ ಗೆಲುವಿನ ಸಾಧ್ಯತೆ ಕಡಿಮೆಯಿತ್ತು ಎಂದು ಸಮೀಕ್ಷೆ ಅಭಿಪ್ರಾಯಪಟ್ಟಿತ್ತು ಎನ್ನಲಾಗಿದೆ.

ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ರೇಣು ಬಿಷ್ಟ್ ಅವರನ್ನು ರಿತು ಅವರು ಸೋಲಿಸಿದ್ದರು.

'ಒಂದು ರಾಷ್ಟ್ರ, ಒಂದೇ ಚುನಾವಣೆ' ಚರ್ಚೆ ಅಗತ್ಯ

ನವದೆಹಲಿ (ಪಿಟಿಐ): 'ಒಂದು ರಾಷ್ಟ್ರ, ಒಂದೇ ಚುನಾವಣೆ' ಹಾಗೂ 'ಒಂದೇ ಮತದಾರರ ಪಟ್ಟಿ' ಕುರಿತಂತೆ ವಿಸ್ತೃತ ಚರ್ಚೆ ಆಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ.



ನರೇಂದ್ರ ಮೋದಿ

ದೇಶದಲ್ಲಿ ಪದೇ ಪದೇ ಚುನಾವಣೆ ನಡೆಯುವುದರ ಪರಿಣಾಮ ಎಲ್ಲದರ ಮೇಲೂ ಬೀರುತ್ತದೆ. ಅಭಿವೃದ್ಧಿಯೂ ನಲುಗುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ರಾಷ್ಟ್ರೀಯ ಮತದಾರರ ದಿನವಾದ ಮಂಗಳವಾರ ಅವರು ಬಿಜೆಪಿಯ, ವಿವಿಧ ರಾಜ್ಯಗಳ ಕಾರ್ಯಕರ್ತರ ಜೊತೆ ಸಂವಾದ ನಡೆಸಿದರು.

'ಒಂದು ರಾಷ್ಟ್ರ, ಒಂದೇ ಚುನಾವಣೆ', 'ಒಂದೇ ಮತದಾರರ ಪಟ್ಟಿ' ಅಗತ್ಯವಾಗಿದೆ ಎಂದು ಪ್ರತಿಪಾದಿಸಿದ ಅವರು, ಈ ಕುರಿತು ವಿವಿಧ ಹಂತದಲ್ಲಿ ಚರ್ಚೆಯಾಗಿ ಅಭಿಪ್ರಾಯಗಳು ಮೂಡಬೇಕಾಗಿದೆ ಎಂದು ಹೇಳಿದರು.

ನೀರಸ ಮತದಾನ, ಕಳವಳ: ಸುಶಿಕ್ಷಿತರು, ಸ್ಥಿತಿವಂತರು ಇರುವ ನಗರಗಳಲ್ಲಿಯೇ ಮತದಾನ ಪ್ರಮಾಣ ಕುಸಿಯುತ್ತಿದೆ. ಪ್ರಜ್ವಲಿಸುವ ಪ್ರಜಾಪ್ರಭುತ್ವ ಹೊಂದಿರುವ ಭಾರತದಲ್ಲಿನ ಈ ಪರಿಸ್ಥಿತಿ ಬದಲಾಗಬೇಕು ಎಂದೂ ಅಭಿಪ್ರಾಯಪಟ್ಟರು.

ನಗರವಾಸಿಗಳು ಜಾಲತಾಣಗಳಲ್ಲಿ ಚುನಾವಣೆ ಕುರಿತು ಸಾಕಷ್ಟು ಚರ್ಚಿಸಿದರೂ, ಮತಹಕ್ಕು ಚಲಾಯಿಸಲು ಮತಗಟ್ಟೆಗೆ ತೆರಳುವುದಿಲ್ಲ. ಮತದಾನ ಪ್ರಮಾಣ ಶೇ 75 ಆಗುವಂತೆ ಪಕ್ಷದ ಕೆಳಹಂತದ ಕಾರ್ಯಕರ್ತರು ಶ್ರಮಿಸಬೇಕು. ಮತದಾನವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವ ಶ್ರೇಷ್ಠವಾದ ದಾನ. ಈ ಪ್ರಮಾಣವನ್ನು ಹೆಚ್ಚಿಸಲು ಚುನಾವಣಾ ಆಯೋಗವು ವಿವಿಧ ಕ್ರಮಗಳನ್ನು ಕೈಗೊಳ್ಳುತ್ತಿರುವುದೂ ಶ್ಲಾಘನೀಯ ಎಂದು ಹೇಳಿದರು.

ಉದ್ಯೋಗ ವಾಣಿ

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಪೆಗುಲಾ ಸವಾಲು ಮೀರಿದ ಬಾರ್ಟಿ

ಸೆಮಿಫೈನಲ್‌ಗೆ ನಡಾಲ್ ಲಗ್ಗೆ

ಮೆಲ್ಬರ್ನ್ (ಎಎಫ್‌ಪಿ): ಹೊಟ್ಟೆನೋವನ್ನೂ ಲೆಕ್ಕಿಸದೆ ದಿಟ್ಟ ಆಟವಾಡಿದ ರಫೆಲ್ ನಡಾಲ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಅವರ ಜಯದ ಓಟವೂ ಮುಂದುವರಿದಿದೆ.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಸ್ಪೇನ್‌ನ ನಡಾಲ್ 6-3, 6-4, 4-6, 3-6, 6-3ರಿಂದ ಕೆನಡಾದ ಡೆನಿಸ್ ಶಪೊವಲೊವ್ ಅವರನ್ನು ಮಣಿಸಿದರು. 21ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ನಡಾಲ್ ನಾಲ್ಕು ತಾಸುಗಳ ಜಿದ್ದಾಜಿದ್ದಿನ ಹಣಾಹಣಿಯಲ್ಲಿ, ಎರಡು ಸೆಟ್‌ಗಳನ್ನು ಕೈಚೆಲ್ಲಿದರೂ ಛಲಬಿಡದೆ ಕಾದಾಡಿದರು.

‘ಹೊಟ್ಟೆನೋವು ಕಾಣಿಸಿಕೊಂಡಿತ್ತು. ಹೀಗಾಗಿ ವೈದ್ಯರನ್ನು ಸಂಪರ್ಕಿಸಬೇಕಾಯಿತು. ಕೆಲವು ಮಾತ್ರೆಗಳನ್ನು ತೆಗೆದುಕೊಂಡೆ. ಐದನೇ ಸೆಟ್‌ನಲ್ಲಿ ಗೆಲುವು ಒಲಿದಿದ್ದು ನನ್ನ ಅದೃಷ್ಟ’ ಎಂದು ನಡಾಲ್ ಹೇಳಿದ್ದಾರೆ.

ಪಂದ್ಯದಲ್ಲಿ ಸೋತ ಶಪೊವಲೊವ್ ಹತಾಶೆಯಿಂದ ರ‍್ಯಾಕೆಟ್ ಮುರಿದು ಹಾಕಿದರು. ಒಂದು ಹಂತದಲ್ಲಿ ಚೇರ್ ಅಂಪೈರ್ ಅವರೊಡನೆ ವಾಗ್ವಾದಕ್ಕಿಳಿದ ಕೆನಡಾ ಆಟಗಾರ, ‘ಭ್ರಷ್ಟಾಚಾರಿ’ ಎಂದೂ ಅವರನ್ನು ಜರಿದರು.

ನಾಲ್ಕರಘಟ್ಟದಲ್ಲಿ ಜ್ವೆರೆವ್ ಅವರಿಗೆ ಇಟಲಿಯ ಮ್ಯಾಟಿಯೊ ಬೆರೆಟಿನಿ ಸವಾಲು ಎದುರಾಗಿದೆ. ಮತ್ತೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಬೆರೆಟಿನಿ 6-4, 6-4, 3-6, 3-6, 6-2ರಿಂದ ಫ್ರಾನ್ಸ್‌ನ ಗೇಲ್ ಮೊಂಫಿಲ್ಸ್ ಸವಾಲು ಮೀರಿದರು.

ಬಾರ್ಟಿ ಜಯದ ಓಟ: ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಆಶ್ಲಿ ಬಾರ್ಟಿ, ಮಹಿಳಾ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ ಅಮೆರಿಕದ ಜೆಸ್ಸಿಕಾ ಪೆಗುಲಾ ಸವಾಲು ಮೀರಿ ಸೆಮಿಫೈನಲ್ ತಲುಪಿದರು.

63 ನಿಮಿಷಗಳ ಸೆಣಸಾಟದಲ್ಲಿ ಆಸ್ಟ್ರೇಲಿಯಾ ಆಟಗಾರ್ತಿಗೆ 6-2, 6-0ರಿಂದ ಜಯ ಒಲಿಯಿತು. ನಾಲ್ಕರ ಘಟ್ಟದ ಪಂದ್ಯದಲ್ಲಿ ಅವರು ಅಮೆರಿಕದ ಮ್ಯಾಡಿಸನ್ ಕೀಸ್ ಅವರನ್ನು ಎದುರಿಸುವರು.

ಎಂಟರಘಟ್ಟದ ಮತ್ತೊಂದು ಪಂದ್ಯದಲ್ಲಿ ಮ್ಯಾಡಿಸನ್ ಕೀಸ್ ಅವರು 6-3, 6-2ರಿಂದ ಫ್ರೆಂಚ್ ಓಪನ್ ಚಾಂಪಿಯನ್ ಬಾರ್ಬರಾ ಕ್ರೇಸಿಕೊವಾ ಅವರಿಗೆ ಆಘಾತ ನೀಡಿದರು.



ರಫೆಲ್ ನಡಾಲ್ ಆಟದ ವೈಖರಿ– ಎಎಫ್‌ಪಿ ಚಿತ್ರ

ಸಾನಿಯಾ ಸವಾಲು ಅಂತ್ಯ

ಮಿಶ್ರ ಡಬಲ್ಸ್ ವಿಭಾಗದಲ್ಲಿ ಕಣಕ್ಕಿಳಿದಿದ್ದ ಭಾರತದ ಸಾನಿಯಾ ಮಿರ್ಜಾ ಮತ್ತು ಅಮೆರಿಕದ ರಾಜೀವ್ ರಾಮ್ ಸವಾಲು ಕ್ವಾರ್ಟರ್‌ಫೈನಲ್‌ನಲ್ಲಿ ಅಂತ್ಯವಾಯಿತು.

ಮಂಗಳವಾರ ನಡೆದ ಹಣಾಹಣಿಯಲ್ಲಿ ಭಾರತ–ಅಮೆರಿಕ ಜೋಡಿ 4-6, 6-7ರಿಂದ ವೈಲ್ಡ್ ಕಾರ್ಡ್ ಅರ್ಹತೆ ಗಿಟ್ಟಿಸಿದ್ದ ಆಸ್ಟ್ರೇಲಿಯಾದ ಜೈಮಿ ಫೌರ್ಲಿಸ್ ಮತ್ತು ಜೇಸನ್ ಕುಬ್ಲರ್ ಎದುರು ಸೋತರು.

ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಭಾರತದ ಸವಾಲೂ ಅಂತ್ಯವಾಯಿತು. ಈ ವರ್ಷಾಂತ್ಯದಲ್ಲಿ ಸಾನಿಯಾ ವಿದಾಯ ಹೇಳಲು ನಿರ್ಧರಿಸಿದ್ದಾರೆ.



ಝೂಕರೆಲಿ



ಸಿಲ್ವೇರಿಯಸ್



ಆಲ್ ಅಟ್ರ್ಯಾಕ್ಟಿವ್



ಏಂಜೆಲಿಕೊ

ಕಿಂಗ್‌ಫಿಷರ್ ಬೆಂಗಳೂರು ಅಲ್ಟ್ರಾ ಡರ್ಬಿ ಇಂದು

ಝೂಕರೆಲಿಗೆ ಗೆಲುವಿನ ನಿರೀಕ್ಷೆ

• ರವಿಕುಮಾರ್

ಬೆಂಗಳೂರು: ಚಳಿಗಾಲದ ಋತುವಿನ ಪ್ರತಿಷ್ಠಿತವಾದ ದ ಕಿಂಗ್‌ಫೀಷರ್ ಅಲ್ಟ್ರಾ ಡರ್ಬಿ ಬೆಂಗಳೂರು ರೇಸ್ ಬುಧವಾರ ನಡೆಯಲಿದೆ.

ಗಣರಾಜ್ಯೋತ್ಸವ ದಿನದ ರಜೆಯಂದು ರೇಸ್‌ಗೆ ಆತಿಥ್ಯ ವಹಿಸಲು ಬೆಂಗಳೂರು ಟರ್ಫ್ ಕ್ಲಬ್ ಸರ್ವಸನ್ನದ್ಧವಾಗಿದೆ. ಯುನೈಟೆಡ್ ಬ್ರೂವರೀಸ್ ಡರ್ಬಿಯನ್ನು ಪ್ರಾಯೋಜಿಸುತ್ತಿದೆ. ಈ ರೇಸ್‌ನ ಒಟ್ಟು ಬಹುಮಾನ ಮೊತ್ತ ₹ 1 ಕೋಟಿ 39.35 ಲಕ್ಷ ಆಗಿದೆ. ಇದುವರೆಗಿನ ರೇಸ್‌ಗಳಲ್ಲಿ ಇದು ದಾಖಲೆಯ ಮೊತ್ತವಾಗಿದೆ. ಇದರಲ್ಲಿ ಗೆಲ್ಲುವ ಕುದುರೆಯು ತನ್ನ ಮಾಲೀಕನಿಗೆ ಸುಮಾರು ₹ 2 ಲಕ್ಷ ಮೌಲ್ಯದ ಟ್ರೋಫಿಯೊಂದಿಗೆ ₹ 68.28 ಲಕ್ಷ ದೊರಕಿಸಿಕೊಡಲಿದೆ.

ಕಿಂಗ್‌ಸ್ಟನ್ ಕೋರ್ಟ್ ಮತ್ತು ಸಿಟಾರೆ ಕಣದಿಂದ ಹಿಂದೆ ಸರಿದಿರುವ ಕಾರಣ ಏಳು ಕುದುರೆಗಳು ಮಾತ್ರ ಸ್ಪರ್ಧಿಸಲಿವೆ.

ಇವುಗಳಲ್ಲಿ ಐದು ಗಂಡು ಮತ್ತು ಎರಡು ಹೆಣ್ಣು ಕುದುರೆಗಳು. ಈವರೆಗಿನ ಸಾಮರ್ಥ್ಯದ ಆಧಾರದಲ್ಲಿ ಪೆಸಿ ಶ್ರಾಫ್ ತರಬೇತಿಯಲ್ಲಿ ಪಳಗಿರುವ ಝೂಕರೆಲಿ ಡರ್ಬಿ ಗೆಲ್ಲುವ ನೆಚ್ಚಿನ ಕುದುರೆ ಎನಿಸಿದೆ.

ಮುಂಬೈನ ಸ್ಪರ್ಧಿ ಝೂಕರೆಲಿ ಇಂಡಿಯನ್ 2000 ಗಿನ್ನೀಸ್‌ನಲ್ಲಿ ‘ಎ ಸ್ಟಾರ್ ಈಸ್ ಬಾರ್ನ್’ಗೆ ಸೋತಿದ್ದು, ಬುಧವಾರ ಟ್ರೆವರ್ ಪಟೇಲ್ ಸವಾರಿಯಲ್ಲಿ ಡರ್ಬಿ ಗೆಲ್ಲುವ ತವಕದಲ್ಲಿದೆ. ಸ್ಥಳೀಯ ಸ್ಪರ್ಧಿಗಳಾದ ಎಟೋಷಾ ಮತ್ತು ಆಲ್ ಅಟ್ರ್ಯಾಕ್ಟಿವ್ ಸವಾಲೊಡ್ಡುವ ನಿರೀಕ್ಷೆಯಿದೆ.



ಎಟೋಷಾ



ರೆವಲ್ಯೂಷನ್



ಎಟರ್ನಲ್ ಬ್ಲೇಜ್

ಡರ್ಬಿ ಸ್ಪರ್ಧಿಗಳ ವಿವರ

ಕ್ರಮ ಸಂಖ್ಯೆ	ಕುದುರೆ	ತರಬೇತಿದಾರ	ಜಾಕಿ	ಹೊರುವ ತೂಕ (ಕೆಜಿ)	ಡ್ರಾ ಸಂಖ್ಯೆ
1	ಆಲ್ ಅಟ್ರ್ಯಾಕ್ಟಿವ್	ಬಿ.ಪೃಥ್ವಿರಾಜ್	ಸೂರಜ್ ನರೇಡು	57	03
2	ಏಂಜಲಿಕೊ	ಎಸ್.ಎಸ್. ಅಟೋಲಾಹಿ	ಅಕ್ಷಯ್‌ಕುಮಾರ್	57	02
3	ಎಟೋಷಾ	ನೀಲ್ ದಾರಾಶ	ಎ.ಸಂದೇಶ್	57	06
4	ಸಿಲ್ವೇರಿಯಸ್	ಅರ್ಜುನ್ ಮಂಗ್ಲೋರ್ಕರ್	ಶ್ರೀನಾಥ್	57	04
5	ಝೂಕರೆಲಿ	ಪಿ.ಶ್ರಾಫ್	ಪಿ.ಟ್ರೆವರ್	57	05
6	ಎಟರ್ನಲ್ ಬ್ಲೇಜ್	ಎಸ್.ಗಣಪತಿ	ಸಿ.ಎಸ್.ಜೋಧ	55.5	07
8	ರೆವಲ್ಯೂಷನ್	ಪಿ.ಶ್ರಾಫ್	ಪ್ರಶಾಂತ್ ದೆಬೆ	55.5	1

* ಕ್ರಮವಾಗಿ 7 ಮತ್ತು 9ನೇ ಕ್ರಮ ಸಂಖ್ಯೆಗಳಲ್ಲಿದ್ದ ಕಿಂಗ್‌ಸ್ಟನ್ ಕೋರ್ಟ್ ಮತ್ತು ಸೆಟಾರೆ ಸ್ಪರ್ಧಿಸುತ್ತಿಲ್ಲ

ಡರ್ಬಿ ಸಮಯ: ಸಂಜೆ 4.30

ಬೆಂಗಳೂರು ರೇಸ್

ಮಧ್ಯಾಹ್ನ 1.30ಕ್ಕೆ ಪ್ರಾರಂಭಗೊಳ್ಳಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಒನ್ಲಿ ಯೂ 7, ಸ್ಪೀಡ್ ಸೆವೆನ್ 8, ಮಿಸ್ಟಿಕಲ್ ಮರ್ಕಾಬಾ 6
2ನೇ ರೇಸ್: ಅನ್‌ಯೀಲ್ಡಿಂಗ್ 3, ಟಿಫ್ಹಾನಿ 7, ಟಾಪ್ ನ್ಯೂಸ್ 9
3ನೇ ರೇಸ್: ಡಗ್ಲಾಸ್ 3, ಅಹರ್ನೆ 4, ಟ್ಯಾಕ್ಟಿಕಲ್ ಕಮಾಂಡ್ 1
4ನೇ ರೇಸ್: ರೌಡಿ 3, ವೈಲ್ಡ್ ಎಂಪರರ್ 5, ವೆನಿಟಿಯನ್ 9
5ನೇ ರೇಸ್: ದಿ ಸಾವರಿನ್ ಆರ್ಬ್ 3, ಸೈಕಿಕ್ ವಾರಿಯರ್ 1, ವಾಚ್‌ಮೈಸ್ಟಾರ್ 5
6ನೇ ರೇಸ್: ಝೂಕರೆಲಿ 5, ಎಟೋಷಾ 3, ಆಲ್ ಅಟ್ರ್ಯಾಕ್ಟಿವ್ 1
7ನೇ ರೇಸ್: ರೀಕಾಲ್ ಆಫ್ ಯೂ 1, ಸಿಲ್ವರ್ ಡ್ಯೂ 2, ಲಕ್ಕಿ ಚಾನ್ಸ್ 5
8ನೇ ರೇಸ್: ಯೂನಿಕ್ ಸ್ಟೈಲ್ 1, ಬೆಲ್ವೆಡೆರ್ 2, ಸ್ತ್ರಿಬ್ಲಿಂಗ್ ಹಾಪರ್ 3

ಉತ್ತಮ ಬೆಟ್: ಡಗ್ಲಾಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಐಎಸ್‌ಎಲ್: ಸುನಿಲ್ ಪಡೆಗೆ ಗೆಲುವಿನ ನಿರೀಕ್ಷೆ

ಬ್ಯಾಂಬೊಲಿಮ್ (ಪಿಟಿಐ): ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಬುಧವಾರ ಚೆನ್ನೈಯಿನ್ ಎಫ್‌ಸಿ ಸವಾಲು ಎದುರಿಸಲಿದೆ.

ಈ ಆವೃತ್ತಿಯಲ್ಲಿ ಮೊದಲ ಗೋಲು ದಾಖಲಿಸಿದ್ದ ನಾಯಕ ಸುನಿಲ್ ಚೆಟ್ರಿ ಆಟದ ನೆರವಿನಿಂದ ಬೆಂಗಳೂರು, ಕಳೆದ ಪಂದ್ಯದಲ್ಲಿ ಎಫ್‌ಸಿ ಗೋವಾ ಎದುರು ಡ್ರಾ ಸಾಧಿಸಿತ್ತು. ಈ ಪಂದ್ಯದಲ್ಲಿ ಗೆಲುವಿನ ಭರವಸೆಯಲ್ಲಿದೆ.

ಸದ್ಯ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿರುವ ಚೆಟ್ರಿ ಪಡೆಯು ಈ ಹಣಾಹಣಿಯಲ್ಲಿ ಗೆದ್ದರೆ ಅಗ್ರ ನಾಲ್ಕರ ಪಟ್ಟಿಗೆ ಸಮೀಪಿಸಲಿದೆ. ಗೋಲಿನ ಬರ ನೀಗಿಸಿಕೊಂಡಿರುವ ಚೆಟ್ರಿ ಬಗ್ಗೆ ತಂಡದ ಕೋಚ್ ಮಾರ್ಕೊ ಪೆಜೌಲಿ ಸಂತಸ ವ್ಯಕ್ತಪಡಿಸಿದ್ದಾರೆ. ಆದರೆ ಗಾಯದ ಸಮಸ್ಯೆ ತಂಡವನ್ನು ಕಾಡುತ್ತಿದೆ.

‘ನಮ್ಮ ತಂಡಕ್ಕೆ ಕೆಲವೊಂದು ಸಮಸ್ಯೆಗಳಿವೆ. ಆಶಿಕ್ ಕುರುಣಿಯನ್ ಅವರು ಗಾಯಗೊಂಡಿದ್ದಾರೆ. ಕ್ಲೀಟನ್ ಸಿಲ್ವಾ ಆಡುವುದು ಅನುಮಾನ. ಗಾಯಗೊಂಡಿರುವವರೊಂದು ಮುಸಾವು ಕಿಂಗ್ ಈ ಋತುವಿನ ಉಳಿದ ಟೂರ್ನಿಗಳಲ್ಲಿ ಕಣಕ್ಕಿಳಿಯುವುದು ಖಚಿತವಿಲ್ಲ’ ಎಂದು ಪೆಜೌಲಿ ಹೇಳಿದ್ದಾರೆ.

ಚೆನ್ನೈಯಿನ್ 12 ಪಂದ್ಯಗಳಿಂದ 18 ಪಾಯಿಂಟ್ಸ್ ಕಲೆಹಾಕಿದ್ದು ನಾಲ್ಕನೇ ಸ್ಥಾನದಲ್ಲಿದೆ. ಈ ಪಂದ್ಯ ಗೆದ್ದು ಅಗ್ರಸ್ಥಾನಕ್ಕೇರುವ ಗುರಿಯನ್ನು ಇಟ್ಟುಕೊಂಡಿದೆ.

ಡ್ರಾ ಪಂದ್ಯದಲ್ಲಿ ಮುಂಬೈ-ನಾರ್ತ್‌ಈಸ್ಟ್: ಮುಂಬೈ ಸಿಟಿ ಮತ್ತು ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡಗಳ ನಡುವೆ ಮಂಗಳವಾರ ನಡೆದ ಪಂದ್ಯವು 1–1ರಿಂದ ಡ್ರಾನಲ್ಲಿ ಅಂತ್ಯವಾಯಿತು.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಸುನಿಲ್ ಚೆಟ್ರಿ– ಪಿಟಿಐ ಚಿತ್ರ

ಪ್ರೊ ಕಬಡ್ಡಿ ಲೀಗ್: ಟೈ ಪಂದ್ಯದಲ್ಲಿ ಹರಿಯಾಣ

ಬೆಂಗಳೂರು: ಹರಿಯಾಣ ಸ್ಟೀಲರ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳ ನಡುವಣ ಪಂದ್ಯವು ರೋಚಕ ಟೈನಲ್ಲಿ ಅಂತ್ಯವಾಯಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಹರಿಯಾಣ 39–39ರಿಂದ ಟೈಟನ್ಸ್ ವಿರುದ್ಧ ಸಮಬಲ ಸಾಧಿಸಿತು.

ಅರ್ಧವಿರಾಮದ ವೇಳೆಗೆ ಹರಿಯಾಣ (20–19) ತಂಡವು ಒಂದು ಅಂಕದಿಂದ ಮುನ್ನಡೆ ಯಲ್ಲಿತ್ತು. ಕೊನೆಯವರೆಗೂ ಇದೇ ರೀತಿಯ ಹಣಾಹಣಿ ನಡೆಯಿತು.

ಹರಿಯಾಣ ತಂಡದ ರೇಡರ್ ವಿಕಾಶ್ ಖಂಡೊಲಾ ಹತ್ತು ಅಂಕ ಗಳಿಸಿದರು. ರೋಹಿತ್ ಗುಲಿಯಾ ಮತ್ತು ವಿನಯ್ ತಲಾ ಎಂಟು ಅಂಕ ಗಳಿಸಿದರು. ಟೈಟನ್ಸ್ ತಂಡದ ಅಂಕಿತ್ ಬೆನಿವಾಲ್ 10 ಅಂಕ ಗಳಿಸಿ ಮಿಂಚಿದರು. ಅವರಿಗೆ ರೋಹಿತ್ ಕುಮಾರ್ (8) ಮತ್ತು ಸಂದೀಪ್ ಖಂಡೋಲಾ (6) ಉತ್ತಮ ಜೊತೆ ನೀಡಿದರು.

ಬುಧವಾರ ನಡೆಯುವ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಮತ್ತು ಯು ಮುಂಬಾ ಸೆಣಸಲಿವೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	14	8	5	1	46
ದಬಂಗ್ ಡೆಲ್ಲಿ	13	7	4	2	43
ಹರಿಯಾಣ ಸ್ಟೀಲರ್ಸ್	14	6	5	3	42
ಬೆಂಗಾಲ್ ವಾರಿಯರ್ಸ್	14	7	6	1	41
ಪಟ್ನಾ ಪೈರೇಟ್ಸ್	11	7	3	1	40
ಯುಪಿ ಯೋಧಾ	13	5	5	3	39
ಯು ಮುಂಬಾ	12	4	3	5	36
ಜೈಪುರ ಪಿಂಕ್ ಪ್ಯಾಂಥರ್ಸ್	13	5	6	2	35
ತಮಿಳ್ ತಲೈವಾಸ್	12	3	3	6	34
ಪುಣೇರಿ ಪಲ್ಟನ್	13	6	7	-	32
ಗುಜರಾತ್ ಜೈಂಟ್ಸ್	11	3	5	3	28
ತೆಲುಗು ಟೈಟನ್ಸ್	14	1	10	3	22

(ಮಂಗಳವಾರದ ಪಂದ್ಯದ ಅಂತ್ಯಕ್ಕೆ)

ರ‍್ಯಾಂಕಿಂಗ್: ಶೆಫಾಲಿಗೆ ಅಗ್ರಸ್ಥಾನ

ದುಬೈ (ಪಿಟಿಐ): ಭಾರತದ ಕ್ರಿಕೆಟ್ ಆಟಗಾರ್ತಿ ಶೆಫಾಲಿ ವರ್ಮಾ ಅಂತರರಾಷ್ಟ್ರೀ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಹಿಳೆಯರ ಟಿ20 ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ.

ಮಂಗಳವಾರ ಪ್ರಕಟವಾದ ಪಟ್ಟಿಯ ಬ್ಯಾಟಿಂಗ್ ವಿಭಾಗದಲ್ಲಿ ಶೆಫಾಲಿ ಮೊದಲ ಸ್ಥಾನ ಗಳಿಸಿದ್ದಾರೆ. ಆಸ್ಟ್ರೇಲಿಯಾದ ಬೆತ್ ಮೂನಿ ಮತ್ತು ಮ್ಯಾಗ್ ಲ್ಯಾನಿಂಗ್ ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದ್ದಾರೆ. ಭಾರತದ ಸ್ಮೃತಿ ಮಂದಾನ ನಾಲ್ಕನೇ ಸ್ಥಾನದಲ್ಲಿದ್ದಾರೆ.

ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಮತ್ತು ಸೂಜಿ ಬೇಟ್ಸ್ ಕ್ರಮವಾಗಿ 5 ಹಾಗೂ 7ನೇ ಸ್ಥಾನ ಪಡೆದಿದ್ದಾರೆ. ಶ್ರೀಲಂಕಾದ ಚಾಮರಿ ಅಟಪಟ್ಟು ಅಗ್ರ 10ರೊಳಗೆ ಸ್ಥಾನ ಗಿಟ್ಟಿಸಿದ್ದಾರೆ. ಅವರು ಕಾಮನ್‌ವೆಲ್ತ್ ಗೇಮ್ಸ್ ಕ್ವಾಲಿಫೈಯರ್‌ನಲ್ಲಿ 221 ರನ್‌ಗಳನ್ನು ಕಲೆಹಾಕಿದ್ದರು. ಇದರೊಂದಿಗೆ ಎಂಟನೇ ಸ್ಥಾನ ಪಡೆದಿದ್ದಾರೆ.

ನೀರಜ್‌ಗೆ ‘ಡಬಲ್’ ಸಂಭ್ರಮ

ಒಂಬತ್ತು ಕ್ರೀಡಾ ಸಾಧಕರಿಗೆ ಗೌರವ: ದೇವೇಂದ್ರಗೆ ಪದ್ಮಭೂಷಣ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪುರುಷರ ಜಾವೆಲಿನ್ ಥ್ರೋ ಚಿನ್ನದ ಪದಕ ವಿಜೇತ ಅಥ್ಲೀಟ್ ನೀರಜ್ ಚೋಪ್ರಾಗೆ ಮಂಗಳವಾರ ಡಬಲ್ ಸಂಭ್ರಮ.

ಸೇನೆಯಲ್ಲಿ ಸುಬೇದಾರ್ ಆಗಿರುವ ಅವರಿಗೆ ಪರಮ ವಿಶಿಷ್ಟ ಸೇವಾ ಪದಕ ಒಲಿಯಿತು. ಜೊತೆಗೆ ಕೇಂದ್ರ ಸರ್ಕಾರವು ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಭಾರತೀಯ ಸೇನೆಯ 4 ರಜಪುತಾನಾ ರೈಫಲ್ಸ್‌ನಲ್ಲಿ ಚೋಪ್ರಾ ಸುಬೇದಾರ್ ಆಗಿದ್ದಾರೆ. ‘ಗಣರಾಜ್ಯೋತ್ಸವದ ಅಂಗವಾಗಿ ಸೇನೆಯಲ್ಲಿ ಗಮನಾರ್ಹ ಸೇವೆ ಮಾಡಿದವರಿಗೆ ವಿಶಿಷ್ಟ ಪುರಸ್ಕಾರ ನೀಡಲಾಗುತ್ತದೆ. ಪುಣೆಯ ಆರ್ಮಿ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಮಿಷನ್ ಒಲಿಂಪಿಕ್ಸ್ ಘಟಕದಲ್ಲಿ ತರಬೇತಿ ಪಡೆಯಲು ಅವರು ಆಯ್ಕೆ ಯಾಗಿದ್ದರು’ ಎಂದು ಮೂಲಗಳು ತಿಳಿಸಿವೆ.

ದೇವೇಂದ್ರಗೆ ಪದ್ಮಭೂಷಣ: 2016 ರಿಯೊ ಪ್ಯಾರಾಲಿಂಪಿಕ್ಸ್‌ನ ಜಾವೆಲಿನ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ದೇವೇಂದ್ರ ಝಜಾರಿಯಾ ಅವರಿಗೆ ಪದ್ಮಭೂಷಣದಿಂದ ಗೌರವಿಸಲಾಗಿದೆ.

ನೀರಜ್ ಚೋಪ್ರಾ, ಭಾರತ ಮಹಿಳಾ ಹಾಕಿ ತಂಡದ ವಂದನಾ ಕಟಾರಿಯಾ, ಪ್ಯಾರಾ ಶೂಟರ್ ಅವನಿ ಲೇಖರಾ, ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಪ್ರಮೋದ್ ಭಗತ್, ಪ್ಯಾರಾ ಜಾವೆಲಿನ್ ಥ್ರೊ ಪಟು ಸುಮಿತ್ ಅಂಟಿಲ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ಸಂದಿದೆ.

ಕೇರಳದ 93 ವರ್ಷದ ಕಳರಿಪಟ್ಟು ದಂತಕತೆ ಶಂಕರನಾರಾಯಣ ಮೆನನ್ ಚುಂಡಾಯಿಲ್, ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ, ಗೋವಾದ ಬ್ರಹ್ಮಾನಂದ ಸಂಕವಾಳಕರ್ ಅವರಿಗೂ ಪದ್ಮಶ್ರೀ ಗೌರವ ನೀಡಲಾಗಿದೆ.

ಭಾರತದ ಶ್ರೇಷ್ಠ ಗೋಲ್‌ಕೀಪರ್‌ಗಳಲ್ಲಿ ಒಬ್ಬರಾಗಿದ್ದ ಬ್ರಹ್ಮಾನಂದ 1983–86ರ ಅವಧಿಯಲ್ಲಿ ರಾಷ್ಟ್ರೀಯ ತಂಡದ ಸಾರಥ್ಯ ವಹಿಸಿದ್ದರು.



ಸುಮಿತ್ ಅಂಟಿಲ್



ಅವನಿ ಲೇಖರಾ




ನೀರಜ್ ಚೋಪ್ರಾ



ವಂದನಾ



ದೇವೇಂದ್ರ ಝಜಾರಿಯಾ



ಪ್ರಮೋದ್ ಭಗತ್

ಪ್ರೈಮ್ ವಾಲಿಬಾಲ್: ಟಾರ್ಪಿಡೊಸ್ ತಂಡಕ್ಕೆ ರಂಜೀತ್ ನಾಯಕ

ಬೆಂಗಳೂರು: ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಆಡುವ ಬೆಂಗಳೂರು ಟಾರ್ಪಿಡೊಸ್ ತಂಡಕ್ಕೆ ರಂಜೀತ್ ಸಿಂಗ್ ಅವರು ನಾಯಕರಾಗಿ ಆಯ್ಕೆಯಾಗಿದ್ದಾರೆ. ಮಂಗಳವಾರ ಕ್ಲಬ್ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದೆ.

ಹೈದರಾಬಾದ್‌ನ ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ಫೆಬ್ರುವರಿ 5ರಿಂದ ಲೀಗ್ ನಡೆಯಲಿದೆ. ಪಂಜಾಬ್‌ನ ರಂಜೀತ್, ಭಾರತ ತಂಡದ ಪರ 50ಕ್ಕಿಂತ ಹೆಚ್ಚು ಪಂದ್ಯಗಳನ್ನು ಆಡಿದ್ದಾರೆ. 2012ರಲ್ಲಿ 22ನೇ ವಯಸ್ಸಿನಲ್ಲಿ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿರು. ಹರಾಜು ಪ್ರಕ್ರಿಯೆಯಲ್ಲಿ ಟಾರ್ಪಿಡೊಸ್ ಅವರನ್ನು ₹ 4.4 ಲಕ್ಷಕ್ಕೆ ತನ್ನದಾಗಿಸಿಕೊಂಡಿತ್ತು.



ರಂಜೀತ್ ಸಿಂಗ್

ರೋಹಿತ್ ಫಿಟ್‌ನೆಸ್ ಟೆಸ್ಟ್ ಇಂದು

ನವದೆಹಲಿ (ಪಿಟಿಐ): ಭಾರತ ಸೀಮಿತ ಓವರ್‌ಗಳ ತಂಡದ ನಾಯಕ ರೋಹಿತ್ ಶರ್ಮಾ ಗಾಯದಿಂದ ಸಂಪೂರ್ಣ ಚೇತರಿಸಿಕೊಂಡಿದ್ದಾರೆ. ಬುಧವಾರ ಅವರು ಬೆಂಗಳೂರಿನ ಎನ್‌ಸಿಎದಲ್ಲಿ ಫಿಟ್‌ನೆಸ್ ಪರೀಕ್ಷೆಗೆ ಹಾಜರಾಗಲಿದ್ದಾರೆ.

ಫೆಬ್ರುವರಿ 6ರಿಂದ ಭಾರತದಲ್ಲಿಯೇ ನಡೆಯಲಿರುವ ವೆಸ್ಟ್‌ಇಂಡೀಸ್ ವಿರುದ್ಧದ ಏಕದಿನ ಮತ್ತು ಟಿ20 ಸರಣಿಗಳಲ್ಲಿ ತಂಡವನ್ನು ಮುನ್ನಡೆಸುವ ನಿರೀಕ್ಷೆ ಇದೆ. ಇದೇ ವಾರಾಂತ್ಯದಲ್ಲಿ ಆಯ್ಕೆ ಸಮಿತಿ ಸಭೆಯು ನಡೆಯಲಿದ್ದು, ತಂಡದ ಆಯ್ಕೆ ನಡೆಯಲಿದೆ. ಮಧ್ಯಮವೇಗಿ, ಅನುಭವಿ ಭುವನೇಶ್ವರ್ ಕುಮಾರ್ ಮತ್ತು ಆರ್. ಅಶ್ವಿನ್ ಅವರು ದಕ್ಷಿಣ ಆಫ್ರಿಕಾದಲ್ಲಿ ನಡೆದ ಏಕದಿನ ಸರಣಿಯಲ್ಲಿ ಉತ್ತಮ ಸಾಧನೆ ತೋರಿಲ್ಲ. ಆದ್ದರಿಂದ ಅವರನ್ನು ವಿಂಡೀಸ್ ಎದುರಿನ ಸರಣಿಗೆ ಕೈಬಿಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.



ರೋಹಿತ್ ಶರ್ಮಾ

ಏಷ್ಯಾ ಕಪ್ ಹಾಕಿ ಸೆಮಿಫೈನಲ್ ಹಣಾಹಣಿ ಇಂದು

ಸವಿತಾ ಬಳಗಕ್ಕೆ ಕೊರಿಯಾ ಸವಾಲು

ಮಸ್ಕತ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಬುಧವಾರ ನಡೆಯಲಿರುವ ಏಷ್ಯಾ ಕಪ್ ಮಹಿಳೆಯರ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಕೊರಿಯಾ ಸವಾಲನ್ನು ಎದುರಿಸಲಿದೆ.

ಟೂರ್ನಿಯ ಎ ಗುಂಪಿನ ಮೊದಲ ಪಂದ್ಯದಲ್ಲಿ ಮಲೇಷ್ಯಾ ವಿರುದ್ಧ ಜಯಿಸಿದ್ದ ಸವಿತಾ ಪೂನಿಯಾ ಬಳಗವು ಎರಡನೇ ಹಣಾಹಣಿಯಲ್ಲಿ ಜಪಾನ್ ಎದುರು ಸೋತಿತ್ತು. ಅದರ ನಂತರ ಪುಟದೆದ್ದ ತಂಡವು ಸಿಂಗಪುರ ವಿರುದ್ಧ 9–1ರಿಂದ ಭರ್ಜರಿ ಜಯ ಸಾಧಿಸಿ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿತು.


ಇದೀಗ ಎಫ್‌ಐಎಚ್ ರ‍್ಯಾಂಕ್‌ನಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ತಂಡವು 11ನೇ ಸ್ಥಾನದಲ್ಲಿರುವ ಕೊರಿಯಾವನ್ನು ಎದುರಿಸಲಿದೆ.

ಪ್ರಸ್ತುತ ವರ್ಷದಲ್ಲಿ ಭಾರತ ತಂಡವು ಮಹತ್ವದ ಟೂರ್ನಿಗಳಲ್ಲಿ ಆಡಲಿದೆ. ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್, ಏಷ್ಯನ್ ಗೇಮ್ಸ್, ಎಫ್‌ಐಎಚ್ ವಿಶ್ವಕಪ್ ಮತ್ತು ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ತಂಡವು ಆಡಲಿದೆ.

ಅದರಿಂದಾಗಿ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರೆ ಮುಂದಿನ ಸ್ಪರ್ಧೆಗಳಲ್ಲಿ ತಂಡದ ಆತ್ಮವಿಶ್ವಾಸ ಹೆಚ್ಚಲಿದೆ. ಆದ್ದರಿಂದ ತಂಡವು ಸೆಮಿಫೈನಲ್‌ನಲ್ಲಿ ಗೆಲ್ಲುವತ್ತ ಚಿತ್ತ ನೆಟ್ಟಿದೆ. ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದು ಇತಿಹಾಸ ರಚಿಸಿದ್ದ ಭಾರತದ ವನಿತೆಯರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಲು ಈ ವರ್ಷದ ಮಹತ್ವದ ಟೂರ್ನಿಗಳಲ್ಲಿ ಗೆಲ್ಲುವುದು ಮಹತ್ವದ್ದಾಗಲಿದೆ.

ಗುರ್ಜಿತ್ ಕೌರ್, ವಂದನಾ ಕಟಾರಿಯಾ, ನವನೀತ್ ಕೌರ್ ಉತ್ತಮ ಲಯದಲ್ಲಿದ್ದಾರೆ. 2019ರಲ್ಲಿ ಭಾರತ ಮತ್ತು ಕೊರಿಯಾ ತಂಡಗಳು ಮೂರು ಪಂದ್ಯಗಳನ್ನು ಆಡಿದ್ದವು. ಆಗ ಭಾರತ ತಂಡವು 1–2ರಿಂದ ಸರಣಿಯಲ್ಲಿ ಹಿನ್ನಡೆ ಅನುಭವಿಸಿತ್ತು.

ಬುಧವಾರ ನಡೆಯುವ ಇನ್ನೊಂದು ಸೆಮಿಫೈನಲ್‌ನಲ್ಲಿ ಜಪಾನ್ ತಂಡವು ಚೀನಾ ವಿರುದ್ಧ ಸೆಣಸಲಿದೆ.



ಗುರ್ಜಿತ್ ಕೌರ್